ಐಕ್ಯರಂಗ


ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 25

ಜೂನ್ 22, 2003 ಬೆಲೆ ರೂ. 3.00



ನೀರು....
ನದಿ ಮಾರಾಟ



ವಾಜಪೇಯಿ ಅಥವಾ ಅಡ್ವಾಣಿ ? ಎಂಬ ಬಿಜೆಪಿ ನಾಟಕ


ಕೃಷ್ಣಾ : ಜಮೀನು ಪರಭಾರೆ ಸಮಸ್ಯೆ ಮರೆಸುವ ಸರ್ಕಾರ

ಸಮೂಹ ನಾಶದ ಅಸ್ತ್ರಗಳು ಸಿಕ್ಕಿದೆಲ್ಲಿ ?

ಹಲವು ಕಾಲಂಗಳು....

- ಈ ವಾರ ಕರ್ನಾಟಕ
- ಇತಿಹಾಸದ ಪುಟಗಳಿಂದ
- ಈ ಪುಸ್ತಕ ಓದಿ
- ಸಿನಿಮಾ
- ಮಾಧ್ಯಮ ಮಂಥನ
- ಕ್ರೀಡೆ....

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

31



ಕಳೆದ ಸಂಚಿಕೆಯಲ್ಲಿ ಭಾರತದಲ್ಲಿ ಐಎನ್‌ಎ ಹೊಂದಿರುವ ಎಲ್ಲಾ ಸಂಪನ್ಮೂಲಗಳೊಂದಿಗೆ ಎ.ಸಿ.ಚಟರ್ಜಿಯವರ ನೆರವು ಕೇಳಿದ ಮೇಜರ್, ಬಂಡಾಯವೆಂದರೆ ಎದುರಿ ಸಾಯುವ ಕಾಂಗ್ರೆಸ್ ಸಶಸ್ತ್ರ ಪಡೆಗಳ ಹೊರಗಿನ ಚಟುವಟಿಕೆ ಕೇಂದ್ರವಾದ ಜನರಲ್ ಮನೆ ಮತ್ತು 1946 ಆಗಸ್ಟ್ 15 ರಂದು ಕಾಂಗ್ರೆಸ್‌ವೊಂದೇ ಮಧ್ಯಂತರ ಸರ್ಕಾರ ರಚಿಸಿದ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: **ವಿಶ್ವ ಕುಂದಾಪುರ**

ಕೋಮು ಘರ್ಷಣೆ ಬೀದಿಯಿಂದ ಸರಕಾರಕ್ಕೆ

ಮೊದಲು ಕೇವಲ ಕಾಂಗ್ರೆಸ್ ಸರ್ಕಾರ ರಚಿಸಿ ಅನಂತರ ಅದರಲ್ಲಿ ಮುಸ್ಲಿಂಲೀಗ್ ಅನ್ನು ತರಲು ಬ್ರಿಟೀಷರು ಮುಂಚಿತವಾಗಿಯೇ ಯೋಜಿಸಿದ್ದರು. ರಾಜಕೀಯವಾಗಿ ಒಡೆದುಹೋದ ಮಧ್ಯಂತರ ಸರಕಾರ ಇರಬೇಕು ಹಾಗೂ ನಾಗರೀಕ ಮತ್ತು ಸೇನಾ ಸೇವೆಗಳಲ್ಲಿ ಕೋಮುವಾದಿ ವಿಷದ ಬೀಜ ಬಿತ್ತಬೇಕು ಎನ್ನುವುದು ಬ್ರಿಟೀಷರ ಷಡ್ಯಂತ್ರದ ಉದ್ದೇಶವಾಗಿತ್ತು.

ಇದುವರೆಗೆ ಬೀದಿಗಳಿಗಷ್ಟೇ ಸೀಮಿತವಾಗಿದ್ದ ಕೋಮು ಘರ್ಷಣೆಯನ್ನು ಸರಕಾರದ ಒಳಗೂ ತರಲಾಯಿತು. ಎಲ್ಲವೂ ಸಾಮ್ರಾಜ್ಯಶಾಹಿಗಳು ಲೆಕ್ಕಾಚಾರ ಹಾಕಿದ ಪ್ರಕಾರವೇ ನಡೆಯಿತು. ಯಾವುದೇ ರಾಜಕೀಯ ಅಧಿಕಾರವಿಲ್ಲದ ಖಾದಿಧಾರಿ ಹಾಗೂ ತುರ್ಕಿ ಟೋಪಿ ತೊಟ್ಟವರ ಸರಕಾರದ ನೇತೃತ್ವದಲ್ಲಿ ಸ್ವತಃ ನಮ್ಮದೇ ಜನರ ಹತ್ಯಾಕಾಂಡಗಳು ನಡೆದವು. ಬಹುಶಃ ಇದು ಉದ್ದೇಶಪೂರ್ವಕವೂ ಇರಬಹುದು ಅಥವಾ ಬಹುಶಃ ಅದನ್ನು ತಡೆಯುವ ಅಸಾಮರ್ಥ್ಯ ದಿಂದಲೂ ಇರಬಹುದು.

'ಆಪರೇಷನ್ ಅಸೈಲಮ್' ನ ಅಂಶಗಳನ್ನು ತಕ್ಷಣವೇ ನಮ್ಮ ಹೊರಗಿನ ಸಂಪರ್ಕಗಳಿಗೆ ರವಾನಿಸ ಲಾಯಿತು. ಅವುಗಳನ್ನು ಪ್ರಕಟಿಸಿದ ತಕ್ಷಣವೇ ಬ್ರಿಟೀಷರು ನನ್ನ ಮೇಲೆ ಎರಗುತ್ತಾರಾದ್ದರಿಂದ ಈ ರೀತಿ ಮಾಡುವುದು ವೈಯಕ್ತಿಕವಾಗಿ ನನಗೆ ಅಪಾಯಕಾರಿಯಾಗಿತ್ತು.

ಅದನ್ನು ಪ್ರಕಟಿಸ ಬಾರದೆಂದು ಹೊರಗಿನ ರಾಜಕೀಯ ಸಂಪರ್ಕಗಳಿಗೆ ಸಂಘಟನೆ ಸೂಚಿಸಿತ್ತು; ಆದರೆ ಕಾರ್ಯಾಚರಣೆಯ ಉದ್ದೇಶವನ್ನು ಕಾಂಗ್ರೆಸ್‌ನ ಜವಾಬ್ದಾರಿಯುತ ರಾಜಕೀಯ ನಾಯಕರಿಗೆ ತಿಳಿಸಬೇಕಾಗಿತ್ತು. ಕಾರ್ಯಾಚರಣೆಯ ಅಂಶಗಳನ್ನು ತಿಳಿಸುವುದರಿಂದ ಕಾಂಗ್ರೆಸ್ಸಿಗರು ಎಚ್ಚರಗೊಳ್ಳುತ್ತಾರೆ ಹಾಗೂ ದಬ್ಬಾಳಿಕೆಯ ಬ್ರಿಟೀಷರ ದುಷ್ಟ ಯೋಜನೆಯನ್ನು ಅರಿಯುತ್ತಾರೆಂಬ ನಮ್ಮ ನಿರೀಕ್ಷಿತ ಆಶಯ ಹುಸಿಯಾಯಿತು.

ಒಡೆದ ಭ್ರಮೆಯ ಗುಳ್ಳೆ

ಕಮ್ಯುನಿಸ್ಟ್ ಪಕ್ಷ 'ಆಪರೇಷನ್ ಅಸೈಲಮ್' ಪ್ರಕಟಿಸಿ ಪ್ರಸಾರಗೊಳಿಸಿದ ನಂತರ ನಮ್ಮ ಭ್ರಮೆಯ ಗುಳ್ಳೆ ಒಡೆಯಿತು. ಭಾರತೀಯ ಪೋಲೀಸರು ದೇಶಾದ್ಯಂತ ಕಮ್ಯುನಿಸ್ಟ್ ಪಕ್ಷದ ಕಚೇರಿಗಳ ಮೇಲೆ ದಾಳಿ ಮಾಡಿ ಶೋಧಿಸಲಾಯಿತು. ಮಧ್ಯಂತರ ಸಹಕಾರ ಅಧಿಕಾರದಲ್ಲಿತ್ತು. ಪಟೇಲ್ ಗೃಹಮಂತ್ರಿ ಯಾಗಿದ್ದರು. ಈ ಶೋಧಕ್ಕೆ ತಾನು ಆದೇಶ ನೀಡಿಯೇ ಇಲ್ಲ ಎಂದು ಪಟೇಲ್ ಹೇಳಿದರು. ಇದು ತೀರಾ ಹಾಸ್ಯಾಸ್ಪದವೇ ಸೈ! ಮಾತೃಭೂಮಿಯ ವಿರುದ್ಧ ಸಾಮ್ರಾಜ್ಯಶಾಹಿಗಳು ರೂಪಿಸಿದ ದುಷ್ಟ ಹುನ್ನಾರವೊಂದನ್ನು ಬಹಿರಂಗಪಡಿಸಿದ್ದ ದೇಶಪ್ರೇಮಿಗಳನ್ನು ಬಂಧಿಸಿದ ದಿನವೇ ನಮಗೆ ಕಾಂಗ್ರೆಸ್‌ನ ವರ್ಗಗುಣ ಅರ್ಥವಾಯಿತು.

> **ದೊಂಬಿ- ಗಲಭೆಗಳನ್ನು ನಿಯಂತ್ರಿಸಲು ನಿಯೋಜಿಸಿದ ಬ್ರಿಟೀಷ್ ಸೈನಿಕರು ಹಾಗೆ ಮಾಡುವ ಬದಲು ಕೈಕಟ್ಟಿಕೊಂಡು ನಿಂತುನೋಡಿದರು. ಹುಡುಗಿಯರನ್ನು ಮನೆಗಳಿಂದ ಹೊರಗೆಳೆದು ತಂದು ಬಹಿರಂಗವಾಗಿ ಅತ್ಯಾಚಾರ ನಡೆಸುವುದನ್ನು, ಮಹಿಳೆಯರ ಮರ್ಮಾಂಗಕ್ಕೆ ಭರ್ಜಿ ತೂರಿಸುವುದನ್ನು ಕಂಡು ಸಂತಸಪಟ್ಟರು.**

ಭಾರತದಲ್ಲಿರುವ ಐ.ಎನ್.ಎ.ಯ ಬಹುದೊಡ್ಡ ಭಾಗ ಬಂಡಾಯದಲ್ಲಿ ಸೇರಲಿದೆ. ನಾನೂ ಇತರ ಕೆಲವು ಪ್ರಮುಖ ಸಹೋದ್ಯೋಗಿಗಳ ಜತೆ ನಿಮ್ಮ ಜತೆ ಇರುತ್ತೇನೆ. ನಿಮ್ಮ ಸಿದ್ಧತೆಗಳನ್ನು ಮುಂದುವರೆಸಿ" ಇದು ಮೇಜರ್ ಜನರಲ್ ಚಟರ್ಜಿ ತುಂಬಿದ ಧೈರ್ಯ ಹಾಗೂ ನೀಡಿದ ಭರವಸೆ.

ಒಡೆದುಹೋದ ಮಧ್ಯಂತರ ಸರಕಾರ ಇರಬೇಕು. ಸೈನ್ಯ ಹಾಗೂ ನಾಗರೀಕ ಸೇವೆಗಳಲ್ಲಿ ಕೋಮುವಾದಿ ವಿಷಬೀಜ ಬಿತ್ತಬೇಕು ಎನ್ನುವುದು ಬ್ರಿಟೀಷರ ಕುಟಿಲ ಉದ್ದೇಶವಾಗಿತ್ತು.

ಕೊಲೆ- ಸುಲಿಗೆ, ಅತ್ಯಾಚಾರದ ರುದ್ರನರ್ತನ

ರಾಷ್ಟ್ರೀಯ ವಿಮೋಚನೆ ಹೋರಾಟದಲ್ಲಿ ವರ್ಗ ಸಂಘರ್ಷದ ಘೋರತೆಯನ್ನು ನಾನು ಜೀವನದಲ್ಲಿ ಅದೇ ಮೊದಲ ಬಾರಿಗೆ ನೋಡಿದೆ. ಶೋಷಿತ ಬ್ಯಾರಕ್ ಹುಡುಗನಾಗಿದ್ದ ನನ್ನಲ್ಲಿ ಸುಪ್ತವಾಗಿ ಅಡಗಿದ್ದ ಕೃಷಿಕ ಎಚ್ಚರಗೊಂಡ; ದ್ರೋಹವನ್ನು ಅದರ ಪೂರ್ಣ ನಗ್ನ ಸ್ವರೂಪದಲ್ಲಿ ಕಾಣಲು ನನಗೆ ಸಾಧ್ಯವಾಯಿತು.

ಮಧ್ಯಂತರ ಸರಕಾರದ ಪ್ರಪ್ರಥಮ ದಿನದಿಂದಲೇ ಪಟೇಲರು ಕಮ್ಯುನಿಸ್ಟರ ಬೇಟೆಯಲ್ಲಿ ತೊಡಗಿದರು.

ಆಗಸ್ಟ್ 16 ರಂದು ಕೋಲ್ಕೊತ್ತಾದಲ್ಲಿ ಗಲಭೆಗಳು ಆರಂಭವಾದವು. ಬಿಳಿಯರ ಮಾಲಿಕತ್ವದ 'ಸ್ಟೇಟ್ಸ್‌ಮನ್' ಪತ್ರಿಕೆ ಇದನ್ನು 'ಕೊಲ್ಕೊತ್ತಾದ ಮಹಾನ್ ಕೊಲೆಗಳು' ಎಂದು ವರ್ಣಿಸಿತು.

ಆ ದಿನ ಸಂಜೆ ಬ್ರಿಟೀಷ್ ಅಧಿಕಾರಿಗಳ ಮೆಸ್‌ನಲ್ಲಿ ಹಬ್ಬದ ವಾತಾವರಣವಿತ್ತು. ಕೊಲ್ಕೊತ್ತಾದ ಮಹಾನ್ ಕೊಲೆಗಳಿಗಾಗಿ ಅವರು ಕಂಠಪೂರ್ತಿ ಕುಡಿದರು, ಇದೇ ರೀತಿಯ ಇನ್ನಷ್ಟು ಹತ್ಯಾಕಾಂಡಗಳು ನಡೆಯಲಿ ಎಂದು ಹಾರೈಸಿದರು.

ಗಲಭೆ- ಘರ್ಷಣೆ ತಡೆಯಲೆಂದು ಬ್ರಿಟೀಷ್ ಪಡೆಗಳನ್ನು ಕರೆಸಲಾಯಿತು. ಆದರೆ ಅವರು ಮಾಡಿದ್ದೇನು?

ಉನ್ಮತ್ತ ಗುಂಪುಗಳು ದಾಳಿ ಮಾಡಿ ಕೊಲೆ ಸುಲಿಗೆ ಮಾಡುತ್ತಿರುವುದನ್ನು ನೋಡುತ್ತಾ ನಿಂತರು, ಹುಡುಗಿಯರನ್ನು ಮನೆಗಳಿಂದ ಎಳೆದು ತಂದು ಅವರ ಮೇಲೆ ಬಹಿರಂಗ ಸ್ಥಳದಲ್ಲಿ ಅತ್ಯಾಚಾರ ಮಾಡುವುದನ್ನು ಕೈಕಟ್ಟಿ ನಿಂತು ನೋಡಿದರು, ಮಹಿಳೆಯರ ಮರ್ಮಾಂಗಕ್ಕೆ ಭರ್ಜಿಗಳಿಂದ ಇರಿಯುವುದನ್ನು ನೋಡುತ್ತಾ ನಿಂತರು.

"ಈ ದರಿದ್ರರು ಇದನ್ನೆಲ್ಲ ಅನುಭವಿಸಲಿ. ಸ್ವರಾಜ್ಯವನ್ನು ಅನುಭವಿಸಲಿ" ಎಂದು ವ್ಯಂಗ್ಯವಾಡಿ ಗಹಗಹಿಸಿ ನಕ್ಕರು.

ಉಪವಾಸ

ಆ ದಿನ ಇಡೀ ಭಾರತೀಯ ಸೇನೆ ಕಣ್ಣೀರು ಸುರಿಸಿತು. "ಇಂದು ರಾತ್ರಿ ಯಾರಿಗೂ ಆಹಾರ ಕೊಡಬೇಡ" ಎಂದು ಮೆಸ್‌ನ ಹವಲ್ದಾರ್‌ಗೆ ನಾನು ಸೂಚಿಸಿದೆ.

ಪೂರ್ತಿ ಟೇಬಲ್ ಖಾಲಿ ಇರುವುದನ್ನು ಕಂಡು ಕರ್ನಲ್ ಇಂಗ್ಲಸ್ ಕೋಪಗೊಂಡ. "ಹವಾಲ್ದಾರ್, ಇವತ್ತು ಊಟ ಮಾಡಿಲ್ಲ" ಎಂದು ಆತ ಗದರಿಸಿದ. "ರಾಷ್ಟ್ರೀಯ ಶೋಕ ದಿನಗಳಂದು ನಾವು ಆಹಾರ ಸೇವಿಸುವುದಿಲ್ಲ" ಎಂದು ಹವಲ್ದಾರ್ ತಕ್ಷಣವೇ ಉತ್ತರಕೊಟ್ಟ. ಅವನ ಕಣ್ಣುಗಳು ಕೋಪದಿಂದ ಕೆಂಪಾಗಿದ್ದವು.

ನಂತರದ ಸರದಿ ನೌಖಾಲಿಯದ್ದು. ನನ್ನ ಅಧಿಕಾರಿಗಳಲ್ಲಿ ಒಬ್ಬರಾದ ಎನ್.ಘೋಷ್ ಅಲ್ಲಿಗೆ ರಜೆ ಮೇಲೆ ಹೋಗಿದ್ದರು. ಮುಸ್ಲಿಂ ದಂಗೆಕೋರರು ಘೋಷ್ ರನ್ನು ಬಂಧಿಸಿದ್ದರು ಹಾಗೂ ಅವರ ಸಹೋದರಿಯರನ್ನು ಅಪಹರಿಸಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿದ್ದರು.

ಈ ವಿಷಯುವನ್ನು ಇಂಗ್ಲಸ್‌ಗೆ ನಾನು ತಿಳಿಸಿದಾಗ. 'ಓಹ್, ಘೋಷ್ ಅವರಿಗೆ ಹಾಗೆ ಆದದ್ದು ಸರಿಯೇ ಆಯಿತು' ಎಂದು ಆತ ಪ್ರತಿಕ್ರಿಯಿಸಿದ.

'ಕರ್ನಲ್ ಸಾಹೇಬರೆ, ತಕ್ಷಣವೇ ಸೂಕ್ತ ವ್ಯವಸ್ಥೆಗಳನ್ನು ಮಾಡದಿದ್ದರೆ ನನ್ನ ಐನೂರು ಸೈನಿಕರನ್ನು ಈಗಲೇ ರೈಲಿನಲ್ಲಿ ಹೊರಡಿಸುತ್ತೇನೆ. ಘೋಷರನ್ನು ಪಾರು ಮಾಡಲು ನೌಖಾಲಿಗೆ ತೆರಳುತ್ತೇವೆ' ಎಂದು ನಾನು ಹೇಳಿದೆ. ಅಷ್ಟೇ ಅಲ್ಲದೆ "ನಿಮ್ಮ ದರಿದ್ರ...... ನಿಂದ ಘೋಷ್ ಒಂದು ಕಮಿಷನ್ ಹೊಂದಿದ್ದಾರೆಂಬುದನ್ನು ಮರೆಯಬೇಡಿ ಸರ್" ಎಂದೂ ಹಾಕಿದೆ. ದೇಶದಲ್ಲಿನ ವಿದ್ಯಮಾನಗಳಿಂದ ನಾನು ಭಾವನಾತ್ಮಕ ಹತಾಶೆಗೆ ಒಳಗಾದೆ. ಡೋಗ್ರಾಗಳ ಒಂದು ತುಕಡಿ ಘೋಷ ಮತ್ತವರ ಕುಟುಂಬವನ್ನು ಕಾಪಾಡಿತು. ಕಹಿ ಮನಸ್ಸಿನಿಂದ ಅವರು ಘಟಕಕ್ಕೆ ಮರಳಿದರು.

ಗೆರಿಲ್ಲಾ ಹೋರಾಟಕ್ಕೆ ಜೆ.ಪಿ.ಕರೆ

ಕಾಂಗ್ರೆಸ್ ಪಕ್ಷ ಮಧ್ಯಂತರ ಸರಕಾರವನ್ನು ರಚಿಸಿದ್ದನ್ನು ಜಯಪ್ರಕಾಶ ನಾರಾಯಣ ಕಟುವಾಗಿ ವಿರೋಧಿಸಿದರು. ಬ್ರಿಟೀಷರ ವಿರುದ್ಧ ಜನಪ್ರಿಯ ಚಳುವಳಿಗೆ ಇನ್ನೊಮ್ಮೆ ಕರೆ ಕೊಟ್ಟರು.

"ರಾಜ್ಯಪಾಲರುಗಳನ್ನು ಬಂಧಿಸಿ, ಗೆರಿಲ್ಲಾ ಹೋರಾಟ ನಡೆಸಿ" - ಇದು ದೇಶಾದ್ಯಂತ ಪ್ರವಾಸ ಮಾಡಿದ ವೇಳೆ ಜೆಪಿ ಬೋಧಿಸಿದ ತತ್ವದ ಸಾರಾಂಶವಾಗಿದೆ.

ಇದರಿಂದ ನಮಗೆ ಮತ್ತೊಮ್ಮೆ ಆಶೆ ಚಿಗುರಿತು. ಸೆಪ್ಟೆಂಬರ್ ಕೊನೆವಾರದಲ್ಲಿ ಕ್ರಿಯಾಸಮಿತಿ ಕೊಲ್ಕೊತ್ತಾದಲ್ಲಿ ಸಭೆ ಸೇರಿತು. ಸರಕಾರಿ ಸ್ಥಳದಲ್ಲಿನ ತಮ್ಮ ಕಚೇರಿಯನ್ನು ಬಳಸಲು ನೀಲಿಮಾ ಡೇ ನಮಗೆ ಅನುಮತಿ ನೀಡಿದರು. ನೀಲಿಮಾ ಕೋಲ್ಕೊತ್ತಾ ಬ್ಯಾರಿಸ್ಟರ್‌ರ ಮಾಜಿ ಪತ್ನಿ. ಅವರು ರೆಡ್‌ಕ್ರಾಸ್‌ನ ಒಬ್ಬ ಅಧಿಕಾರಿಯಾಗಿದ್ದರು. ಈ ಮಹಿಳೆ ಗ್ರೇಟ್ ಈಸ್ಟರ್ನ್ ಹೊಟೆಲ್‌ನಲ್ಲಿ ನಮಗೆ ಪರಿಚಯವಾಗಿದ್ದರು. ನಮಗೆ ನೆರವಾಗುವ ರೀತಿ ಕಂಡುಬಂದರು. ಹೀಗಾಗಿ ನಮ್ಮ ಪೈಕಿ ಯಾರೋ ಒಬ್ಬರು ಆಕೆಯೊಂದಿಗೆ ಅಜಾಗರೂಕತೆಯಿಂದ ನಮ್ಮ ಯೋಜನೆಯ ಬಗ್ಗೆ ಹೇಳಿದರು, ಆಕೆ ಆಸಕ್ತಿ ತೋರಿದಳು. ಹೇಗೋ ಹೇಗೋ ಆಕೆ ನಮ್ಮ ವಿಶ್ವಾಸ ಗಳಿಸಿಕೊಂಡಳು. ನಾವು ಆಕೆಯನ್ನು ಕೆಲವು ಮಹತ್ವದ್ದಲ್ಲದ ಕೆಲಸಗಳಿಗೆ ಬಳಸಿಕೊಂಡೆವು. ಒಟ್ಟಿನಲ್ಲಿ ಒಂದು ವಿಷಜಂತು ನಮ್ಮ ಸಂಘಟನೆಯನ್ನು ಸೇರಿಕೊಂಡಿತು. ತೀರಾ ನಿರ್ಣಾಯಕ ಘಟಕದಲ್ಲಿ ಅದು ನಮ್ಮನ್ನು ಕಚ್ಚಿಬಿಟ್ಟಿತು.

(ಮುಂದುವರಿಯುವುದು)

ಓದುಗರ ಪತ್ರ...

ರಾಜಕೀಯ ದುರುದ್ದೇಶಕ್ಕಾಗಿ ನಾಯ್ಡು-ಕೃಷ್ಣ ಚಿತ್ರಾವತಿ ಅಣೆಕಟ್ಟನ್ನು ಬಳಸಿಕೊಳ್ಳುವುದನ್ನು ಸರಿಯಾಗಿ ಗುರುತಿಸಿದ್ದೀರಿ. ಜನರ ಹಿತಗಳಿಗಿಂತ ಈ ಸ್ವಾರ್ಥವೇ ಮೇಲುಗೈ ಪಡೆಯುತ್ತಿರುವುದು ಆತಂಕಕಾರಿ.

- **ಅಶ್ವಥ್**, ಗುಡಿಬಂಡೆ

● ● ●

ಮೇಜರ್ ಜಯಪಾಲ್ ಸಿಂಗ್‌ರ ಆತ್ಮಕಥನ, ಅದ್ಭುತ-ರೋಮಾಂಚನಕಾರಿಯಾಗಿದೆ. ಹೂತು ಹಾಕಲಾದ ಸತ್ಯಗಳನ್ನು ಹೊರತಂದ ಪತ್ರಿಕೆಗೆ ಅಭಿನಂದನೆಗಳು

- **ಸವಿತಾ ಪೈ**, ಮಂಗಳೂರು

● ● ●

ದಲಿತರ ಉಪಯೋಗಕ್ಕಾಗಿ ಕಟ್ಟಿಸಿದ್ದ ಸಮುದಾಯ ಭವನ ಕೇಳಿದ್ದ ಅಪರಾಧವೇ? ಜಾತಿ ವ್ಯವಸ್ಥೆ - ಜಮೀನ್ದಾರರ ಅರ್ಭಟ ಮುಚ್ಚಿದೆಯಲ್ಲ. ಗುಗ್ಗಾಪತಿ ದಲಿತರ ಮೇಲಿನ ಹಲ್ಲೆ ಲೇಖನ ಚಿಂತನೆಗೆ ಹಚ್ಚಿತು.

- **ಬಸವರಾಜ ಬಿರಾದಾರ**, ಗುಲ್ಬರ್ಗಾ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜೂನ್ 15,
ಐಕ್ಯರಂಗ ಪತ್ರಿಕೆ ಪ್ರಸಾರಾಂದೋಲನ ಆರಂಭ

ಜೂನ್ 15
ಕರ್ನಾಟಕ ರಾಜ್ಯಅರಣ್ಯ ಇಲಾಖಾ ದಿನಗೂಲಿ ನೌಕರರ ರಾಜ್ಯಮಟ್ಟದ ಸಭೆ
ಬೆಳಿಗ್ಗೆ 10 ಗಂಟೆಗೆ
ಸ್ಥಳ: ಅರಣ್ಯಭವನದಲ್ಲಿರುವ ನೌಕರರ ಭವನ, ಮಲ್ಲೇಶ್ವರಂ, ಬೆಂಗಳೂರು.
ಜೂನ್ 16 ಬೇಡಿಕೆಗಳಿಗೆ ಒತ್ತಾಯಿಸಿ ಮೇಲಧಿಕಾರಿಗಳಿಗೆ ಮನವಿ

ಜೂನ್ 19, 2003
ಶಿಲ್ಪಕಲಾ ಅಕಾಡೆಮಿ - ಶಿಲ್ಪಕಲಾ ಪುಸ್ತಗಳ ಬಿಡುಗಡೆ, ನಯನ ಸಭಾಂಗಣ, ಕನ್ನಡ ಭವನ, ಬೆಂಗಳೂರು. ಸಂಜೆ 6.30 ಕ್ಕೆ

ಜೂನ್ 21, 2003
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮನೆಯಂಗಳದ ಮಾತುಕತೆ, ತಿಂಗಳ ಅತಿಥಿ-ಚೆನ್ನವೀರ ಕಣವಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಂಗಳೂರು. ಸಂಜೆ 4 ಕ್ಕೆ

ಜೂನ್ 28-29
ಬೆಂಗಳೂರಿನಲ್ಲಿ ಸಿಐಟಿಯು ಅಖಿಲ ಭಾರತ ಪದಾಧಿಕಾರಿಗಳ ಸಭೆ.
ಜೂನ್ 28 ರ ಸಂಜೆ 3.30 ಕ್ಕೆ ಪುರಭವನದಲ್ಲಿ ಸಿಐಟಿಯು ಕಾರ್ಯಕರ್ತರ ಸಭೆ.
ಕಾಂ: ಇ. ಬಾಲಾನಂದನ್, ಎಂ.ಕೆ.ಪಂಧೆ ಮತ್ತಿತರರು ಮಾತನಾಡಲಿದ್ದಾರೆ.

ಜುಲೈ 1, 2003
ಕಾಂ.ಸೂರಿ ನೆನಪಿನ ಕಾರ್ಯಕ್ರಮ

ಜಮೀನು ಪರಭಾರೆ - ಮೂಲಸಮಸ್ಯೆ ಮರೆಸುತ್ತಿರುವ ಸರ್ಕಾರ

ಕೃಷಿ ಜಮೀನನ್ನು ಯಾರು ಖರೀದಿಸುತ್ತಾರೆ ಎಂಬುದಕ್ಕಿಂತಲೂ ಯಾಕೆ ಮಾರಲಾಗುತ್ತಿದೆ ಎಂಬುದರತ್ತ ಸರ್ಕಾರ ಪೂರ್ಣ ಗಮನಹರಿಸಬೇಕು. ಜಾರಿಯಾಗದೇ ಇರುವ ಭೂ ಸುಧಾರಣಾ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಕೃಷಿ ಕೂಲಿಕಾರರಿಗೆ ಭೂ ಹಂಚಿಕೆಯಾಗಲೇಬೇಕು.

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಕೃಷ್ಣಾ ನೀರಾವರಿ ಪ್ರದೇಶದಲ್ಲಿನ ಜಮೀನಿನ ಪರಭಾರೆಯನ್ನು ನಿಷೇಧಿಸಿ ಕರ್ನಾಟಕ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಅಲ್ಲಿನ ಜಮೀನನ್ನು ಆಂಧ್ರದ ಜಮೀನ್ದಾರರು ಖರೀದಿಸುತ್ತಿದ್ದಾರೆ. ವಿಪರೀತವಾಗಿ ರೈತರೂ ಜಮೀನು ಮಾರುತ್ತಿದ್ದಾರೆ. ಅದನ್ನು ತಡೆಯಬೇಕು ಎಂದು 'ಸ್ಥಳೀಯ'ರು ಪ್ರಶ್ನೆ ಎತ್ತಿದ್ದುದು ಇದರ ಹಿನ್ನೆಲೆ. ಜಮೀನು ಖರೀದಿ ಆಂಧ್ರದವರೋ, ಕರ್ನಾಟಕದವರೋ ಯಾರು ಮಾಡಿದರೂ ಭೂಮಿ ಕಳೆದುಕೊಳ್ಳುವುದು ಅಲ್ಲಿನ ರೈತರೇ. ಖರೀದಿ ಮಾಡಿರುವವರು ಶ್ರೀಮಂತ ಜಮೀನ್ದಾರರೇ. ಗುಲ್ಬರ್ಗಾ ಜಿಲ್ಲೆ ಶಹಪುರ ಸುತ್ತಲಿನಲ್ಲಿ ಜಮೀನು ಪರಭಾರೆಯ ವ್ಯಾಪಕ ವಹಿವಾಟು ನಡೆಯುತ್ತಿದ್ದದ್ದು ನಿಜ. ಆದರೆ ರೈತರೇಕೆ? ತಮ್ಮ ಜಮೀನನ್ನು ಮಾರಾಟ ಮಾಡುತ್ತಿದ್ದಾರೆ? ಅಲ್ಲಿನ ನಿಜವಾದ ಬಿಕ್ಕಟ್ಟೇನು? ಅದೂ ಕೇವಲ ಆಂಧ್ರ ವಲಸಿಗ ಜಮೀನ್ದಾರರ ಪ್ರಶ್ನೆಯ್ದೇ? ಅಥವಾ ನಿಜವಾದ ಬಿಕ್ಕಟ್ಟೇನು ಎಂದು ಸರ್ಕಾರ ಆಳವಾಗಿ ಪರಿಶೀಲಿಸಿಲ್ಲ. ಯಾಕೆಂದರೆ ಪರಭಾರೆ ನಿಷೇಧವೊಂದೇ ಸಮಸ್ಯೆಗೆ ಪರಿಹಾರ ಕೋರುತ್ತಿದೆ ಎಂಬ ನಿಲುವು ಸರ್ಕಾರದಲ್ಲಿದ್ದಂತಿದೆ. ಅಲ್ಲಿನ ಕೃಷಿಕರು ಎದುರಿಸುತ್ತಿರುವ ಘೋರ ಸಮಸ್ಯೆಗಳನ್ನು ಸರ್ಕಾರ ನಿರ್ಲಕ್ಷಿಸಿದೆ.

ಬಹಳ ಮುಖ್ಯವಾಗಿ ನೀರಾವರಿ ಬಂದ ನಂತರ ಬಹುತೇಕ ಭೂಮಿಯನ್ನು ಅಭಿವೃದ್ಧಿ ಪಡಿಸಿಲ್ಲ. ಭೂಮಿ ಸಮತಲಗೊಳಿಸುವುದು, ಬಸಿ ಕಾಲುವೆ ನಿರ್ಮಾಣ, ಫಲವತ್ತು ಗೊಳಿಸುವುದು, ನೀರಿನ ವೈಜ್ಞಾನಿಕ ನಿರ್ವಹಣೆ, ಜಾಗೃತಿ ಮುಂತಾಗಿ ವಹಿಸಿಲ್ಲ. ಮೇಲಾಗಿ ಕೃಷಿ ಉತ್ಪಾನೆಗಾಗಿ ಬೇಕಾದ ಮೂಲ ಬಂಡವಾಳದ ಕೊರತೆಯೂ ಇಲ್ಲಿ ಎದ್ದು ಕಾಣುತ್ತಿದೆ. ಹೀಗಾಗಿ ಆಧುನಿಕ ಬೇಸಾಯ ಪದ್ಧತಿ ಅಳವಡಿಸಿಕೊಳ್ಳದೇ, ಆಧುನಿಕ ಸಾಧನ-ಸಲಕರಣೆ ಬಳಸದೇ ಹೋದರೆ, ಕನಿಷ್ಟ ಬೀಜ-ಗೊಬ್ಬರಕ್ಕೆ ಸಾಲಕ್ಕಾಗಿಯೇ ಖಾಸಗಿ ಧಣಿಗಳತ್ತ ಕೈಚಾಚುವ ಸ್ಥಿತಿ ಇದೆ. ಫಸಲಿಗೆ ಬೆಲೆಯಿಲ್ಲದೇ, ಸಾಲ ಕಟ್ಟಲಾಗದೇ ಕಂಗಾಲಾಗಿರುವ ಕುಟುಂಬಗಳಿವೆ. ಹೀಗಾಗಿ ತಮ್ಮ ಭೂಮಿ ಮಾರುವ ಅನಿವಾರ್ಯ ಒತ್ತಡಕ್ಕೆ ರೈತರು ಸಿಲುಕಿದ್ದಾರೆ. ಅವರಿಗೆ ಆಂಧ್ರದವರೋ ಅಥವಾ ಶಹಪುರದ - ಕರ್ನಾಟಕದ ಜಮೀನ್ದಾರರೋ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ. ಹೆಚ್ಚಾಗಿ ಈ ಭೂಮಿಗೆ ಉತ್ತಮ ಬೆಲೆಯನ್ನೇ ನೀಡುತ್ತಿರುವುದು ವರದಿಯಾಗಿದೆ. ಸಚಿವರು ಹೇಳಿದಂತೆ ಎಕರೆಗೆ 5000 ರೂ. ಎಂಬುದು ಸರಿಯಲ್ಲ. ಅದು ಕನಿಷ್ಟ 20 ಸಾವಿರಕ್ಕೆ ಹೆಚ್ಚಿದೆ. ಕೆಲವೆಡೆ ಲಕ್ಷಕ್ಕೂ ತಲುಪಿದೆ.

ಇನ್ನೊಂದೆಡೆ ಆಂಧ್ರದವರು ಖರೀದಿಸುತ್ತಿರುವ ಜಮೀನು ಸಹ ಬಹುತೇಕ ಜೌಗು ಹಿಡಿದ ಭೂಮಿ, ಹತ್ತಾರು ವರುಷಗಳಿಂದ ಬೀಳುಬಿದ್ದ ಪ್ರದೇಶ ಎಂಬ ವರದಿಯಿದೆ. ಅಂತಹ ನಿರುಪಯುಕ್ತ ಭೂಮಿಯನ್ನೇ ಸಾಗುವಳಿ ಮಾಡಿ ಆಧುನಿಕ ವಿಧಾನದಿಂದ ಉತ್ತಮ ಫಸಲು ತೆಗೆಯುತ್ತಿರುವ ಅಂಶ ಗಮನಾರ್ಹ. ಇದು ಸಾಧ್ಯವಾದುದು ಹೆಚ್ಚಿನ ಹಣ ಹೂಡಿಕೆಯಿಂದ ಕೃಷಿಗೆ ಹೆಚ್ಚಿನ ಬಂಡವಾಳ ಇಂದು ಬೇಕಾಗಿದೆ ಎಂಬುದು ಇದರ ಒಂದು ನಿದರ್ಶನ.

ಆದ್ದರಿಂದ ಅಲ್ಲಿನ ರೈತರನ್ನು - ಕೃಷಿಯನ್ನು ಉಳಿಸಲು ಸರ್ಕಾರ ಮಾಡಬೇಕಾದದ್ದು ಅಗತ್ಯವಿರುವಂತಹ ಬಂಡವಾಳದ ಸಾಲ ಸೌಲಭ್ಯ ನೀಡಿಕೆ, ಅದು ಸರ್ಕಾರಿ ಬ್ಯಾಂಕ್‌ಗಳಿಂದ ಕೊಡಬೇಕು. ಸಬ್ಸಿಡಿ ಮೂಲಕ ಬೀಜ, ಗೊಬ್ಬರ ಒದಗಿಸಬೇಕು ಮತ್ತು ಫಸಲಿಗೆ ಸೂಕ್ತ ಬೆಲೆ ಸಿಗುವ ಮಾರುಕಟ್ಟೆ ಬೆಂಬಲಿತ ಬೆಲೆ ನಿಗದಿಯಾಗಬೇಕು.

ರೈತ-ಕೂಲಿಕಾರರನ್ನು ಉಳಿಸಿ

ಆದರೆ ಇವುಗಳತ್ತ ಕಿರುನೋಟವನ್ನು ಸರ್ಕಾರ ಹರಿಸಿಲ್ಲ. ಸರ್ಕಾರದ ಪರಭಾರೆ ನಿಷೇಧ ಸ್ಥಳೀಯ ಜಮೀನ್ದಾರರನ್ನು ಕೊಂಚ ಖುಷಿ ಪಡಿಸಬಹುದು. ಆದರೆ ಸಮಸ್ಯೆ ಎದುರಿಸುತ್ತಾ ದಿವಾಳಿಯಾಗುವ ರೈತನನ್ನು ಅಷ್ಟಾಗಿ ಉಳಿಸಲಾರದು.

ಒಂದು ರೀತಿಯಲ್ಲಿ ಕೃಷ್ಣಾ ನೀರಾವರಿ ಪ್ರದೇಶದಲ್ಲಿ ವಲಸಿಗರು, ಖರೀದಿದಾರರು ಆಕ್ರಮಣದಾರರು ಎಂಬ ಪ್ರಶ್ನೆ ಎತ್ತಿರುವ ಹಿಂದೆ ಎರಡು ಭೂಮಾಲಕ ಶಕ್ತಿಗಳಲ್ಲಿನ ಸಂಘರ್ಷವದು. ಇಡೀ ಸಮಸ್ಯೆಯ ಮೂಲವಿರುವುದು ಈ ಪ್ರದೇಶದಲ್ಲಿನ ಭೂಮಾಲೀಕ ಪದ್ಧತಿ ಬಲಗೊಳಿಸುವ ಭೂಮಾಲೀಕ ಕಾರ್ಮಿಕ - ಭೂ ಸಂಬಂಧಗಳಲ್ಲಿ; ಹೈದ್ರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಭೂ ಸುಧಾರಣೆ ಕಾನೂನು ಅಷ್ಟಾಗಿ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಇಂದಿಗೂ ನೂರಾರು, ಸಾವಿರಾರು ಎಕರೆಯ ಜಮೀನು ಜಮೀನ್ದಾರರ ಕೈಯಲ್ಲಿದೆ. ಅದನ್ನು ಸಾಗುವಳಿ ಮಾಡಲಾಗದೇ, ಅಭಿವೃದ್ಧಿ ಪಡಿಸಲಾಗದೇ ಬೀಳು ಬಿದ್ದಿದ್ದೂ ಇದೆ. ಅಲ್ಲಿ ಲಭ್ಯವಿರುವ ಕೃಷಿಯೋಗ್ಯ ಸರ್ಕಾರಿ ಜಮೀನು ಮತ್ತು ಕಾನೂನು ಬಾಹಿರವಾಗಿಯೂ ಜಮೀನ್ದಾರರ ಹಿಡಿತದಲ್ಲಿರುವ ಭೂಮಿಯನ್ನು ಅಪಾರ ಸಂಖ್ಯೆಯಲ್ಲಿರುವ ದಟ್ಟ ದಾರಿದ್ರ್ಯ ಬದುಕು ನೂಕುತ್ತಿರುವ ಕೃಷಿ ಕೂಲಿಕಾರರಿಗೆ ಹಂಚಿಕೆಯಾಗಬೇಕು. ಇದಕ್ಕಾಗಿ ಹೋರಾಡ ನಡೆಯಲೇಬೇಕು.

ರೈತರನ್ನು ನಿಜವಾಗಿಯೂ ಉಳಿಸಲು, ಕೃಷಿ ಕೂಲಿಕಾರರಿಗೆ ಭೂಮಿ ಸಿಗಲು, ಕಾನೂನು ಜಾರಿಗೆ ಮುಂದಾಗದ ಭಾರಿ ನೀರಾವರಿ ಸಚಿವ ಹೆಚ್.ಕೆ.ಪಾಟೀಲರು, 'ಪರಭಾರೆ ನಿಷೇಧ' ಪರಿಹಾರವೊಂದನ್ನೇ ತೋರಿರುವುದು ಅರ್ಥಹೀನ. ಈ ಭೂಮಿ ಕೃಷಿ ಕೂಲಿಕಾರರಿಗೆ ಸಿಗಲು ಭೂಸುಧಾರಣಾ ಕಾನೂನು ಜಾರಿಗಾಗಿ, ರೈತರ ಕೃಷಿ ಉಳಿಸಲು ಆಗ್ರಹಿಸಿ ಪ್ರಬಲ ಚಳುವಳಿ ಅತ್ಯಗತ್ಯವಿದೆ.

ಪುಟ 5 ನೋಡಿ

ಐಕ್ಯರಂಗ ಪ್ರಸಾರ ಹೆಚ್ಚಿಸಿ

ಜೂನ್ 15 ರಿಂದ ಜುಲೈ 1 ರವರೆಗೆ ಪ್ರಸಾರ ಮಾಸ

ಆತ್ಮೀಯರೆ,

ನಮ್ಮ ವಾರಪತ್ರಿಕೆಗಳ ಸಂಖ್ಯೆ ಹೆಚ್ಚುತ್ತಿರುವುದು ಕನ್ನಡ ಓದುಗರ ಸಂಖ್ಯೆ ಬೆಳೆಯುತ್ತಿರುವುದರ ಸೂಚನೆ ಎನ್ನಬಹುದು. ಇದು ಸ್ವಾಗತಾರ್ಹವಾದುದೇ. ಆದರೆ ಇಂದು ಕೆಲವು ಪತ್ರಿಕೆಗಳು ಓದುಗರಲ್ಲಿ ಎಂತಹ ಅಭಿರುಚಿಗಳನ್ನು ಹುಟ್ಟಿಸುತ್ತಿವೆ ಎಂಬುದು ಆತಂಕದ ಪ್ರಶ್ನೆಯಾಗಿದೆ. ತನಿಖಾ ಪತ್ರಿಕೋದ್ಯಮದ ಹೆಸರಿನಲ್ಲಿ ಕೊಲೆಗಳನ್ನು, ದರೋಡೆಗಳನ್ನು, ಮಾಫಿಯಾ ಗ್ಯಾಂಗುಗಳನ್ನು ವಿಜೃಂಭಿಸಲಾಗುತ್ತಿದೆ. ಅಶ್ಲೀಲ ಭಾಷೆ, ಬರಹಗಳ ಮೂಲಕ ವಿಕೃತ ಪ್ರವೃತ್ತಿಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಮೌಢ್ಯ,ಕಂದಾಚಾರಗಳನ್ನು ವೈಭವೀಕರಿಸುವ ಕಥೆ, ಕಾದಂಬರಿಗಳ ಮೂಲಕ ಪ್ರತಿಗಾಮಿ ಮನಸ್ಸುಗಳನ್ನು ಸೃಷ್ಟಿಸಲಾಗುತ್ತಿದೆ. ಕೋಮು ದ್ವೇಷವನ್ನು ಹಬ್ಬಿಸಲು ಜಾತೀಯತೆ, ಅಸ್ಪೃಶ್ಯತೆಯನ್ನು ಸಮರ್ಥಿಸಲು ಹಿಂದೇಟು ಹಾಕದ ಪತ್ರಿಕೆಗಳು ಸಹ ನಮ್ಮ ನಡುವೆ ಇವೆ.

ಆದರೆ 'ಐಕ್ಯರಂಗ' ಇವೆಲ್ಲವುಗಳಿಂದ ಭಿನ್ನವಾದ ಧಾರಿಯಲ್ಲಿ ನಡೆದುಬಂದ ಪತ್ರಿಕೆ. ಅನಗತ್ಯ ಸದ್ದುಗದ್ದಲವಿಲ್ಲದೆ ಕಳೆದ ನಾಲ್ಕು ದಶಕಗಳಿಂದ ನಿರಂತರವಾಗಿ ಓದುಗರಲ್ಲಿ ಒಂದು ಸದಭಿರುಚಿಯನ್ನು ಹುಟ್ಟಿಸಲು ಶ್ರಮಿಸುತ್ತಾ ಸಮಾಜ ಬದಲಾವಣೆಯ ಕಾರ್ಯದಲ್ಲಿ ತೊಡಗುತ್ತಾ ಬಂದಿರುವ ಇನ್ನೊಂದು ಪತ್ರಿಕೆ ಇರಲಾರದು.

ದೇಶಕ್ಕೆ ಅನ್ನ ನೀಡುವ ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ನಮ್ಮ ಕಾರ್ಖಾನೆಗಳು ಏಕೆ ಮುಚ್ಚುತ್ತಿವೆ? ನಮ್ಮ ಕೆಲ ತಾಯಂದಿರು ತಮ್ಮ ಮಕ್ಕಳನ್ನು ಏಕೆ ಮಾರಿಕೊಳ್ಳುತ್ತಾರೆ? ನಮ್ಮ ಯುವಕರೇಕೆ ಕ್ರಿಮಿನಲ್ಲಾಗುತ್ತಿದ್ದಾರೆ? ನಮ್ಮ ಸುತ್ತ ಕೊಳಗೇರಿಗಳೇಕೆ ಬೆಳೆಯುತ್ತಿವೆ? ನಮ್ಮ ವಿದ್ಯುತ್ ಇಷ್ಟೇಕೆ ದುಬಾರಿ? ಬರಗಾಲ ಯಾಕೆ ಬರುತ್ತದೆ? ಕರ್ನಾಟಕದ ಅನೇಕ ಪ್ರದೇಶಗಳು ಹೀಗೇಕೆ ಹಿಂದುಳಿದಿವೆ? ಪ್ರಾದೇಶಿಕ ಅಸಮಾನತೆ ತೊಲಗಿಸಲು ಅಭಿವೃದ್ಧಿ ಮಾರ್ಗವೇನು? ಹೀಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಕ್ರೀಡೆ, ವಿಜ್ಞಾನದಂತಹ ಅಂಶಗಳ ಕುರಿತ ವಿಶ್ಲೇಷಣೆ ಇದೆ. ಬದುಕಿನ ಇಂತಹ ನೂರಾರು ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಾ 'ಐಕ್ಯರಂಗ'ವು ರಾಜ್ಯದ 'ದುಡಿಯುವ ಜನರ ಪ್ರಾಣಮಿತ್ರ' ಎಂಬ ವಿಶ್ವಾಸಕ್ಕೆ ಪಾತ್ರವಾಗಿದೆ. ದುಡಿಯುವ ಜನರ ದುಃಖ ದುಮ್ಮಾನಗಳಿಗೆ ಕಾರಣಗಳನ್ನು ಹುಡುಕುತ್ತಾ ದೇಶ ವಿದೇಶಗಳ ಬೆಳವಣಿಗೆಗಳನ್ನು ವಾರಕ್ಕೊಮ್ಮೆ ಓದುಗರ ನ್ಯಾಯಾಲಯದ ಎದುರು ಬಿಚ್ಚಿಡುವಲ್ಲಿ ಪತ್ರಿಕೆ ಯಶಸ್ವಿಯಾಗುತ್ತಾ ಬಂದಿದೆ.

ಕಾಲ ಬದಲಾಗುತ್ತಿದೆ. ಹೊಸ ಪರಿಸ್ಥಿತಿ, ಹೊಸ ಸವಾಲುಗಳು ನಮ್ಮ ಮುಂದಿವೆ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧವಾದ ಪ್ರಗತಿ ಸಾಧ್ಯವಾಗಿದ್ದರೂ ಅದರ ಪ್ರಯೋಜನ ಪಡೆಯುವವರು ಯಾರು? ಎಷ್ಟು ಜನ? ಜನತೆಯನ್ನು ಕಗ್ಗತ್ತಲಿನತ್ತ ತಳ್ಳುವ ತೀವ್ರ ಪ್ರಯತ್ನ ನಡೆಯುತ್ತಿರುವಾಗ ಜನತೆಯ ಕೈಯಲ್ಲಿ ದೀವಿಗೆಯಾಗುವ 'ಐಕ್ಯರಂಗ'ದ ಜವಾಬ್ದಾರಿ ಈಗ ಮೊದಲಿಗಿಂತ ಹೆಚ್ಚಾಗಿದೆ.

ಹೊಸ ಸವಾಲಿನ ಆಹ್ವಾನಗಳನ್ನು ಸ್ವೀಕರಿಸಲು ಸಜ್ಜಾಗಿರುವ ಈ ನಿಮ್ಮ ಪತ್ರಿಕೆಯು ಈಗ ಹೊಸ ವಿನ್ಯಾಸ, ಹೊಸ ಅಂಕಣಗಳೊಂದಿಗೆ ನಿಮ್ಮ ಮುಂದೆ ಬರುತ್ತಿದೆ. ನೀವು ಈ ಪ್ರಯತ್ನವನ್ನು ಪ್ರೋತ್ಸಾಹಿಸಿ ಮುನ್ನಡೆಸುತ್ತೀರಿ ಎಂಬ ವಿಶ್ವಾಸ ನಮ್ಮದಾಗಿದೆ.

ಓದುಗರಾಗಿ, ಚಂದಾದಾರರಾಗಿ, ಆಜೀವ ಚಂದಾದಾರರಾಗಿ, ಏಜೆನ್ಸಿದಾರರಾಗಿ ಪ್ರಸಾರ ಹೆಚ್ಚಿಸಲು ನೀವು ಮುಂದಾಗಿ.

- ಸಂಪಾದಕ ಮಂಡಳಿ

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ನಮ್ಮ ನಿಮ್ಮ ಸಂವಾದ

ಮುಂಗಾರು ಮೋಡಗಳ ಚಲನವಲನ ಆರಂಭವಾಗುತ್ತಿದ್ದಂತೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಚರ್ಚ್, ಗುರುದ್ವಾರ, ಮಸೀದಿ ಮತ್ತು ದೇವಸ್ಥಾನಗಳಿಗೆ ತೆರಳಿ ಮಳೆಗಾಗಿ ಪ್ರಾರ್ಥಿಸಿದ ಸುದ್ದಿ ಫೋಟೋಗಳೊಂದಿಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ನೋಡಿದರೆ ಇವರು ನಮ್ಮ ರಾಜ್ಯದ ಮುಖ್ಯ ಮಂತ್ರಿ ಎಂದುಕೊಳ್ಳಲು ಅವಮಾನವಾಗುತ್ತದೆ. ಯಾವುದೋ ಒಂದು ಸಿನೆಮಾದ ಪಾತ್ರಧಾರಿಯಂತೆ ಒಂದೊಂದು ಕಡೆ ಒಂದೊಂದು ಪೋಜ್ ಕೊಟ್ಟು ರಾಜ್ಯದ ಜನತೆಯನ್ನು ಮರಳುಮಾಡಲು ಹೊರಟಿರುವುದು ಖಂಡನೀಯ. ಸತತ ಬರಗಾಲದಿಂದ ರಾಜ್ಯದ ಜನ ತತ್ತರಿಸುತ್ತಿರುವಾಗ, ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಲು ಸರ್ಕಾರ ಸಂಪೂರ್ಣ ವಿಫಲವಾಗಿರುವಾಗ ಜನರ ಗಮನವನ್ನು ಬೇರೆಕಡೆ ಸೆಳೆಯಲು ಕೃಷ್ಣ ಅವರು ಈ ನಾಟಕ ಮಾಡುತ್ತಿರುವುದು ಅವರಿಗೆ ಸೋಭೆತರುವುದಿಲ್ಲ. ಮಂತ್ರದಿಂದ ಮಾವಿನಕಾಯಿ ಸಹ ಉದರುವುದಿಲ್ಲ ಎನ್ನುವಾಗ ಪ್ರಾರ್ಥನೆಗೆ ಮಳೆ ಬರುತ್ತದಾ? ರಾಜ್ಯದ ಜನತೆಗೆ ವಿಜ್ಞಾನದ ಕಣ್ಣು ಬರುವದಕ್ಕಿಂತ ಅವರು ಅಂಧವಿಶ್ವಾಸಗಳಲ್ಲೇ ಮುಳುಗಿದ್ದರೆ ತಾವು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಬಹುದು. ಅಂದುಕೊಂಡಿದ್ದಾರೆ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಎಲ್ಲ ಮತೀಯ ಕ್ಷೇತ್ರಗಳಿಗೆ ಭೇಟಿಕೊಟ್ಟು ಓಟು ರಾಜಕೀಯಕ್ಕಾಗಿ ಜನರ ಅಸಾಯಕತೆಯ ದುರುಪಯೋಗ ಪಡೆಯಲು ಯತ್ನಿಸುತ್ತಿರುವುದು ಖಂಡನೀಯ.

- ನಿತ್ಯಾನಂದ ಸ್ವಾಮಿ



ಕೋಲಾರ : ಬತ್ತಿದ ಒಡಲು, ಭೋರ್ಗರೆದ ಜನ

ಶಾಶ್ವತ ನೀರಾವರಿ ವ್ಯವಸ್ಥೆಗಾಗಿ ಕೋಲಾರದಿಂದ ಬೆಂಗಳೂರಿಗೆ ನಡೆದ ಕಾಲ್ನಡಿಗೆ ಜಾಥಾ ಐತಿಹಾಸಿಕ ಹತ್ತಾರು ಸಾವಿರ ಜನ ಭಾಗವಹಿಸಿ ಆಳುವವರಿಗೆ ಆಗ್ರಹಿಸಿದರು.



ಮನಸ್ಸು ಮಾಡಿ ಭೂಮಿಯ ಗರ್ಭ ಸೀಳುತ್ತಾ ಹೋದರೆ ಬಂಗಾರ ಸಿಗಬಹುದೇನೋ ಆದರೆ ಭೂತಾಯಿಯ ಒಡಲಲ್ಲಿ ನೀರನ್ನು ಹುಡುಕುವಂತಿಲ್ಲ. ಭೂಮಿ ಬಗೆದರೂ ನೀರಿಲ್ಲ. ಕೆರೆ ಕುಂಟೆಗಳ ಮಡಿಲಲ್ಲೂ ನೀರಿಲ್ಲ. ಮೈದುಂಬಿ ಹರಿಯುವ ನದಿಗಳಂತೂ ಇಲ್ಲವೇ ಇಲ್ಲ. ಮುಗಿಲ ಸೇರಿದ ಮಳೆರಾಯ ಕಳೆದೆರಡು ವರ್ಷಗಳಿಂದ ಮುನಿಸು ಬಿಡಲಿಲ್ಲ. ಇದು ಚಿನ್ನದ ನಾಡು ಕೋಲಾರ ಜಿಲ್ಲೆಯ ಇಂದಿನ ಕಥೆ. ಹಾಲು ಚಿನ್ನ, ರೇಷ್ಮೆಯ ಹೊಳೆ ಹರಿಸಿದ ಕೋಲಾರ ಜಿಲ್ಲೆಯ ಜನತೆಗೆ ಸದ್ಯ ಉಳಿದಿರುವುದು ಕ್ಷಾಮ... ಕ್ಷಾಮ.... ಕ್ಷಾಮ.. ಅದು ನೀರಿನ ಕ್ಷಾಮ ನಂತರ ಆಹಾರದ ಕ್ಷಾಮ.

ಕುಡಿಯುವ ನೀರಿಗೆ ತಹತಹಿಸುವ ಸ್ಥಿತಿ. ಹಲವು ರೋಗಗಳ ತವರು ಈ ನೀರಿನ ಪರಿಸ್ಥಿತಿಯೇ ಇಷ್ಟೊಂದು ಭಯಾನಕವಾಗಿರುವಾಗ ಕೃಷಿಯ ಪರಿಸ್ಥಿತಿಯನ್ನು ಎಂಥವರೂ ಗ್ರಹಿಸಬಹುದಲ್ಲವೆ. ಕೋಲಾರ ಜಿಲ್ಲೆಯ ಆಧಾರಸ್ತಂಭವಾದ ಕೃಷಿ ನೀರಿನ ಕ್ಷಾಮದಿಂದಾಗಿ ನೆಲಕಚ್ಚಿದೆ. ಹೈನುಗಾರಿಕೆ ರೇಷ್ಮೆ ಎಲ್ಲದರ ಮೇಲೂ ಬರದ ಛಾಯೆ ಆವರಿಸಿದೆ. ಆರ್ಥಿಕ ಶಕ್ತಿ, ಜನತೆಯ ಜೀವನ ಮಟ್ಟ ಕುಸಿಯುತ್ತಿದೆ. ನೀರು ಆಹಾರಕ್ಕಾಗಿ ಪರದಾಡುವ ಪರಿಸ್ಥಿತಿ ಎದುರಾಗಿದೆ.

ಈ ಹಿನ್ನೆಲೆದಲ್ಲಿ ರೂಪಿಸಲ್ಪಟ್ಟದ್ದು "ಕೋಲಾರ ಜಿಲ್ಲಾ ಶಾಶ್ವತ ನೀರಾವರಿ ಹೋರಾಟ ಸಮಿತಿ" ಜಿಲ್ಲೆಗೆ ಶಾಶ್ವತ ನೀರಾವರಿಗಾಗಿ ಯೋಜನೆಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿ ಕಳೆದ ಒಂದು ವರ್ಷದಿಂದಲೂ ಚಳುವಳಿಗಳನ್ನು ನಡೆಸುತ್ತಾ ಬಂದಿರುವ ಈ ಸಮಿತಿ ಮೇ 30 ರಂದು ರಾಜಧಾನಿಯಲ್ಲಿ ಏಳು ಸಾವಿರಕ್ಕೂ ಅಧಿಕ ಜನರನ್ನು ಸೇರಿಸಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿತು. ಜಾಥಾದುದ್ದಕ್ಕೂ ಹತ್ತಾರು ಸಾವಿರ ಜನರನ್ನು ಜಾಗೃತಗೊಳಿಸಿತ್ತು. ಶಾಶ್ವತ ನೀರಾವರಿ ಸಲುವಾಗಿ ಇರುವ ಎಲ್ಲಾ ಅವಕಾಶಗಳನ್ನು, ಬಳಸಲು ಒತ್ತಾಯಿಸಿ ನಡೆದ ಈ ಬೃಹತ್ ಸಭೆಯಲ್ಲಿ ಹೋರಾಟ ಸಮಿತಿಯ ಅಧ್ಯಕ್ಷರಾದ ಜಿ.ವಿ. ಶ್ರೀರಾಮರೆಡ್ಡಿ, ಉಪಾಧ್ಯಕ್ಷರಾದ ಜ್ಯೋತಿರೆಡ್ಡಿ , ಜನತಾದಳ(ಎಸ್) ನ ಮುಖಂಡರಾದ ಸಿ. ನಾರಾಯಣ ಸ್ವಾಮಿ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಕ.ಪ್ರಾ.ರೈ.. ಸಂಘದ ಪ್ರ. ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಇನ್ನೂ ಮುಂತಾದ ಅನೇಕ ಮುಖಂಡರು ಪಾಲ್ಗೊಂಡಿದ್ದರು. ಸರ್ಕಾರದ ಪರವಾಗಿ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಹಾಜರಾಗಿ ಮನವಿ ಪತ್ರ ಸ್ವೀಕರಿಸಿದರು.

ಗೃಹ ಮಂತ್ರಿಗಳು ಮನವಿ ಪತ್ರ ಸ್ವೀಕರಿಸುವಂತೆ ಪ್ರಭಾವ ಬೀರಿದ್ದು, ಬಹಿರಂಗ ಸಭೆ ಮಾತ್ರವಲ್ಲ ಇದಕ್ಕಿಂತ ಮುಖ್ಯವಾದ ಮೂರು ದಿನಗಳ ಚಾರಿತ್ರಿಕ ಕಾಲ್ನಡಿಗೆ ಜಾಥಾ ಎಂಬುದನ್ನು ಎಂದಿಗೂ ಮರೆಯುವಂತಿಲ್ಲ. ಅದು ಒಂದಲ್ಲ ನಾಲ್ಕು ಜಾಥಾ....

ಎಲ್ಲೆಲ್ಲಿಂದ ಹೊರಟವು ಈ ಜಾಥಾ.

ಜಿಲ್ಲೆಯ ಭೀಕರ ಜಲಕ್ಷಾಮದಿಂದ ಹೊರಬರಲು ಶಾಶ್ವತ ನೀರಾವರಿ ಯೋಜನೆಗಾಗಿ ಒತ್ತಾಯಿಸಲು ಪಕ್ಷಾತೀತವಾಗಿ ತೀರ್ಮಾನ ಮಾಡಿದ ಜನತೆ ಹೋರಾಟ ಸಮಿತಿಯ ಅಡಿಯಲ್ಲಿ 4 ತಂಡಗಳಾಗಿ ಜಾಥಾವನ್ನು ವಿಭಜಿಸಿಕೊಂಡು 27 ರಂದು ಜಿಲ್ಲೆಯಿಂದ ರಾಜಧಾನಿ ಕಡೆಗೆ ಹೊರಟವರು. ಬಾಗೇಪಲ್ಲಿ, ಗೌರಿಬಿದನೂರು ಬಂಗಾರಪೇಟೆ ಶಿಡ್ಲಘಟ್ಟಗಳಿಂದ ಹೊರಟ ಜಾಥಾಗಳು ದಾರಿಯುದ್ದಕ್ಕೂ ನೂರಾರು ಹಳ್ಳಿಗಳ ಜನರನ್ನು ರೋಮಾಂಚನಗೊಳಿಸಿವೆ. ನರಗುಂದ, ಸವಲಗುಂದ ಹೋರಾಟವನ್ನು ಕಂಡಿದ್ದ ಅಥವಾ ಕೇಳಿದ್ದ ಜನರಲ್ಲಿ ಮರಳಿ ಆ ನೆನಪುಗಳನ್ನ ತರಿಸಿವೆ.



ಬೆಂಕಿಯುಂಡೆಗಳನ್ನು ಉಗುಳುವ ಮೇ ತಿಂಗಳ ಸೂರ್ಯನ ತಾಪವನ್ನು ಸೀಳುತ್ತಾ ಕಾದ ಹೆಂಚಿನಂತೆ ಸುಡುವ ಧರೆಯನ್ನು ಬರಿಗಾಲಲ್ಲಿ ಮೆಟ್ಟುತ್ತಾ ಸಾಗಿದ ಚಳುವಳಿಗಾರರಿಗೆ ದಾರಿಯುದ್ದಕ್ಕೂ ಜನತೆಯ ಆದರದ ಆತಿಥ್ಯ.

ಕುಡಿಯಲು ನೀರು, ಮಜ್ಜಿಗೆ, ಪಾನಕ ನೀಡುವ ಮೂಲಕ ಹೋರಾಟಕ್ಕೆ ತಮ್ಮದೂ ತುಂಬು ಬೆಂಬಲ ಮುಂಚಿತವಾಗಿ ತಿಳಿದಿದ್ದರೆ ನಾವೂ ಬರುತ್ತಿದ್ದೆವು. ನಮಗೇಕೆ ತಿಳಿಸಲಿಲ್ಲವೆಂಬ ಆರೋಪ. ಊರೂರೇ ನಿಂತು ಏರ್ಪಡಿಸಿದ್ದ ಬಹಿರಂಗ ಸಭೆ ಪಕ್ಷಾತೀತ ಸಹಕಾರ ಎಲ್ಲರ ಮನದಾಸೆ ಹಂಬಲ ಒಂದೇ, ಜಿಲ್ಲೆಗೆ ನೀರು ಬೇಕು. ನೀರು ಬೇಕು ನಾವು ಬದುಕಬೇಕು.

ಜನಮನ ಹೊಕ್ಕ ಜಾಥಾಗಳು

ಬಾಗೇಪಲ್ಲಿಯಿಂದ ಹೊರಟ ಜಾಥಾ ರಾತ್ರಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಪೆರೇಸಂದ್ರದಲ್ಲಿ ತಂಗಿತು. ತಂಗುವ ಮುಂಚೆ ಬೃಹತ್ ಬಹಿರಂಗ ಸಭೆ ಸಭೆಯ ನಂತರ ಊರಿನ ಜನತೆಯ ಆತಿಥ್ಯ 28 ರಂದು ಪೆರೇಸಂದ್ರದಿಂದ ಹೊರಟ ಜಾಥಾ ಮಧ್ಯಾಹ್ನ ಸೇರಿದ್ದು ಚಿಕ್ಕಬಳ್ಳಾಪುರ ಪಟ್ಟಣ. ಜೂನಿಯರ್ ಕಾಲೇಜು ಮೈದಾನದಲ್ಲಿ ಬೃಹತ್ ಬಹಿರಂಗ ಸಭೆ ನಡೆಸಿದ ಜಾಥಾ ರಾತ್ರಿ ಅಲ್ಲಿಯೇ ತಂಗಿ 29 ರಂದು ಶಿಡ್ಲಘಟ್ಟ ತಂಡದೊಂದಿಗೆ ಸೇರಿ ಮುಂದಕ್ಕೆ ಪ್ರಯಾಣ ಮಧ್ಯಾಹ್ನ ದೇವನಹಳ್ಳಿಯಲ್ಲಿ ಬಹಿರಂಗ ಸಭೆ ಜರುಗಿಸಿ ಬೆಂಗಳೂರಿನ ಹೆಬ್ಬಾಳ ಕಡೆಗೆ ಮರಳಿ ಪ್ರಯಾಣ.

ಗೌರಿಬಿದನೂರಿನಿಂದ ಹೊರಟ ಜಾಥಾ ಅಂದು ರಾತ್ರಿ ಉಳಿದದ್ದು ತಿಪ್ಪಗಾನಹಳ್ಳಿ, ರಾತ್ರಿಗೊಂದು ಬಹಿರಂಗ ಸಭೆ ಮೇ 28 ರಂದು ದೊಡ್ಡಬಳ್ಳಾಪುರದ ಕಡೆಗೆ ಜಾಥಾ ಸಂಜೆ ಅಲ್ಲಿಯೇ ಜರುಗಿದ ಬಹತ್ ಬಹಿರಂಗ ಸಭೆ ರಾತ್ರಿ ತಂಗಿ ಬೆಳಗ್ಗೆ ಹೊರಟದ್ದು ಯಲಹಂಕದ ಕಡೆಗೆ. ಅಲ್ಲಿ ಸೇರಿಕೊಂಡಿತು ಬಾಗೇಪಲ್ಲಿ ಶಿಡ್ಲಘಟ್ಟದ ಜಂಟಿ ಜಾಥಾ.

ಕೋಲಾರದಿಂದ ಹೊರಟ ಜಾಥಾ ರಾತ್ರಿ ನರಸಾಪುರದಲ್ಲಿ ತಂಗಿ ಬಹಿರಂಗಸಭೆ ನಡೆಸಿತು ಬಂಗಾರಪೇಟೆಯಿಂದ ಹೊರಟ ಜಾಥಾ ಅಂದು ರಾತ್ರಿ ತಂಗಿದ್ದು ಮಾಲೂರಿನಲ್ಲಿ ಎರಡೂ ತಂಡಗಳು 28 ರಂದು ಹೊಸಕೋಟೆಯಲ್ಲಿ ಜೊತೆಗೂಡಿ ಅಲ್ಲಿಯೇ ಉಳಿದವು. 29 ರಂದು ನಗರದ ಕೃಷ್ಣ ರಾಜಪುರದಲ್ಲಿ ರಾತ್ರಿ ಕಳೆದು ಪ್ರಯಾಣ ಬೆಳೆಸಿತು.

ನಾಲ್ಕು ತಂಡಗಳು ಬೆಂಗಳೂರಿನ ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದಲ್ಲಿ ಮೇಳೈಸಿದ್ದು ಮೇ 30 ರಂದು ಮೇಖ್ರಿ ವೃತ್ತದಿಂದ ಹೊರಟ ಸಾವಿರಾರು ಹೋರಾಟಗಾರರು ವಿಧಾನಸೌಧ ತಲುಪಿ ಬಹಿರಂಗ ಸಭೆ ನಡೆಸಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಶಾಶ್ವತ ನೀರಾವರಿಗಾಗಿ ಆಗ್ರಹಿಸುವ ಮೂಲಕ ಜಾಥಾವನ್ನು ಅಂತಿಮಗೊಳಿಸಿದರು.

- ಎನ್. ಪ್ರಭಾ

ಸಿರಗುಪ್ಪ ಪಂಚಾಯತಿ ಕಛೇರಿ ಮುಂದೆ ಕೂಲಿಕಾರರ ಧರಣಿ

ಕೂಲಿಗಾಗಿ ಕಾಳು ಯೋಜನೆಯ ಸಮಗ್ರ ಜಾರಿ ಸೇರಿದಂತೆ ಹಲವು ಬೇಡಿಕೆಗಳಿಗೆ ಒತ್ತಾಯಿಸಿ ಸಿರುಗುಪ್ಪ ತಾಲೂಕು ಬಲುಕುಂದ ಗ್ರಾಮ ಪಂಚಾಯ್ತಿ ಕಛೇರಿ ಎದುರು ಕೂಲಿಕಾರರು ಧರಣಿ ನಡೆಸಿದರು.

ಜೂನ್ 12 ರಂದು ನಡೆದ ಈ ಪ್ರತಿಭಟನೆ ಸಂದರ್ಭದಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯ ಫಲಾನುಭವಿಗಳಿಂದ ಹಣ ವಸೂಲಿ ವಿರೋಧಿಸಿದರು. ರೇಷನ್ ಕಾರ್ಡ್ ವಿತರಣೆ, ರೇಷನ್ ನೀಡಿಕೆಯಲ್ಲಿ ಹೆಚ್ಚಳಕ್ಕಾಗಿ ಮತ್ತು ವಸತಿ ಹೀನರಿಗೆ ವಸತಿ ನೀಡಲು ಒತ್ತಾಯಿಸಿ ಮನವಿ ಪತ್ರ ಸಲ್ಲಿಸಿದರು.

ಬೂದಗುಪ್ಪ ಮತ್ತು ಆಕ್ಕಪಕ್ಕದ ಹಳ್ಳಿಗಳ ನೂರಾರು ಕೂಲಿಕಾರರು ಈ ಧರಣಿಯಲ್ಲಿ ಪಾಲ್ಗೊಂಡಿದ್ದರು. ಗಾದಿ ಲಿಂಗಪ್ಪ, ಯರಮ್ಮ ಮತ್ತಿತರ ಸಂಗಾತಿಗಳು ಪ್ರತಿಭಟನೆಯ ನೇತೃತ್ವ ವಹಿಸಿದರು.

ಚೋಮನ ದುಡಿ..

ಪುಟ 12 ರಿಂದ

ಬದುಕು ಸಾಗಿಸಬೇಕಾಗಿಬಂದಿರುವುದರ ಮೂಲ ಭೂ ಸಮಸ್ಯೆಯಲ್ಲಿದೆ ಎಂದು ತೋರಿದರು. ಇದಾಗಿ ಈಗ ಎಪ್ಪತ್ತೈದು ವರ್ಷಕಳೆದಿದೆಯಾದರೂ ನಾವು ಭೂ ಸಮಸ್ಯೆಯನ್ನು ಬಗೆಹರಿಸಿದೆಯೇ? ಇಲ್ಲ ಬದಲಾಗಿ ಕೇವಲ ತೇಪೆ ಹಾಕುವ ಸುಧಾರಣೆಯನ್ನು ನಾವು ಮಾಡುತ್ತಿದ್ದೆವೆ. ಬೀಟಿಂಗ್ ಆಬೌಟ್ ಬುಶ್ ಎಂದಂತೆ ನಮ್ಮ ಸರಕಾರ ಹುತ್ತ ಬಡಿಯಿತೇ ಹೊರತು ಹಾವನ್ನು ಕೊಲ್ಲಲಿಲ್ಲ. ಅಂದರೆ ದಲಿತಪಕ್ಷಪಾತಿಯಾಗಿ ಭೂಸುಧಾರಣೆ ಆಗಲೇ ಇಲ್ಲ. ಇಂದಿಗೂ ಭೂಮಾಲಿಕತ್ವದ ಪ್ರಭಾವವಿರುವ ಗ್ರಾಮೀಣ ಪ್ರದೇಶದಲ್ಲಿ ದಲಿತರು ಸಾರ್ವಜನಿಕ ನೀರು ಮುಟ್ಟುವಂತಹ ಸ್ಥಿತಿಯಿಲ್ಲ, ದಲಿತರು ಸಣ್ಣ ಪ್ರತಿಭಟನೆ ಮಾಡಿದರೆ ಸಾಕು, ಮೇಲು ಜಾತಿಗಳು ಅಂದರೆ ಭೂಮಾಲಿಕರು ದಲಿತರನ್ನು ಕೆಲಸಕ್ಕೆ ಕರೆಯದಂತಹ ಬಹಿಷ್ಕಾರ ಹಾಕುತ್ತಾರೆ. ಜೀತವನ್ನವಲಂಬಿಸಿದ ದಲಿತರು ಅನಿವಾರ್ಯವಾಗಿ, ಅಸಹಾಯಕರಾಗಿ ಸೋಲಬೇಕಾಗುತ್ತದೆ. ಭೂ ಸಮಸ್ಯೆಯನ್ನು ಬಗೆಹರಿಸುವುದರ ಮೂಲಕವೂ ಬೇರೆ ಉದ್ಯೋಗ ಒದಗಿಸುವ ಮೂಲಕವೂ ದಲಿತರಿಗೆ ಆರ್ಥಿಕ ಸ್ವಾತಂತ್ರ್ಯವನ್ನೊದಗಿಸಿದಾಗಲೇ ಚೋಮ ಮತ್ತು ಅವನ ಮಕ್ಕಳು ಗೌರವದಿಂದ ಬದುಕುವುದು ಸಾಧ್ಯವಾಗುತ್ತದೆ. ಅಸ್ಪೃಶ್ಯತೆಯ ನಾಶಕ್ಕೆ ಅದು ಮುಖ್ಯ ಶಕ್ತಿಯಾಗಿದೆ.

ಇದೇ ಹೊತ್ತಿನಲ್ಲಿ ಮುಲ್ಕಾರಾಜ ಆನಂದ ಅವರು 'ಅನ್ ಟೆಚ್ಚಬಲ್' (ಅಸ್ಪೃಶ್ಯ) ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಅದು ಉತ್ತರ ಭಾರತದ ನಗರ ಪ್ರದೇಶದಲ್ಲಿಯ ಚಿತ್ರಣ. ಅಲ್ಲಿ ಬಾಖಾ ಎಂಬ ಹುಡುಗನ ಒಂದು ದಿನದ ತೊಳಲಾಟದ ಚಿತ್ರವಿದೆ. ಅಲ್ಲಿ ಆತ ಮಲತೆಗೆಯುವ ಕೆಲಸಗಾರನಾಗಿರುತ್ತಾನೆ. ಅಸ್ಪೃಶ್ಯತೆ ಹೊರಿಸುವ ಅಸಹಾಯಕತೆ ಬಾಖಾನನ್ನು ಹೇಗೆ ದುರ್ಬಲಗೊಳಿಸುತ್ತದೋ ಇಲ್ಲಿ ಚೋಮನ ಸ್ಥಿತಿಯೂ ಹಾಗೆ ಆಗಿರುತ್ತದೆ. ಅಲ್ಲಿ ಬಾಖಾ ಕೊನೆಗೆ ಗಾಂಧೀಜಿಯವರ ಭಾಷಣಕೇಳಿ ಸವರ್ಣೀಯರ ಮನಸ್ಸಿನ ಪರಿವರ್ತನೆಯಿಂದ ಅಸ್ಪೃಶ್ಯತೆ ನಿರ್ಮೂಲನವಾಗಬಹುದೆಂದು ಆಂಶಿಕವಾಗಿ ಗ್ರಹಿಸಿದರೂ ಇನ್ನೊಂದು ಪಾತ್ರ ಇಖ್ಬಾಲ್ ನಾಥನ ಮಾತಿನಿಂದ ಯಂತ್ರಗಳ ಬಳಕೆಯಿಂದ ಉದ್ಯೋಗ ಬದಲಾವಣೆಯಾಗಿ ಅಸ್ಪೃಶ್ಯತೆ ನಾಶವಾಗುತ್ತದೆಂಬ ಗ್ರಹಿಕೆಗೆ ತಲುತ್ತಾನೆ. 'ಚೋಮ'ನಿಗೆ ಅಂಥ ಪ್ರಜ್ಞೆಯೇನೂ ಇಲ್ಲ. ಯಾಕೆಂದರೆ ಚೋಮ ಬದುಕುತ್ತಿರುವುದು ತೀರ ದೂರ ಮೂಲೆಯಲ್ಲಿರುವ ಹಳ್ಳಿ. ಆದರೆ ಚೋಮನನ್ನು ಚಿತ್ರೀಸುವ ಕಾರಂತರಲ್ಲಿ ಆ ಭಾವನೆ ಇಲ್ಲವೆಂದಲ್ಲ. ಚೋಮನ ಜೀವನವನ್ನು ಮಾನವೀಯವಾಗಿ ಕಂಡು ಚಿತ್ರಿಸುವ ಕಾರಂತರ ಚೋಮ ಕೊನೆಯ ಚಿತ್ರಣ ಕುಣಿತದ ಆವೇಶ, ಕೈಯಲ್ಲಿ ಡಮರು, ಇವೆಲ್ಲ ಶಿವನ ತಾಂಡವ ನೃತ್ಯದ ನೆನಪನ್ನು ತರುವುದರ ಮೂಲ ಚೋಮನನ್ನು ದೈವೀಮಟ್ಟಕ್ಕೆ ಎತ್ತರಿಸಲಾಗಿದೆ.

ಆದರೆ ಕಾದಂಬರಿಯ ಧ್ವನಿ ಇಷ್ಟಕ್ಕೆ ನಿಲ್ಲುವುದಿಲ್ಲ.

'ಅನ್ ಟಚೆಬಲ್' ದಲ್ಲಿಯ ಬಾಖಾ ಸೋದರಿಯ ಮೇಲೆ ದೇವಸ್ಥಾನದ ಪೂಜಾರಿಯೊಬ್ಬ ಕೈಮಾಡಲು ಪ್ರಯತ್ನಿಸುತ್ತಾನೆ. ಅಂತ ಒಂದು ಲೈಂಗಿಕ ದೌರ್ಜನ್ಯ ಚೋಮನದುಡಿಯಲ್ಲೂ ಬರುತ್ತದೆ. ಚೋಮನ ಮಗಳ ಮೇಲೆ ಕಾ ಪ್ಲಾಂಟೇಶನ್ ಮೇನೇಜರ್ ಹಾಗೆಯೇ ಸೇರೆಗಾ ಲೈಂಗಿಕ ಆಕ್ರಮಣ ನಡೆಸುತ್ತಾರೆ. ಇಲ್ಲಿ ಇವರ್‍ಯಾರು ಪುರೋಹಿತರಲ್ಲ. ಆದರೆ ಇವರು ಸಾಹುಕಾರರು ಅಂದರೆ ಇಲ್ಲಿ ದೌರ್ಜನ್ಯದ ಕಾರಣವಾಗುವುದು ಅವಳ ಬಡತನ ಮತ್ತು ಜೀತಗಾರಿಕೆ.

ಹಾಗೆಯೇ ಚೋಮ ಸತ್ತಾಗಿನ ವರ್ಣನೆಯನ್ನು ನೋಡಿ. "ಏನೋ ಭೀತಿಯೆನಿಸಿ ಬೆ ಓಡಿಬಂದಳು. ಅಡ್ಡವಾಗಿ ಎತ್ತುಗಳೆರಡೂ ಬಂದು ನಿಂತಿದ್ದವು. ಬಾಡು ನಾಯಿಯೂ ಬಂದು ನಿಂತಿತ್ತು."

ಅಂದರೆ ಜೋಮ ಸಾಯುವಾಗಿನ ಶಿವ ಪ್ರತಿಮೆಯ ಚಿತ್ರ ಮಾಸಿಹೋಗಿ ಮರು ಬೇಸಾಯಗಾರನ ಚಿತ್ರ ಬಂದು ನಿಲ್ಲುತ್ತದೆ. ಇದು ಮತ್ತೆ ಭೂಸಮಸ್ಯೆಯನ್ನೇ ಪ್ರಸ್ತುತಪಡಿಸುತ್ತನೆ. ಇದು ಚೋಮನ ದುಡಿಯನ್ನ ಪ್ರಸ್ತುತತೆಯನ್ನು ಇಂದಿಗೂ ಸಾರುತ್ತದೆ.

ಮುಂದಿನ ಸಾರ್ವತ್ರಿಕ ಚುನಾವಣೆಯ ನಾಯಕತ್ವ ಯಾರದ್ದು? ವಾಜಪೇಯಿ ಅಥವಾ ಅಡ್ವಾಣಿಯೇ ಎಂಬ ಚರ್ಚೆಯನ್ನು ಸಂಘ ಪರಿವಾರ ಹರಿಯಬಿಟ್ಟಿದೆ. ತೀವ್ರಗಾಮಿ-ಮಂದಗಾಮಿ ಎಂಬುದಕ್ಕೆ ನಿಜವಾಗಿ ಅರ್ಥವಿದೆಯೇ?

ವಾಜಪೇಯಿ ಅಥವಾ ಅಡ್ವಾಣಿ ಎಂಬ ಮತ್ತೊಂದು ನಾಟಕ

ಕಳೆದವಾರವಿಡೀ ಬಿಜೆಪಿ ಇನ್ನೊಂದು ನಾಟಕವಾಡಿ ಜನರನ್ನು ದಾರಿತಪ್ಪಿಸಲು ಪ್ರಯತ್ನಿಸಿತು. ಬಿಜೆಪಿ ಅಧ್ಯಕ್ಷರೇ ಇದನ್ನು ಆರಂಭಿಸಿದರು. ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ವಾಜಪೇಯಿ ಮತ್ತು ಅಡ್ವಾಣಿ ಜಂಟಿಯಾಗಿ ಬಿಜೆಪಿಗೆ ನೇತೃತ್ವ ನೀಡುತ್ತಾರೆ ಎಂದು ಪ್ರಕಟಪಡಿಸಿ. ಪ್ರಧಾನಮಂತ್ರಿಗಳು ತಿರುಗೇಟು ನೀಡಿ ತನ್ನ ವರಿಷ್ಠತೆಯನ್ನು ಮೆರೆಸಿದರು. ಇಡೀ ಪಕ್ಷ ತಲೆಬಾಗಿ ಜೀ ಹುಜೂರ್ ಎಂದಿತು. "ರೋಲ್ ಬ್ಯಾಕ್" ಅಧ್ಯಕ್ಷರೆನ್ನುವುದು ವೆಂಕಯ್ಯ ನಾಯ್ಡು ಈಗಾಗಲೇ ಗಳಿಸಿರುವ ಕೀರ್ತಿತಾನೆ!

ಒಬ್ಬ ಬಿಜೆಪಿ ಮುಖಂಡ 'ಮಂದಗಾಮಿ' ಇನ್ನೊಬ್ಬ 'ತೀವ್ರಗಾಮಿ' ಎಂದೆಲ್ಲಾ ಬಿಂಬಿಸುವ ಪ್ರಶ್ನೆ ಇದರ ಹಿಂದಿದೆ. ವಾಜಪೇಯಿಯವರು ಅಡ್ವಾನಿಗಿಂತ 'ಮಂದಗಾಮಿ' ಅಥವಾ 'ಸೌಮ್ಯವಾದಿ'. ಅದೇ ರೀತಿ ನರೇಂದ್ರ ಮೋದಿಗಿಂತ ಅಡ್ವಾಣಿ 'ಮಂದಗಾಮಿ'. ನರೇಂದ್ರ ಮೋದಿ ತೋಗಾಡಿಯಾರಿಗಿಂತ 'ಮಂದಗಾಮಿ'. ಹೀಗೆ ಸಾಗುತ್ತದೆ ಈ ಹುಸಿವರ್ಣನೆ. ನಿಜಸಂಗತಿಯೆಂದರೆ ಇವರೆಲ್ಲಾ ಆರ್.ಎಸ್.ಎಸ್. ಲಾಯಕ್ಕೆ ಸೇರಿದವರೇ. ಹಿಂದೆ ಹಿಟ್ಲರ್ ತನ್ನ ನಾಝಿ ಸರ್ವಾಧಿಕಾರವನ್ನು ಹೇರುವ ಮೊದಲು ಇಂತದ್ದೇ 'ಭಿನ್ನತೆ'ಗಳನ್ನು ಜರ್ಮನಿಯ ಸಾರ್ವಜನಿಕರ ಮೇಲೆ ಹೇರಿದ್ದ ಎನ್ನುವುದನ್ನು ನೆನಪಿಸಿಕೊಳ್ಳಬೇಕು. ವಿವಿಧ ಜನವಿಭಾಗಗಳ ಮುಂದಿಡಲು ನಾಝಿ ಫ್ಯಾಸಿಸಂಗೆ ಒಬ್ಬ ಗೋಬೆಲ್ಸ್, ಒಬ್ಬ ಹಿಮ್ಲರ್, ಒಬ್ಬ ಗೋರಿಂಗ್ ಇತ್ಯಾದಿ ಬೇಕಾಗಿತ್ತು. ಫ್ಯಾಸಿಸ್ಟ್ ದೈತ್ಯ ಇವರೆಲ್ಲಾ ಸೇರಿಯೇ ಆದದ್ದು.

ಚರ್ವಿತ ಚರ್ವಣವೆನಿಸಿದರೂ ಸ್ವಲ್ಪ ಇತಿಹಾಸವನ್ನು ನೆನಪಿಸಿಕೊಳ್ಳುವ ಅಗತ್ಯವಿದೆ. 1951ರಲ್ಲಿ ಶ್ಯಾಮಪ್ರಸಾದ್ ಮುಖರ್ಜಿಯವರು ನೆಹರೂ ಮಂತ್ರಿಮಂಡಲದಿಂದ ರಾಜಿನಾಮೆ ನೀಡಿ ಒಂದು ರಾಜಕೀಯ ಪಕ್ಷ ಕಟ್ಟುವ ಯೋಜನೆಯಲ್ಲಿದ್ದರು. ಆಗಷ್ಟೇ ಗಾಂಧಿಜಿ ಹತ್ಯೆಯ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಮೇಲೆ ಹಾಕಿದ್ದ ನಿಷೇಧವನ್ನು ತೆಗೆಯಲಾಗಿತ್ತು. ಇದಕ್ಕೆ ಶರತ್ತಾಗಿ ಗೃಹಮಂತ್ರಿ ಸರ್ದಾರ್ ಪಟೇಲರು ಆರ್.ಎಸ್.ಎಸ್.. ಇನ್ನು ಮುಂದೆ ರಾಜಕೀಯದಲ್ಲಿ ಭಾಗವಹಿಸುವುದಿಲ್ಲ ಎಂಬ ವಚನವನ್ನು ಆರ್‌ಎಸ್‌ಎಸ್ ಮುಖ್ಯಸ್ಥ ಗೋಲ್ವಾಲ್ಕರ್‌ರಿಂದ ಪಡೆದಿದ್ದರು. ಈ ರೀತಿ ರಾಜಕೀಯ ಪಾತ್ರ ನಿರಾಕರಿಸಲ್ಪಟ್ಟ ಆರ್‌ಎಸ್‌ಎಸ್ ದೇಶದ ರಾಜಕೀಯದಲ್ಲಿ ತೊಡಗುವ ಅವಕಾಶಗಳನ್ನು ಹುಡುಕುತ್ತಿತ್ತು. ಅದು ಶ್ಯಾಮುಪ್ರಸಾದ್ ಮುಖರ್ಜಿಯವರ ಯೋಚನೆಯನ್ನು ಬಳಸಿಕೊಂಡಿತು. ಅವರಿಗೆ ಒಂದು ರಾಜಕೀಯ ಪಕ್ಷವನ್ನು ಆರಂಭಿಸಲು ನಾಲ್ವರು ಪ್ರಮುಖ ಪ್ರಚಾರಕರನ್ನು ಗೋಲ್ವಾಲ್ಕರ್ ಕಳಿಸಿದರು. ಈ ರೀತಿ 1957ರಲ್ಲಿ ಜನಸಂಘ ಜನ್ಮತಾಳಿತು.

ಸಾವಿರಾರು ಜನ ಬಿಸಿಲಿನ ಝಳದಿಂದ ಸಾಯುತ್ತಿರುವಾಗ, ಗ್ರಾಮೀಣ ಭಾರತದಲ್ಲಿ ಲಕ್ಷಾಂತರ ಜನ ಸಂಕಟ ಪಡುತ್ತಿರುವಾಗ ಇಂತಹ ರಾಜಕೀಯ ನಾಟಕಗಳನ್ನು ನಡೆಸಿ ಜನರ ಗಮನ ತಪ್ಪಿಸಲು ಪ್ರಯತ್ನಿಸುವ ಇಂತಹ ಒಂದು ಸರಕಾರವಿದೆಯೆಂಬುದು ಭಾರತದ ದುರಂತ.

ಈ ಪ್ರಚಾರಕರು ಯಾರು? ದಿವಂಗತ ದೀನದಯಾಳ ಉಪಾಧ್ಯಾಯ, ಅಟಲ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಮತ್ತು ಸುಂದರ ಸಿಂಗ್ ಭಂಡಾರಿ. ಇವರಲ್ಲಿ ಈಗ ಬದುಕಿರುವವರಲ್ಲಿ ಒಬ್ಬರು ಪ್ರಧಾನಮಂತ್ರಿ, ಇನ್ನೊಬ್ಬರು ಉಪಪ್ರಧಾನಮಂತ್ರಿ ಮತ್ತು ಗೃಹಮಂತ್ರಿ, ಮತ್ತೊಬ್ಬರು ಗುಜರಾತಿನಲ್ಲಿ ರಾಜ್ಯಪಾಲರಾಗಿ ಆ ರಾಜ್ಯದಲ್ಲಿನ ಸಾಮೂಹಿಕ ನರಹತ್ಯೆಯ ಉಸ್ತುವಾರಿ ನೋಡಿಕೊಂಡವರು. ಅಂದಿನಿಂದ ಜನಸಂಘ (ನಂತರ ಅದರ ಅವತಾರವಾದ ಬಿಜೆಪಿ) ಆರ್.ಎಸ್.ಎಸ್.ನ ರಾಜಕೀಯ ಅಂಗವಾಗಿ ಕೆಲಸ ಮಾಡುತ್ತಾ ಬಂದಿದೆ. ಈ ವ್ಯಕ್ತಿಗಳು ರಾಜಕೀಯ ಪಕ್ಷ ಮತ್ತು ಸರಕಾರದೊಳಗೆ ಆರ್.ಎಸ್.ಎಸ್. ಪ್ರಚಾರಕರಾಗಿ ಕೆಲಸ ಮಾಡುತ್ತಿದ್ದಾರೆ. ಭಾರತದ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಅತ್ಯಂತ ಅಸಹಿಷ್ಣು 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಆರ್.ಎಸ್.ಎಸ್. ಅಜೆಂಡಾದ ಜ್ಯಾರಿಯಲ್ಲಿ ತೊಡಗಿದ್ದಾರೆ.

ಹೀಗೆ ಈ 'ಮಂದಗಾಮಿ' 'ತೀವ್ರಗಾಮಿ' ಚರ್ಚೆ ನಿಜ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆದು ಅವರಲ್ಲಿ ಗೊಂದಲ ಸೃಷ್ಟಿಸಲಿಕ್ಕಷ್ಟೆ. ಪ್ರಧಾನ ಮಂತ್ರಿಗಳು ನಿಜವಾಗಿ ಆರ್‌ಎಸ್‌ಎಸ್ ಅಜೆಂಡಾವನ್ನು ಜ್ಯಾರಿಗೊಳಿಸುತ್ತಿದ್ದಾರೆ ಎಂಬುದು ಅವರ ವಿವಿಧ ಹೇಳಿಕೆಗಳನ್ನು ಜಾಗರೂಕತೆಯಿಂದ ಗಮನಿಸಿದರೆ ಸ್ಪಷ್ಟವಾಗುತ್ತದೆ. ತಾನು ಮೊದಲು 'ಸ್ವಯಂಸೇವಕ' ನಂತರವೇ ಪ್ರಧಾನಮಂತ್ರಿ ಎಂದು ಅಮೆರಿಕಾದಲ್ಲಿ ಹೆಮ್ಮೆಯಿಂದ ಹೇಳಿಕೊಂಡವರು ಇವರೇ ತಾನೆ? ಭಾರತದಲ್ಲಿ ಮುಸ್ಲಿಮರು 'ಪರಿಷ್ಕಾರ' ವನ್ನು ಸ್ವೀಕರಿಸಿ ಹಿಂದೂ ಯಜಮಾನಿಕೆಯನ್ನು ಒಪ್ಪಿಕೊಳ್ಳಬೇಕು ಎಂದವರು (ಆರ್ಗನೈಸರ್ ಮೇ 7, 1995) ಇವರೇ. ಇತ್ತೀಚಿಗೆ ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ದೇವಸ್ಥಾನದ ನಿರ್ಮಾಣದ ಆಂದೋಲನ "ರಾಷ್ಟ್ರೀಯ ಭಾವನೆ"ಯ ಪ್ರತಿಬಿಂಬ ಎಂದು ಸಾರಿದವರೂ ಇವರೇ. ಹೀಗೆ ಮೂಲಭೂತವಾದಿ 'ಹಿಂದೂ ಭಾವನೆ'ಯನ್ನು (ಬಹಳಷ್ಟು ಹಿಂದೂಗಳು ಆರ್.ಎಸ್.ಎಸ್.ನ 'ಹಿಂದೂ ರಾಷ್ಟ್ರ' ಕಣ್ಣೋಟವನ್ನು ಒಪ್ಪುವುದಿಲ್ಲ) 'ರಾಷ್ಟ್ರೀಯ ಭಾವನೆ' ಯೆಂದು ಹೇಳಲಾಯಿತು. ಇದು ಹಿಂದೂಗಳು ಮಾತ್ರ ದೇಶಭಕ್ತರು, ಭಾರತದಲ್ಲಿ ವಾಸಿಸುವ ಬೇರೆಲ್ಲಾ ಧರ್ಮದವರನ್ನು ದೇಶಭಕ್ತಿ ಇಲ್ಲದವರು ಎಂದೇ ಪರಿಗಣಿಸಬೇಕು ಎಂದು ಕಟುವಾಗಿ ಹೇಳಿದ ಗೋಲ್ವಾಲ್ಕರ್ ಮಾತುಗಳ ಪ್ರತಿಧ್ವನಿಯಲ್ಲದೆ ಮತ್ತೇನು? ಬಾಬ್ರಿ ಮಸೀದಿಯನ್ನು ಕೆಡಹುವಾಗ ಅವರು ಕವನ ರಚಿಸುತ್ತಿದ್ದರಂತೆ. (ಅದನ್ನು ಯಾರೂ ನೋಡಿಲ್ಲ) "ಸಂಘ ನನ್ನ ಆತ್ಮ" ಎಂದು ಒಂದೊಮ್ಮೆ ವಾಜಪೇಯಿ ಸಾರಿದ್ದರು. ಸತತವಾಗಿ ಅವರು ಅದಕ್ಕೆ ಬದ್ದರಾಗಿದ್ದಾರೆ, ಈಗಲೂ ಬದ್ಧರಾಗಿದ್ದಾರೆ.

ಈಗ ಅವರು, ರಾಜಕಾರಣಿಗಳು ಅಯೋಧ್ಯಾ ವಿವಾದದಿಂದ ದೂರ ಇರಬೇಕೆಂದು ಸಾರುವ ಉದ್ಧಟತನ ತೋರುತ್ತಿದ್ದಾರೆ. ಹಾಗಿದ್ದರೆ, ಅವರ ಸರಕಾರ ವಿವಾದಿತ ಮತ್ತು ಸರಕಾರ ವಹಿಸಿಕೊಂಡ ಜಮೀನನ್ನು ವಿಹೆಚ್‌ಪಿಗೆ ದೇವಸ್ಥಾನ ಕಟ್ಟಲು ವಹಿಸಿಕೊಡಲು ಸುಪ್ರಿಂಕೋರ್ಟಿನ ಅನುಮತಿ ಕೇಳಲು ಏಕೆ ಮುಂದಾಯಿತು? ದೇವಸ್ಥಾನ ಕಟ್ಟುವ ಚಳುವಳಿ 'ರಾಷ್ಟ್ರೀಯ ಭಾವನೆ'ಯ ಪ್ರತಿಬಿಂಬ ಹೇಗಾಯಿತು? ವಾಜಪೇಯಿಯವರ ಮಾತಿನ ಅರ್ಥ ಇಷ್ಟೇ - ಅಯೋಧ್ಯಾ ಪ್ರಶ್ನೆಯನ್ನು ಆರ್.ಎಸ್.ಎಸ್., ಬಿಜೆಪಿ ಮಾತ್ರವೇ ಹಿಂದೂ ವೋಟ್‌ಬ್ಯಾಂಕ್ ನಿರ್ಮಿಸಲು ಬಳಸಿಕೊಳ್ಳಲು ಅವಕಾಶವಿರಬೇಕು, ಬೇರೆ ಯಾರಿಗೂ ಅವಕಾಶವಿರಬಾರದು! ತಾನೇ ಅತಿ ಹೆಚ್ಚು ವೋಟ್‌ಬ್ಯಾಂಕ್ ರಾಜಕೀಯ ಮಾಡುತ್ತಾ ಬಿಜೆಪಿ ಇತರರು ವೋಟ್‌ಬ್ಯಾಂಕ್ ರಾಜಕೀಯ ಮಾಡುತ್ತಾರೆ ಎಂದು ಆರೋಪಿಸುವ ಭಂಡತನ ತೋರಿಸುತ್ತಿದೆ. ಈ ವೋಟ್‌ಬ್ಯಾಂಕ್ ಕ್ರೋಢೀಕರಿಸುವಲ್ಲಿ ಅವರು ಯಾವ ಮಟ್ಟಕ್ಕೂ ಹೋಗಬಲ್ಲರು ಎಂಬುದು ಗುಜರಾತಿನಲ್ಲಿ ಪ್ರಭುತ್ವ ಪ್ರಾಯೋಜಿತ ಸಾಮೂಹಿಕ ನರಹತ್ಯೆಯಲ್ಲಿ ಕಾಣುತ್ತದೆ. ಇನ್ನಾಲಗೆ, ಮೋಸ, ವಂಚನೆ, ವಿಶ್ವಾಸಘಾತ ಫ್ಯಾಸಿಸ್ಟ್ ರಥದ ಮುಖ್ಯ ಲಕ್ಷಣಗಳು. ಆರ್.ಎಸ್.ಎಸ್. ಆಕ್ಟೋಪಸ್ ದಿನೇ ದಿನೇ ಪರಿಪೂರ್ಣಗೊಳ್ಳುತ್ತಿದೆ.

ಸಾವಿರಾರು ಜನ ಬಿಸಿಲಿನ ಝಳದಿಂದ ಸಾಯುತ್ತಿರುವಾಗ, ಗ್ರಾಮೀಣ ಭಾರತದಲ್ಲಿ ಲಕ್ಷಾಂತರ ಜನ ಸಂಕಟ ಪಡುತ್ತಿರುವಾಗ ಇಂತಹ ರಾಜಕೀಯ ನಾಟಕಗಳನ್ನು ನಡೆಸಿ ಜನರ ಗಮನ ತಪ್ಪಿಸಲು ಪ್ರಯತ್ನಿಸುವ ಇಂತಹ ಒಂದು ಸರಕಾರವಿದೆಯೆಂಬುದು ಭಾರತದ ದುರಂತ. ಇಂತಹ ನಾಟಕಗಳೇ ಮುಖ್ಯ ವಾಗಿರುವ ಮಾಧ್ಯಮಗಳಿಗೆ ಜನರ ಸಮಸ್ಯೆಗಳ ಮೇಲೆ ಗಮನ ನೀಡಲು ಸಮಯವಿಲ್ಲ.

ಭಾರತ ತನ್ನ ಹಲವಾರು ಸಮಸ್ಯೆಗಳನ್ನು ಮೀರಿನಿಂತು ಮುಂದೆ ಸಾಗಬೇಕಾದರೆ ಹಸಿವು, ಬಡತನ, ನಿರುದ್ಯೋಗದಂತಹ ಸಮಸ್ಯೆಗಳನ್ನು ಮೊದಲು ಎದುರಿಸಬೇಕು. ಇದು ಸಾಧ್ಯವಾಗಬೇಕಾದರೆ ಜನಗಳ ಸಮಸ್ಯೆಗಳತ್ತ ಗಮನ ಕೇಂದ್ರೀಕರಿಸುವ ಸರಕಾರವಿರಬೇಕು. ಆದರೆ ಈ ಆರ್.ಎಸ್.ಎಸ್. ನೇತೃತ್ವದ ವಾಜಪೇಯಿ ಸರಕಾರ ತನ್ನ ರಾಜಕೀಯ ಉಳಿವು ಮತ್ತು ಲಾಭಕ್ಕಾಗಿ ತದ್ವಿರುದ್ಧವಾದ್ದುದನ್ನೇ ಮಾಡುತ್ತಿದೆ. ನಾವಿಂದು ಕಾಣುತ್ತಿರುವ ಭಾರತವನ್ನೆ ಉಳಿಸಿಕೊಳ್ಳಬೇಕಾದರೆ ಆರ್.ಎಸ್.ಎಸ್. ನ ಫ್ಯಾಸಿಸ್ಟ್ ಮಾದರಿ ಅಜೆಂಡಾವನ್ನು ಸೋಲಿಸಬೇಕು. ಭಾರತಕ್ಕಾಗಿ ಈ ಶಕ್ತಿಗಳನ್ನು ಎಷ್ಟು ಬೇಗ ಅಧಿಕಾರದಿಂದ ಇಳಿಸಿದರೆ, ಅಷ್ಟು ಒಳ್ಳೆಯದು.



ಚಾಕು ಚೂರಿ ಬಾಕುಗಳು

ದಿನದಿಂದ ದಿನಕ್ಕೆ ಇಷ್ಟೇಕೆ ಹರಿತವಾಗುತ್ತಿವೆ
ಚಾಕು ಚೂರಿ ಬಾಕುಗಳು?
ಅಗಲವಾಗುತ್ತಿವೆಯೇಕೆ ಮಸೆವಕಲ್ಲು?

ಚರಕ್ಕನೆ ಕತ್ತರಿಸಿ ಹಾಕುತ್ತವೆ ಹೂವಂಥ ಗೋಣುಗಳ
ಮೊಟ್ಟೆಗಳ ಒಡೆವಂತೆ ಒಡೆಯುತ್ತವೆ ಹೊಟ್ಟೆಗಳ,
ಕತ್ತರಿಸಿ ಸಿವುಡುಗಟ್ಟುತ್ತವೆ ಕರಳು ಬಳ್ಳಿಗಳ
ಹೆರಚುತ್ತವೆ ಟೊಮ್ಯಾಟೋ ಹಣ್ಣುಗಳಂತೆ ಕಣ್ಣುಗಳ
ಜೀವಂತ ಎದೆಗಳನು ನಗುನಗುತ ಇರಿದು
ಚಪ್ಪಾಳೆ ತಟ್ಟಿ ಕೇಕೆ ಹಾಕುತ್ತವೆ
ಚಿಲ್ಲನೆ ಪುಟಿವ ಕೆಂಪು ಕಾರಂಜಿಗಳ ಕಂಡು

ಚಾಕು ಚೂರಿ ಬಾಕುಗಳಿಗೂ ಎಷ್ಟೊಂದು ಡಿಸೈನುಗಳು
ಎಷ್ಟೆಲ್ಲ ಮಾಡೆಲ್ಲುಗಳು ಮಕಮಲ್ಲ ಹೊದಿಕೆಗಳು
ಬೆಳ್ಳಿ ಬಂಗಾರದ ಹಿಡಿಕೆಗಳು!

ಸರಸುಮ್ ಸಮೀವಾಲೆ

(ಬಾಂಬ್ ವಿರೋಧಿ ಪಾಕಿಸ್ತಾನ ಕವಿತೆಗಳ ಸಂಕಲನದಿಂದ)

ಈ ವಾರ ...

ಗ್ರಾಮೀಣ ಕೃಪಾಂಕ : ಸರ್ಕಾರದ್ದೂ ಒಂದು ಆಟವೇ?

ಎಷ್ಟೆಲ್ಲಾ ವಿಚಾರ ಮಂಥನ - ಆಗ್ರಹ-ಕೋರಿಕೆಗಳ ಬಳಿಕವೂ ಕರ್ನಾಟಕ ಸರ್ಕಾರ ಗ್ರಾಮೀಣ ಕೃಪಾಂಕ ನೀತಿಯನ್ನು ಹಾಗೂ ಕೃಪಾಂಕದಲ್ಲಿ ಆಯ್ಕೆಯಾದ ನೌಕರರನ್ನು ಉಳಿಸುವ ಮನಸ್ಸು ಅಷ್ಟಾಗಿ ಇಲ್ಲವೆಂದು ಕಾಣುತ್ತಿದೆ. ಸಂವಿಧಾನದ 31ಬಿ ಕಲಮಿನಂತೆ ಕಾನೂನಿಗೆ ತಿದ್ದುಪಡಿ ಮಾಡಿ ಗ್ರಾಮೀಣ ಕೃಪಾಂಕದ ಪದ್ಧತಿ ಉಳಿಸಿಕೊಳ್ಳಬಹುದು ಎಂಬ ಕಾನೂನು ತಜ್ಞರ ಮಾತನ್ನು ಸರ್ಕಾರ ಪರಿಗಣಿಸಿಲ್ಲ. ಬದಲಾಗಿ ಸರ್ಕಾರವೇ ನ್ಯಾಯಾಲಯಕ್ಕೆ ಮರು ಮನವಿ ಸಲ್ಲಿಸಲು ಮುಂದಾಗಿದೆ.

ಪ್ರತಿ ಅಭ್ಯರ್ಥಿಯಿಂದ ಸಾವಿರಾರು ರೂಪಾಯಿಗಳ ಸಂಗ್ರಹಿಸಿ ಕೋಟ್ಯಾಂತರ ಹಣ ಮಾಡುವ ದಂಧೆಯಲ್ಲೇ ತೊಡಗಿರುವ ಕೆಲವರ ಪ್ರಯತ್ನಗಳನ್ನು ಇದು ಕೊಂಚ ತಡೆಯಬಹುದು. ಆದರೆ ಸರ್ಕಾರ ಇಷ್ಟಕ್ಕೇ ಕೂಡಬೇಕಿಲ್ಲ. ನೌಕರರನ್ನು ಉಳಿಸಿಕೊಳ್ಳುವ ಮಾರ್ಗೋಪಾಯ ಹುಡುಕುತ್ತಿದ್ದೇವೆ, ಉಳಿಸಿಕೊಳ್ಳುವುದು ಖಂಡಿತ ಎಂದೇನೂ ಸಚಿವ ಚಂದ್ರೇಗೌಡರು ಹೇಳುತ್ತಿದ್ದಾರೆ. ಆ ಯತ್ನ ಇರಲಿ. ಆದರೆ ಮೂಲಭೂತವಾಗಿ ಸಂವಿಧಾನ-ಕಾನೂನಿನ ತಿದ್ದುಪಡಿಗಳಾಗಿ ಸುಗ್ರೀವಾಜ್ಞೆ ಹೊರಡಿಸಲಿ. ಇಂತಹ ಸ್ಥಿತಿಯಲ್ಲಿ ನೌಕರರು ಆತಂಕ ಪಡುವುದು ಸಹಜ. ಈ ಸನ್ನಿವೇಶದಲ್ಲಿ ಸರ್ಕಾರದ ಮೇಲೆ ಒತ್ತಡ ಹೇರಲು ಚಳುವಳಿ ಅನಿವಾರ್ಯವಾಗಿದೆ. ಡಿವೈಎಫ್‌ಐ-ಎಸ್‌ಎಫ್‌ಐ ನೇತೃತ್ವದ ಜೂನ್ 20 ರ ಚಳುವಳಿ ಯಶಸ್ವಿಗೊಳ್ಳುವುದು ಈ ದಿಶೆಯಲ್ಲಿ ಮಹತ್ವ ಪಿದೆ. ಎತ್ತಿರುವ ಬೇಡಿಕೆ ಅರ್ಥಪೂರ್ಣವಾಗಿದೆ.

ನೀರು, ನದಿ

ನದಿ, ಹಳ್ಳ-ಕೊಳ್ಳ, ಕೆರೆ, ಬಾವಿ-ಅಂತರ್ಜಲಗಳ ನೀರನ್ನು ಇನ್ನೂ ಬಳಸುವಂತಿಲ್ಲ. ನಿಮ್ಮ ಮನೆಯ ಅಂಗಳದಲ್ಲೇ ಹರಿಯುವ ನೀರು ಮುಟ್ಟಲೂ ನಿಷಿದ್ಧ, ಬಳಸಲು ದೊಣ್ಣೆ ನಾಯಕನ ಅಪ್ಪಣೆ ಮಾತ್ರವಲ್ಲ, ಕಪ್ಪ ಕಾಣಿಕೆಯೂ ಸಲ್ಲಿಸಬೇಕು. ನಿಸರ್ಗ ಸಹಜವಾದ ನೀರನ್ನು ಜಾಗತೀಕರಣದ ಮಾರುಕಟ್ಟೆಯಲ್ಲಿ ಮಾರಾಟದ ಸರಕನ್ನಾಗಿಸಿ ಎಣೆಯಿಲ್ಲದ ಹಣ ಸುಲಿಗೆ ಮಾಡಲು ಭಾರಿ ಯೋಜನೆಗಳು ರೂಪುಗೊಂಡಿವೆ. 'ದೇಶಭಕ್ತ'ರ 'ಧರ್ಮಬೀರುಗಳ' ಆಡಳಿತದಲ್ಲೇ ನದಿಗಳೂ ಮಾರಾಟಕ್ಕಿವೆ!

ನೀರಿನ ಅಧಿಪತ್ಯದ ದಂಧೆಯ ಕುರಿತು ಲೇಖನವಿಲ್ಲಿ.

ಎಸ್.ವೈ.ಗುರುಶಾಂತ್

'ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಬಾವಿಗಳುಂಟು' ಎಂದರು ಶರಣರು. ಹಸಿವಾದಾಗ ಆಹಾರ, ದಾಹಕ್ಕೆ ನೀರು... ಇವು ಜೀವಿಯೊಂದರ ಮೂಲ ಅತ್ಯಗತ್ಯಗಳು.

ನಾಗರೀಕತೆಯ, ಜೀವ ಸಂಕುಲಗಳ ವಿಕಾಸದಲ್ಲಿ ಇವುಗಳಿಗೆ ಎಲ್ಲಿಲ್ಲದ ಬೇಡಿಕೆ. ನದಿ ಹುಡುಕಿಯೇ ನೀರು ದಂಡೆಗೇ ಬೆಳೆದುದು ಬಹಳಷ್ಟು ನಾಗರೀಕತೆಗಳು. 'ನೀರು ಆಹಾರಕ್ಕಿಂತಲೂ ಅತ್ಯುತ್ತಮ ಕೊಡುಗೆ' ಎನ್ನುತ್ತದೆ ಮಹಾಭಾರತ ಮಹಾಕಾವ್ಯ. ವೇದ, ಉಪನಿಷತ್ತುಗಳು ನೀರನ್ನು ಉದಾತ್ತೀಕರಿಸಿವೆ. ಆಹಾರವಿಲ್ಲದೆ ಕೊಂಚ ಕಾಲ ತಡೆಯಬಹುದು. ಆದರೆ ನೀರಿಲ್ಲದೇ ಕಷ್ಟವೇ ಸರಿ! ಇಂತಹ ಅತ್ಯಗತ್ಯದ, ಜೀವಾಧಾರದ ನೀರು ಜೀವ ಜಗತ್ತಿಗೆ, ಮಾನವನಿಗೆ ನಿಸರ್ಗದ ಅದ್ಭುತ ಕೊಡುಗೆ.

ಅಂದು ಬೆಳಗಿನ ಚುಮುಚುಮು ಮುಂಜಾವಿನಲ್ಲಿ ಮಂತ್ರ ಗುನುಗುತ್ತಾ ಗಂಗಾನದಿಯತ್ತ ಸ್ನಾನಕ್ಕೆ ಇಳಿಯುವವರಿದ್ದರು ಪುರೋಹಿತರು. ನೀರು ತರಲು ಹೊರಟ್ಟಿದ್ದರು ಅಲ್ಲಿನ ಜನರು. ಮೀನು ಹಿಡಿಯಲು ದೋಣಿ ಇಳಿಸುವವರಿದ್ದರು ಮೀನುಗಾರರು... ಆದರೆ ದರ್ಪದ ಆಜ್ಞೆಯ ಸ್ವರವೊಂದು ಘರ್ಜಿಸಿತು "ನಿಲ್ಲಿ, ಮುಟ್ಟಬೇಡಿ ನೀರನ್ನು, ಕೇಳಿ ಬಂದಿರೇನು ಯಾರನು?" ತಲೆತಲಾಂತರದಿಂದ ಈ ನೀರನ್ನೇ ಬಳಸಿ, ಬೆಳೆದು, ನಂಬಿ ಬದುಕಿದವರಿಗೆ ದಿಗ್ಭ್ರಾಂತಿ! ಏನದು? ಯಾಕದು ಎಂದವರಿಗೆ ಮಾರುತ್ತರ ದರ್ಪದವನಲ್ಲಿ ಸಿದ್ಧವೇ? ನೀವಿನ್ನು ಈ ನೀರು ಮುಟ್ಟುವ ಹಾಗಿಲ್ಲ. ಮುಟ್ಟಿದರೆ ಶಿಕ್ಷೆ ಕಾದಿದ್ದೇ". ಬೇಕಾದ್ದು ಅನುಮತಿ ಮಾತ್ರವಲ್ಲ, ಹಣವೂ ತೆತ್ತರೇ ನೀರು ಸಿಗುವುದು ಖರೇ! ಎಂಬುದನ್ನು ಕೇಳಿ ದಬಾಯಿಸಿಕೊಂಡು ಶಾಪ ಹಾಕಿ ಅಸಹಾಯಕತೆ ತೋರಿ ವಾಪಸಾಗಬೇಕಾಯಿತು ಜನ! ಆದರೇನು?

ನದಿಗಳ ಮಾರಾಟ


ಭೂಮಿಯಲ್ಲಿ ನೀರಿಲ್ಲದೇ ಕಂಗಾಲಾಗಿ ಜನ ಹಾಹಾಕಾರ ಪಡುತ್ತಿದ್ದಾಗ, ಭಗೀರಥ ಮಹರ್ಷಿ ಘೋರ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡು ಗಂಗೆಯನ್ನು ಧರೆಗೆ ತಂದನೆಂಬುದು ಸುಪ್ರಸಿದ್ಧ ಪುರಾಣ ಕಥೆ! ಶಿವನ ಜಟೆಯಿಂದ ಹೊರ ನಡೆದ ಗಂಗೆ ಜೀವ ಸಂಕುಲ-ಸಸ್ಯಶಾಮಲ ಬದುಕುವಂತೆ ಮಾಡಿದಳಂತೆ! ಕಥೆಯೇನೋ ಇರಲಿ... ಆದರೆ ಗಂಗಾನದಿ ಕೋಟಿ ಕೋಟಿ ಜನಗಳ ಜೀವನದಿ. ಕೃಷಿ, ಕುಡಿಯಲು ಕೈಗಾರಿಕೆ, ಜಪತಪಗಳಿಗೆ ಮಂತ್ರ-ತಂತ್ರಗಳಿಗೆ ನಿತ್ಯವೂ ಬೇಕೇಬೇಕು. ಶತಶತಮಾನಗಳಿಂದ ಕೃಷಿಕರು, ಬುಡಕಟ್ಟುಗಳು ಬದುಕಿದ್ದೇ ಇಲ್ಲಿ... ಆದರೀಗ ತಲೆತಲಾಂತರದ ನಿಸರ್ಗ ಸಹಜಸಂಬಂಧ ಕಡಿದದ್ದು ಅಷ್ಟೇ ಅಲ್ಲ! ಅದರ ಮೇಲಿನ ಸಹಜ ಹಕ್ಕು ಕಳೆದುಕೊಂಡು ಕಂಗಾಲಾಗಿದ್ದಾರೆ ಜನ. ಗಂಗಾ ನದಿಯ ಪಾವಿತ್ರ್ಯದ ಬಗ್ಗೆಯೇ ಮಾತನಾಡುವ ಸಂಘ ಪರಿವಾರದ ಸರ್ಕಾರ, ಗಂಗಾನದಿಯನ್ನು ನೀರನ್ನು ಅಪಹರಿಸಲು ಫ್ರಾನ್ಸ್‌ನ ಸುಯೋಜ್ ಕಂಪನಿಗೆ ಮೀರಿತ್ತು.

ಇಂತಹುದೇ ಕಥೆ ಛತ್ತೀಸ್ ಘಡದ ಷಿಯೋನಾಥ್ ನದಿಯದ್ದು, ಹಾಗೇ ಕೇರಳದ ಮಲ್ಲ ಪೆರಿಯಾರ್ ನದಿಯದ್ದು. ಬಿಜೆಪಿಗೆ ತಾನೇ ಪರ್ಯಾಯವೆಂದು ಹೇಳಿಕೊಳ್ಳುವ ಕಾಂಗ್ರೆಸ್ ಸರ್ಕಾರಗಳ ಕೆಲಸವೂ ಸಹ ಜನರಿಗೆ ನೀರು ಒದಗಿಸಲು ಹೊಸ ಮೂಲ ಹುಡುಕಿ ಸಂರಕ್ಷಿಸಿ ಸಹಜ ಬಳಕೆಗೆ ನೀಡುವುದಿಲ್ಲ, ಬದಲಾಗಿ ನೀರಿನ ದಂಧೆ ಆರಂಭಿಸುವುದು!

ನೀರಿನ ದಂಧೆ

ಬೆಳೆಯುತ್ತಿರುವ ಇಂದಿನ ವಿಶ್ವದಲ್ಲಿ ಮುಂದೆ ನೀರಿನ ತೀವ್ರ ಅಭಾವ ತಲೆದೋರಿದೆ ಎಂಬುದು ಒಂದು ಅಧ್ಯಯನ. ಪ್ರತಿವರುಷವೂ 160 ಕಿ.ಮಿ. ಕೂಬಿಕ್ಸ್‌ನಷ್ಟು ಅಂತರ್ಜಲವನ್ನು ಪಂಪ್ ಮಾಡಿ ಪಡೆಯಲಾಗುತ್ತಿದೆ. ಆದರೆ ಅದರ ವೃದ್ಧಿ ಇಲ್ಲವಾಗಿದೆ. ಆಫ್ರಿಕಾ-ಏಶಿಯಾ ಖಂಡಗಳಲ್ಲಿ(ಭಾರತದಲ್ಲೂ) ಮಹಿಳೆಯರು ಆಹಾರ ಸಂಗ್ರಹದೊಂದಿಗೆ, ನೀರಿಗೆಂದೇ ಕನಿಷ್ಟ ಮೂರು ತಾಸುಗಳು ಕಳೆಯಬೇಕಿದೆ! ಕಳೆದ ಶತಮಾನದಲ್ಲಿನ ನೀರಿನ ಬೇಡಿಕೆಗಿಂತ ಈಗ ಆರು ಪಟ್ಟು ಅಧಿಕವಾಗಿದೆ. ಇದು ಜನಸಂಖ್ಯೆಯ ಬೆಳವಣಿಗೆ ದರಕ್ಕಿಂತ ಎರಡರಷ್ಟು. 11 ಕೋಟಿ ಜನರಿಗೆ ಶುದ್ಧ ಕುಡಿವ ನೀರಿಲ್ಲದೇ ವಂಚಿತರು. ಇಂತಹ ಸಂದರ್ಭದಲ್ಲಿ ಇರುವ ಸಂಪನ್ಮೂಲಗಳನ್ನು ಸೂಕ್ತವಾಗಿ ಸಂರಕ್ಷಿಸಿ, ಅವುಗಳ ಮೂಲ ಹೆಚ್ಚುವತೆ ಮಾಡಿ, ವ್ಯವಸ್ಥಿತವಾಗಿ ಬಳಸಲು ಸುಸಂಬದ್ಧ ಯೋಜನೆ-ಜಾರಿಗೆ ಗಮನ ನೀಡುವುದು ಅತೀ ಅಗತ್ಯ. ಇದು ಆಯಾ ದೇಶಗಳ ಸರ್ಕಾರಗಳು ಮಾತ್ರವಲ್ಲ ಇಡೀ ವಿಶ್ವ ಸಮುದಾಯವೇ 'ಭಗೀರಥ' ಪ್ರಯತ್ನಕ್ಕೆ ಇಳಿಯಬೇಕಾದ ಸಂದರ್ಭ.

ಆದರೆ ಹೀಗಾಗುತ್ತಿಲ್ಲ! ನೀರಿನ ಬಳಕೆಯ ಅಭಾವ ಅತ್ಯಗತ್ಯವಾದ 'ಬೇಡಿಕೆ'ಯನ್ನೇ ಗಮನದಲ್ಲಿಸಿರುವ ಬಹುರಾಷ್ಟ್ರೀಯ ಕಂಪನಿಯ ರಣಹದ್ದುಗಳಿಗೆ 'ದಾಹ ಪೀಡಿತ' ಜಗತ್ತನ್ನು ಮನ ಬಂದಂತೆ ಕಿತ್ತು ತಿನ್ನಲು ಹೊಂಚು ಹಾಕಿವೆ. ಅದಕ್ಕಾಗಿ ಜಾಗತಿಕ ನಕ್ಷೆ ತಯಾರಿಸಿವೆ. ಆಧುನಿಕ ತಂತ್ರಜ್ಞಾನ ವಿಜ್ಞಾನ ಬಳಸಿವೆ. 2000 ದಲ್ಲಿ ಹೂಗೋದಲ್ಲಿ ನಡೆದ ಜನಸಂವರ್ಧನೆಯ ಸಮಾವೇಶದಲ್ಲಿ ವಿವಿಧ ದೇಶಗಳ ಸಚಿವರನ್ನು ಆಹ್ವಾನಿಸಿ ಚರ್ಚಿಸಿವೆ. "ನೀರು ಅತ್ಯಮೂಲ್ಯ. ಅದರ ಸದ್ಬಳಕೆ(!) ಅಗತ್ಯವಿದೆ. ಬೇಡಿಕೆಯೂ ಹೆಚ್ಚಿದೆ. ಆದ್ದರಿಂದ ಇದನ್ನು ವಾಣಿಜ್ಯೀಕರಿಸುವುದು ಅತ್ಯಗತ್ಯ. ನೀರು ಮನ ಬಂದಂತೆ ಪುಕ್ಕಟೆ ನೀಡಲಾಗದು" ಎಂದು ಘೋಷಿಸಿವೆ. ವಿವಿಧ ಸರ್ಕಾರಗಳ ಸಹಕಾರ ಯಾಚಿಸಿವೆ. 'ಬೇಡಿಕೆ ಹೆಚ್ಚಾದಾಗ ಬೆಲೆ ಏರಿಸಲೇಬೇಕು, ಬೆಲೆ ಹೆಚ್ಚಾದಾಗ ಬೇಡಿಕೆ ಕುಸಿಯುತ್ತೆ' ಎಂಬ ಬಂಡವಾಳಗಾರರ ಅರ್ಥಶಾಸ್ತ್ರ ಸಾಧಿಸಲು ಮತ್ತೊಮ್ಮೆ ಹೊರಟಿವೆ. ಮಾತು ಕತೆಗಳು ಉಪಚಾರದ ಮಾತಾಯಿತು ಎಂದು ಅಮೆರಿಕಾ, ಬ್ರಿಟನ್, ಜಪಾನ್, ಫ್ರಾನ್ಸ್‌ನ ಒಟ್ಟು ಹತ್ತು ದೈತ್ಯ ಬ.ಕಂಪನಿಗಳು ವಿಶ್ವಬ್ಯಾಂಕ್, ಐಎಂಎಫ್ ನ ಬೆನ್ನು ಹತ್ತಿವೆ. ಶರತ್ತು ವಿಧಿಸಿ, ವಿವಿಧ ದೇಶಗಳ ಸರ್ಕಾರದ ತಲೆ ಮೇಲೆ ಬಂದಿಳಿಯುತ್ತಿವೆ. ವಿಶ್ವ ವ್ಯಾಪಾರ ಸಂಸ್ಥೆ (WT) ಮೂಲಕ ಮಾರುಕಟ್ಟೆ ಶರತ್ತು-ವಿಧಿ ವಿಧಾನಗಳಾಗಿ ಚರ್ಚೆ ನಡೆಸಲು ಸಿದ್ಧಗೊಳ್ಳುತ್ತಿವೆ. ಬಂಡವಾಳಶಾಹಿಯ ವ್ಯವಸ್ಥೆಯೇ ಅಂತಿಮ ಎಂಬ ಭ್ರಮೆಯಲ್ಲಿರುವ ಅದರ ಉಳಿವಿಗೆ, ಸುಲಿಗೆಯ ಹಿಡಿತ ಬಿಗಿಗೊಳಿಸಲು ರಾಜಕೀಯವಾಗಿ ಸಾಮಾಜಿಕ-ಸಾಂಸ್ಕೃತಿಕವಾಗಿ ಧಾಳಿ ಇಟ್ಟಿವೆ. ವಿದ್ಯುತ್ ಕ್ಷೇತ್ರ, ಹಣಕಾಸು ಸೇವೆ, ಮುಂತಾದವುಗಳಿಗೆ ಧಾಳಿ ಇಟ್ಟಿರುವ ಈ ಕಂಪನಿಗಳು ನೀರಿಗೆ ಕೈ ಹಾಕಿವೆ. ಇಂತಹವುಗಳ ಮುಂದೆ ಮಂಡಿಯೂರಿ ಕೈಕಟ್ಟಿ ನಿಂತಿದ್ದಾರೆ ವಾಜಪೇಯಿ, ಅಡ್ವಾಣಿ, ಎಸ್.ಎಂ.ಕೃಷ್ಣ, ಅತೋನಿ, ಚಂದ್ರಬಾಬು ನಾಯ್ಡುರಂಥವರು! ಈಗಾಗಲೇ ಆಹಾರದ ಕೊರತೆ, ನೀರಿಲ್ಲದ ಪರಿತಾಪದಲ್ಲಿರುವ ಜನರ ಪಾಡೇನು? ಸಾವುಗಳಿಗೂ ಕಿಂಚಿತ್ತೂ ಸಾಂತ್ವನ ಹೇಳದ ನೀತಿ ಬದಲಾಯಿಸಿ ಜನರನ್ನು ರಕ್ಷಿಸಿದ ಸೌಜನ್ಯ ಹೀನ ಸರ್ಕಾರಗಳು ಏನನ್ನು ತಂದಾವು.



ಖಾಸಗೀಕರಣಕೊಂಡ ಕೇರಳದ ಪೆರಿಯಾರ್ ನದಿ


ಯುದ್ಧ ನಡೆದಾವು

ಇದು ಜಾಗತೀಕರಣ - ಉದಾರೀಕರಣದ ಯುಗ! ಇನ್ನು ಹಸಿವಾದೊಡೆ ಭಿಕ್ಷಾನ್ನವೇ ಗತಿಯಾದರೂ ದಾಹವಾದರೆ ಕೆರೆ, ಬಾವಿ, ನದಿಗಳಿಗೆ ಕೈಯಿಕ್ಕುವಂತಿಲ್ಲ! ಕೈ ಯಿಕ್ಕುವಿರೋ - ಮೊದಲು ಹಣ ತೆತ್ತಬೇಕು, ಇಲ್ಲವೋ ಕೃಷ್ಣನ ಜನ್ಮಸ್ಥಾನದಲ್ಲಿ ಕಂಬಿ ಎಣಿಸಬೇಕು! ಇನ್ನು ನೀರು



ಇಂದಿನ ಬಿಕ್ಕಟ್ಟು

- ಹತ್ತಿರದ ಭವಿಷ್ಯದಲ್ಲೇ ಸುಮಾರು 40 ರಾಷ್ಟ್ರಗಳ ಮತ್ತು 100 ಕೋಟಿ ಜನರಿಗೆ ಸೂಕ್ತವಾದ ನೀರಿನ ವ್ಯವಸ್ಥೆ ಇರುವುದಿಲ್ಲ. 2025 ಕ್ಕೆ ಇದು 230 ಕೋಟಿಯಾಗಲಿದೆ.
- ಈಗ ಆರು ಬಿಲಿಯನ್ ಜನ ಇರುವ ಜಲಸಂಪತ್ತಿಗೆ ಸ್ಪರ್ಧೆ ನಡೆಸುತ್ತಿದ್ದಾರೆ.2050 ರಲ್ಲಿ 10 ಬಿಲಿಯನ್ ಜನ ನೀರಿಲ್ಲದೇ ಕೊರಗುತ್ತಾರೆ.
- ನಗರದಲ್ಲಿನ ಬಡತನ ರೇಖೆಯ ಕೆಳಗಿನವರು ಶೇ 38.38 ಕನಿಷ್ಟ ಉತ್ತಮ ನೀರಿನಿಂದ ವಂಚಿತರು.
- 1985 ರಲ್ಲಿ ನೀರಿನ ಮೂಲವಿಲ್ಲದ 750 ಹಳ್ಳಿಗಳಿದ್ದವು. 1996 ರಲ್ಲಿ 65,000 ಕ್ಕೂ ಹೆಚ್ಚಾಗಿದೆ.
- ಬರಪೀಡಿತ ಪ್ರದೇಶ ವಿಸ್ತಾರವಾಗುತ್ತಲೇ ಇದೆ.
- ಅತೀವ ಅವಲಂಬನೆಯಿಂದ ಅಂತರ್ಜಲ ಕುಸಿಯುತ್ತಿದೆ.
- ಏಕರೀತಿಯ ಬೆಳೆ ವಿಧಾನವೂ ಕಾರಣ - ಆಂಧ್ರ, ಕರ್ನಾಟಕ, ಪಂಜಾಬ್, ಗುಜರಾತ್ ಇತ್ಯಾದಿ ಕಪ್ಪು ಪಟ್ಟಿಗೆ ಸೇರುತ್ತದೆ.
- ನೀರಿನ ಬಳಕೆ ಪಂಜಾಬ್, ಹರಿಯಾಣದ ಕೆಲವು ಜಿಲ್ಲೆಗಳಲ್ಲಿ ಶೇ 100 ರಷ್ಟು.
- ಭಾರತ ಮಕ್ಕಳು ಶೇ 80 ರಷ್ಟು ನೀರಿನ ಮೂಲದ ಖಾಯಿಲೆಯಿಂದ ನರಳುವವರು. ಇದರಲ್ಲಿ 7 ಲಕ್ಷ ಸಾವನ್ನಪ್ಪುತ್ತವೆ.
- ನೀರಿನ ಅಶುದ್ಧತೆಯಿಂದ, ಮುಖ್ಯವಾಗಿ ಫ್ಲೋರೈಡ್, ನೈಟ್ರೆಟ್‌ನಂತಹ ಲವಣಗಳು ಮತ್ತು ಅಶುದ್ಧತೆಯಿಂದ 440 ಲಕ್ಷ ಜನ ಬಳಸುತ್ತಾರೆ.



...ೂರಾಟ !

...ವುದಿಲ್ಲ! 'ನೀರಿನಂತೆ ಹಣವನ್ನು ...ದಿದ' ಎಂದು ಹೇಳುವಂತೆಯೂ

...ಣದ 'ಮಾರುಕಟ್ಟೆಯ ಯುಗ'ದಲ್ಲಿ ...ಟಕ್ಕಿವೆ. ನೀರು ನಿಸರ್ಗದ ಧಾರಾಳ ...ುದನ್ನು ಅಳಿಸಲಾಗುತ್ತಿದೆ. ಈಗ ...ಕಾಗಿ ಪರಿವರ್ತನೆಯಾಗಿದೆ. ಅದಕ್ಕೆ ...ದೆ. ಭೂಮಿಯ ಒಡಲ ಒಳ ...ನ್ನು ಅಳೆದು-ಸುರಿದು ಲೆಕ್ಕ ಹಾಕಿ, ಅದರ ಮಾಲೀಕತ್ವ ...ತ್ತಿದೆ. ದೈತ್ಯ ಬಹುರಾಷ್ಟ್ರೀಯ ...ೀರಿನ ನಿಯಂತ್ರಣ ಪಡೆಯಲು ...ವೆ. ನೆಲ ಮುಗಿಲ ಮೂಸೆಗಳಿಗೂ ...ೀರುಕೊಳವೆಯ ಜಾಲ ಚಾಚಿವೆ. ... ಸಾಮ್ರಾಜ್ಯ ವಿಸ್ತರಣೆಗೆ ಇಳಿದಿವೆ. ...ರ್ಕ್ ನಲ್ಲಿ ನವದೆಹಲಿಯಲ್ಲಿ ನಡೆದ ...ವಾಣಿಜ್ಯೋದ್ಯಮಿಗಳ ಒಕ್ಕೂಟ ...ನೆಯಲ್ಲಿ ವಿಶ್ವಸಂಸ್ಥೆಯ ಮಹಾ ...ದರ್ಶಿ ಕೋಫಿ ಅನ್ನಾನ್ ಹೇಳಿದ್ದು ... ಸುದ್ದಿ ಏನು ಗೊತ್ತೆ? "ಜಗತ್ತಿನ ...ಗೂ ನೀರಿಗೆ ಅದರಲ್ಲೂ ಕುಡಿವ ...ಹ... ಹೆಚ್ಚಿನ ಆದ್ಯತೆ ನೀಡಿ, ...ಹಲವು ರಾಷ್ಟ್ರಗಳ ನಡುವೆಯೇ ...ಯುದ್ಧದ ವಾತಾವರಣ ...ದೀತು!'. ಶುದ್ಧ ನೀರಿಗಾಗಿ ...ವ ಸಮ್ಮೇಳನದ ಘೋಷಣೆಯೂ ...ೆ. "ಅತೀ ಶೀಘ್ರವೇ ನೀರನ್ನು ...ೆಸೆಲ್‌ನಂತೆ ಪೈಪ್ ಲೈನ್, ...ಮೂಲಕ ಮಾರಬಹುದು. ನೀರಿನ ... ಮೇಲೆ ಹತೋಟಿ-ಅಧಿಪತ್ಯ ...ದ್ಧಗಳೇ 21ನೇ ಶತಮಾನದಲ್ಲಿ ...ದಿದೆ.

...ಗಳೇರಿ

...ಹುರಾಷ್ಟ್ರೀಯ ಕಂಪನಿಗಳು ನೀರಿನ ...ಪಾರ ಆಸಕ್ತಿವಹಿಸಿವೆ. ವಿಶ್ವ ಜಲ ...Water Forum), ವಿಶ್ವ ಜಲ ...ld Water Council) ನಂತಹ ...ಗಳು ಹಿತಾಸಕ್ತಿಗೆ ದುಡಿಯುತ್ತಿವೆ. ...ಶ ಒಂದೇ 'ನೀರು ನಿಮಗೆ ಬೇಕೇ ... ಖರೀದಿಸಿ, ಇಲ್ಲವೇ ಬಿಡಿ'. ...ಲ್ಲಿ ಬಿಡಲು ಇರುವುದು ಒಂದೇ

...ಈಗಾಗಲೇ ನೀರಿನ ವಹಿವಾಟು ... ಮೀರಿದೆ. ಔಷಧಿ 30 ಸಾವಿರ ... ನೀರು 40 ಸಾವಿರ ಕೋಟಿ ...ವಹಾರದಲ್ಲಿ ಸುಮಾರು ಎಂಟು ... ತೊಡಗಿವೆ. ಫ್ರಾನ್ಸಿನ ವಿವೇಂಡಿ, ...ಟನ್‌ನ ಬೆಕ್‌ಟೆಲ್, ಥೇಮ್ಸ್ ...ಕಾದ ಕೋಕಾಕೋಲಾ, ಅಲ್ಲದೇ ...ತ ಪ್ರಮುಖವಾದವು. ಇದರಲ್ಲಿ ...ಷ್ಟ್ರಗಳಲ್ಲಿ ನೀರಿನ ವ್ಯಾಪಾರದಲ್ಲಿ ...1 ಕೋಟಿ ಗಿರಾಕಿಗಳನ್ನು ...ಯೋಜ್ 130 ದೇಶಗಳಲ್ಲಿ 11.5 ...ನ್ನು ಪಡೆದಿದೆ. ಈ ಕಂಪನಿಗಳು ...ರುವ ಜನಸಂಖ್ಯೆಗೆ ನೀರಿನ ...ಜು ಮಾಡಿ 25 ವರ್ಷಗಳಲ್ಲಿ ... ಹಣ ಸೆಳೆಯುವ ಯೋಜನೆ ... ಈ ಕಂಪನಿಗಳ ವಹಿವಾಟಿನ ...ದು ವಿಶ್ವಬ್ಯಾಂಕ್-ಐಎಂಎಫ್. ...ಲದ ಬಲೆಯ ಮೂಲಕ ...ಳಲ್ಲಿ ಸಿಲುಕಿಸಿಕೊಂಡು ...ರತ್ತುಗಳನ್ನು ವಿಧಿಸುತ್ತಿರುವ

ಕುಖ್ಯಾತ ಕುತಂತ್ರದಂತೆ ನೀರಿನ ಖಾಸಗೀಕರಣಕ್ಕೆ ಒತ್ತಡ ಹೇರುತ್ತಿವೆ. ಭಾರತದಲ್ಲಿ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ರಾಜಸ್ತಾನ ಒಳಗೊಂಡು 30 ಪ್ರಮುಖ ನಗರಗಳ ನೀರು ಸರಬರಾಜು ಹೊಣೆಯನ್ನು 'ಖಾಸಗೀ ಭಾಗಿತ್ವದ' ಹೆಸರಿನಲ್ಲಿ ವಹಿಸಿಕೊಂಡಿದೆ. ಕರ್ನಾಟಕದ ಎಸ್.ಎಂ.ಕೃಷ್ಣ ಸರ್ಕಾರ ಅತ್ಯುತ್ಸಾಹ ತೋರಿದ್ದು ಅದರ ವ್ಯಾಪ್ತಿಯಲ್ಲಿ ಹುಬ್ಬಳ್ಳಿ - ಧಾರವಾಡ ನಗರವೂ ಇದರಲ್ಲಿದೆ.

ಈ ಕಂಪನಿಗಳು ಭೂಮಿಯ ಮೇಲಿನ ಹಾಗೂ ಅಂತರ್ಜಲ ಒಳಗೊಂಡು ಮಲಿನ ನೀರು ಶುದ್ಧೀಕರಣದಂತಹ ಘಟಕಗಳನ್ನು ಹೊಂದಿವೆ. ಕುಡಿಯಲು, ಬಳಸಲು, ಕೈಗಾರಿಕೆ, ಕೃಷಿಗೆ ನೀರು ಪೂರೈಸುವ ವಹಿವಾಟು ನಡೆಸುತ್ತಿವೆ. ಮತ್ತು ಸರ್ಕಾರದೊಂದಿಗೆ ಖಾಸಗಿ ಸಹಭಾಗಿತ್ವವೆಂಬ ಹೆಸರಿನಲ್ಲಿ ಆರಂಭಿಸಿ, ಹಂತಹಂತವಾಗಿ ವಹಿವಾಟಿನ ಪೂರ್ಣ ಏಕಸ್ವಾಮ್ಯ ಹೊಂದುತ್ತವೆ. ಬೆಲೆ ನಿಗದಿ ಅವುಗಳ ನಿರ್ಧಾರವೇ. ನೀರಿನ ಅತ್ಯಗತ್ಯದ ಅಂಶ ಹಿಡಿದು ಮನಬಂದಂತೆ ಬೆಲೆ ಏರಿಕೆ ಮಾಡಿ ಸುಲಿಯುತ್ತಿರುವ ಹಲವು ನಿದರ್ಶನಗಳೇ ಇವೆ. ಅಲ್ಲಿ ಜನತೆಯ ತೀವ್ರ ಪ್ರತಿಭಟನೆ ಎದುರಿಸಿ, ಕಾಲ್ತೆಗೆಯಬೇಕಾದ ಪ್ರಸಂಗ ಬೊಲಿವಿಯಾದ ಅನುಭವ ತೋರಿಸಿದೆ.

ವಿದೇಶಿ ಕಂಪನಿಗಳಿಗೆ 'ರಾಷ್ಟ್ರಭಕ್ತ'ರ ಸಲಾಮು

ನದಿ, ಬೆಟ್ಟ, ಗಿಡಗಂಟೆಗಳನ್ನು ಪೂಜಿಸುವ, ವೈಭವೀಕರಿಸುವ, ನದಿ ಜೋಡಣೆಯು ಸಾಂಸ್ಕೃತಿಕ ಏಕತೆಯೆಂದು ಸಾರುವ 'ದೇಶಭಕ್ತ'ರ ಕೇಂದ್ರ ಸರ್ಕಾರ ವಿಶ್ವಬ್ಯಾಂಕ್, ಐಎಂಎಫ್ ನ ನಿರ್ದೇಶನಗಳಂತೆ ನೀರಿನ ಖಾಸಗೀಕರಿಸುವುದನ್ನು ಪ್ರಾಶಸ್ತವಾಗಿ ಪರಿಗಣಿಸಿದೆ. "ಜನತೆಗೆ ಶುದ್ಧ ನೀರಿನ ಪೂರೈಕೆ, ಸುಲಭವಾಗಿ ಎಟುಕುವಂತೆ ಮಾಡುವ ಸವಾಲಿನ ಬಗ್ಗೆ ಪ್ರಧಾನಿ ವಾಜಪೇಯಿ ಕಾಳಜಿ ತೋರಿಸಿದ್ದಾರೆ. ರಾಷ್ಟ್ರೀಯ ನೀರು ಸಂಪನ್ಮೂಲ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು 'ನೀರು ರಾಷ್ಟ್ರೀಯ ಸಂಪತ್ತು. ಜನಸಮುದಾಯವೇ ಅದರ ನಿಜವಾದ ರಕ್ಷಕರು' ಎಂದು ಯೋಜನಾ ನೀತಿ ರೂಪಿಸಿ ಎಂದು ಹೇಳಿದರು. ನಿಜ, ಆದರೆ ರಾಷ್ಟ್ರೀಯ ಜಲ ನೀತಿಯು ನೀರನ್ನು ಮಾರುಕಟ್ಟೆಯ ಸರಕನ್ನಾಗಿಸಿದೆ. ಇದರ ವಾರಸುದಾರರು ವಿದೇಶಿ ಕಂಪನಿಗಳು! ಆದರೆ ಅವರದೇ ಸರ್ಕಾರ ನೀರನ್ನು ಒಂದು ಸರಕು, ಅದು ಮಾರಾಟ ಆಗಬೇಕು, ಖಾಸಗಿಯವರ ಹೂಡಿಕೆ ಅನಿವಾರ್ಯ-ಅಗತ್ಯ ಎಂದು ವಿಶ್ವಬ್ಯಾಂಕ್‌ನ ಪಾಠ ಒಪ್ಪಿಸುತ್ತಿದೆ. ಅಂತಹ ದೈತ ಬ.ಕ.ಗಳನ್ನು 'ಖಂಡಿತ ಪ್ರೋತ್ಸಾಹಿಸಬೇಕು' ಎಂದು ಹೇಳುತ್ತಿದೆ. ಅದನ್ನೇ ಕರ್ನಾಟಕದ ಕೃಷ್ಣ ಸರ್ಕಾರ 'ಪ್ರೋತ್ಸಾಹಿಸಲಾಗುವುದು' ಎನ್ನುತ್ತದೆ. ಈ ನೀತಿಗಳ ಜಾರಿಯಲ್ಲಿ ಕೇಂದ್ರದ ಬಿಜೆಪಿ - ರಾಜ್ಯದ ಕಾಂಗ್ರೆಸ್ ಸರ್ಕಾರಗಳ ನಡುವೆ ಏನೂ ವ್ಯತ್ಯಾಸವಿಲ್ಲ.

ಲಕ್ಷಾಂತರ ವರುಷಗಳಿಂದ ಅವಿನಾವಭಾವ ಸಂಬಂಧವಿರುವ ನದಿಗಳನ್ನೇ ಖಾಸಗಿ ಕಂಪನಿಗಳಿಗೆ ಮಾರಲಾಗುತ್ತಿದೆ. ಛತ್ತೀಸ್ ಗಡದ ದುರ್ಗಾ ಜಿಲ್ಲೆಯ ಷಿಯೋನಾಥ್ ನದಿಯನ್ನು (ಸುಮಾರು 26 ಕಿ.ಮಿ.) ಅಜಿತ್ ಜೋಗಿ ಸರ್ಕಾರ 22 ವರುಷಗಳ ಒಪ್ಪಂದದೊಂದಿಗೆ 'ರಾಡಿಯಾಸ್ ವಾಟರ್ ಕಂಪನಿ'ಗೆ ಮಾರಿತ್ತು. ಇದನ್ನು ಎಡಪಕ್ಷಗಳೂ ಸೇರಿ ಜನತೆ ಉಗ್ರವಾಗಿ ಪ್ರತಿಭಟಿಸಿದ ನಂತರ ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಗಿದೆ.

ಹಾಗೆಯೇ ಗಂಗಾ ನದಿಯ ನೀರನ್ನು ದೆಹಲಿಯ 'ಸೋನಿಯಾ ವಿಹಾರ್ ಪ್ಲಾಂಟ್' ಗಾಗಿ ಸಾಗಿಸಲು ಸುಯೆಜ್ ಒಂಡಿಯೋ ಕಂಪನಿಗೆ ಮಾರಲಾಗಿತ್ತು. ಅದರಂತೆ 3.25 ಮೀಟರ್ ವ್ಯಾಸದ ಬೃಹತ್ ಪೈಪ್ ಅಳವಡಿಸುವುದನ್ನು 5000 ಕ್ಕೂ ಅಧಿಕ ರೈತರು, ಕಾರ್ಮಿಕರು, ಮಹಿಳೆ, ಬುಡಕಟ್ಟು ಹಾಗೂ ಪುರೋಹಿತರು ಪ್ರತಿಭಟಿಸಿದರು. ಗಂಗಾ ನದಿಯನ್ನೇ 'ದೇಶಭಕ್ತರು' ಮಾರುತ್ತಿರುವುದು ಅವರ ನಿಜ ಬಣ್ಣ ಬಯಲಾಗುತ್ತಿದೆ.

ಕೇರಳದ ಆಂತೋನಿ ಸರ್ಕಾರವು ಮಲ್ಲ ಪೆರಿಯಾರ್ ನದಿಯನ್ನು ಮಾರಿತ್ತು. ಇದನ್ನು ಜನತೆ ವ್ಯಾಪಕವಾಗಿ ವಿರೋಧಿಸಿದರು. ಎಡ ಪ್ರಜಾಸತ್ತಾತ್ಮಕ ರಂಗವೂ ಚಳುವಳಿಗೆ ಧುಮುಕಿತು. ಅಂತಿಮವಾಗಿ ಆಂಥೋನಿಯವರು ಒಪ್ಪಂದವನ್ನು ಸದ್ಯಕ್ಕೆ ಹಿಂತೆಗೆದುಕೊಂಡಿದ್ದಾರೆ. ಆದರೆ ಇದೆಷ್ಟು ದಿನಗಳಿಗೆ ?

ಇಂತಹ ಒಂದು ಹಿನ್ನೆಲೆಯಲ್ಲೇ ಎಸ್.ಎಂ.ಕೃಷ್ಣ

ಪುಟ 10 ಕ್ಕೆ



ಫ್ರೆಂಚ್ ಕಂಪನಿಯ ಸಹಯೋಗದಲ್ಲಿ ನೀರು ಸಂಸ್ಕರಣ ಘಟಕ - ವಾಣಿಜ್ಯ ಕೌನ್ಸಿಲರ್ ಜೀನ್ ಪಿಲಿಫ್ ಮಾಟೌನ್, ಕೃಷ್ಣ ಅನಂತಕುಮಾರ್

ಬೊಲಿವಿಯಾದಲ್ಲಿ ಏನಾಯ್ತು ?

ಬೆಕ್‌ಟೆಲ್, ವಿವೆಂಡಿ, ಸುಯೆಜ್, ಥೇಮ್ಸ್ ವಾಟರ್, ಬೈ ವಾಟರ್ ಈ ಹೆಸರುಗಳು ನದಿಗಳ ಹೆಸರುಗಳಂತೆ ಕಂಡರೂ ಇವು ನದಿಗಳ ನೀರನ್ನು ಮಾರಾಟ ಮಾಡಿ ಹೇರಳ ಲಾಭಗಳಿಸುವ ಬಹುರಾಷ್ಟ್ರೀಯ ಸಂಸ್ಥೆಗಳು.

ಇದರಲ್ಲಿ ಬೆಕ್‌ಟೆಲ್‌ಗೆ ಹಲವಾರು ಉಪ ಕಂಪೆನಿಗಳಿವೆ. (susidiaries) ಅದರಲ್ಲೊಂದಾದ ಎ.ಡಿ.ಟಿ (Aguas Del Tunani) 1999ರಲ್ಲಿ ಬೋಲಿವಿಯಾ ದೇಶದ ಕೊಚಬಾಂಬ ನಗರದ ಸಾರ್ವಜನಿಕ ನೀರು ವಿತರಣಾ ವ್ಯವಸ್ಥೆಯನ್ನು ಕೈಗೆತ್ತಿಕೊಂಡಿತು. ಈ ಕುರಿತು ಬೊಲಿವಿಯಾ ಸರಕಾರದೊಂದಿಗೆ ನಡೆದ ಒಪ್ಪಂದ ಯಾವತ್ತೂ ಬೆಳಕಿಗೆ ಬರಲೇ ಇಲ್ಲ. ನೀರು ಖಾಸಗೀಕರಣದ ಈ ಒಪ್ಪಂದ ವಿಶ್ವಬ್ಯಾಂಕ್ ಒತ್ತಾಯದ ಮೇರೆಗೆ ನಡೆದಿತ್ತು.

ಆದರೆ ಕೊಚಬಾಂಬ ನಗರದ ನೀರು ಖಾಸಗೀಕರಣಗೊಳ್ಳುತ್ತಲೇ ತಾನು ಹಾಕಿದ ಬಂಡವಾಳವನ್ನು ಆದಷ್ಟು ಬೇಗನೆ ವಾಪಾಸು ಪಡೆಯಬೇಕೆಂಬ ಹಂಬಲದೊಂದಿಗೆ ನೀರಿನ ದರವನ್ನು ಒಂದೇ ಸಮನೆ ಎರಡು ಪಟ್ಟಿಗಿಂತಲೂ ಜಾಸ್ತಿ ಹೆಚ್ಚಿಸಿತು. ಸಾಧಾರಣ ವೇತನ ಪಡೆಯುವ ಕಾರ್ಮಿಕರು ತಮ್ಮ ತಿಂಗಳ ವೇತನದ ಶೇ. 25ನ್ನು ನೀರಿಗಾಗಿ ಖರ್ಚು ಮಾಡಬೇಕಾಗಿತ್ತು.

ಆದ್ದರಿಂದ ಕಂಪೆನಿಯ ವಿರುದ್ಧ ಜನ ಹೋರಾಟಕ್ಕೆ ಇಳಿದರು. ಸಾರ್ವತ್ರಿಕ ಮುಷ್ಕರ, ರಸ್ತೆತಡೆ, ಪ್ರತಿಭಟನೆ ವಾರಗಟ್ಟಲೆ ನಡೆಯಿತು. ಆದರೂ ಬೂಲಿವಿಯಾ ಸರ್ಕಾರ ಜಗ್ಗಲಿಲ್ಲ. ಚಳುವಳಿಯನ್ನು ಬಗ್ಗುಬಡಿಯಲು ಮಿಲಿಟರಿಯನ್ನು ತಂದಿತು. ನೀರಿನ ದರ ಎಷ್ಟೊಂದು ಹೆಚ್ಚಾಗಿತ್ತೆಂದರೆ ಜನರು ಮಿಲಿಟರಿ ಬೆದರಿಕೆಗೂ ಹೆದರಲಿಲ್ಲ. ಶೇಕಡಾ 90ಕ್ಕೂ ಹೆಚ್ಚು ಜನ, ನೀರಿನ ವ್ಯವಸ್ಥೆಯನ್ನು ಸರಕಾರವೇ ವಹಿಸಿಕೊಳ್ಳಬೇಕೆಂದು ಒತ್ತಾಯಿಸಿತು. ಕೊನೆಗೂ ಸರಕಾರ ಮಣಿಯಲೇ ಬೇಕಾಯಿತು. ಬೆಕ್‌ಟೆಲ್ ಕಂಪನಿ ಗಂಟುಮೂಟೆ ಕಟ್ಟಿಕೊಂಡು ಬೊಲಿವಿಯಾವನ್ನು ಬಿಟ್ಟು ಓಡಬೇಕಾಯಿತು.

ಆದರೆ ತನ್ನ ತಪ್ಪನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಈ ಕಂಪೆನಿ, ಮಾದಕ ವಸ್ತುಗಳ ಕಳ್ಳ ಸಾಗಣೆದಾರರು ಮತ್ತು ಇತರೆ ಸಾಮಾಜಿಕ, ರಾಜಕೀಯ ಕಾರಣಗಳಿಂದಾಗಿ ಜನ ಅತೃಪ್ತಿಗೊಂಡಿದ್ದರೇ ಹೊರತು ನೀರಿನ ದರ ಏರಿಕೆಯಿಂದಲ್ಲ ಎಂದು ಹೇಳಿಕೆ ನೀಡಿತು. ಏಕೆಂದರೆ ಜಗತ್ತಿನ ಇತರ ಭಾಗಗಳಲ್ಲಿ ನೀರಿನ ಮಾರಾಟವಾಗಬೇಕಲ್ಲ!

ಯಾರು ಏನು ಹೇಳಿದರೂ ಬೊಲಿವಿಯಾದ ಜನತೆಗೆ, ಅದರಲ್ಲೂ ಕೊಚಬಾಂಬ ನಗರದ ಜನತೆಗೆ ಗೊತ್ತಿದೆ, ಅವರು ನಡೆಸಿದ ಚಳುವಳಿ, ಕಳ್ಳ ಸಾಗಣೆದಾರರ ಬೆಂಬಲದಿಂದಲ್ಲ. ಬದಲಾಗಿ ಬೆಕ್‌ಟೆಲ್ ಕಾರ್ಪೋರೇಷನ್‌ನ ಶೋಷಣೆಯ ವಿರುದ್ಧ ಎಂದು.



ಕೊಚಬಾಂಬ ನಗರದ ನೀರು ಖಾಸಗೀಕರಣ ವಿರೋಧಿಸಿ ಸಾರ್ವತ್ರಿಕ ಮುಷ್ಕರ, ಪ್ರತಿಭಟನೆ

ಮಾಧ್ಯಮ ಮಂಥನ

ಸಂಯುಕ್ತ ಕರ್ನಾಟಕ ಪತ್ರಿಕೆಗೆ ಒಂದು ಇತಿಹಾಸದ ಹಿನ್ನೆಲೆಯಿದೆ. ಸ್ವಾತಂತ್ರ್ಯ ಹೋರಾಟ ಮಾಡಿ ನಂತರ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪಾತ್ರವಹಿಸಿ ಜನಮನ ಗೆದ್ದಿದ್ದ ಪತ್ರಿಕೆಯೊಂದು ಈಗ ತನ್ನ ಧೋರಣೆ ಬದಲಿಸಿಕೊಂಡು ಚೆಡ್ಡಿ ಸಂತಾನದ ಶಿಶುವಾಗುತ್ತಿದೆಯೇ?

ದಿಕ್ಕೆಟ್ಟಿರುವ ಸಂಯುಕ್ತ ಕರ್ನಾಟಕ

ನಿತ್ಯಾನಂದ ಸ್ವಾಮಿ

ಕನ್ನಡ ಪತ್ರಿಕೋದ್ಯಮದಲ್ಲಿ ಅತ್ಯಂತ ಹಿರಿಯ ಪತ್ರಿಕೆಗಳಲ್ಲಿ ಒಂದಾದ 'ಸಂಯುಕ್ತ ಕರ್ನಾಟಕ' ದಿಕ್ಕೆಟ್ಟಿದೆ. 'ವಿಜಯ ಕರ್ನಾಟಕ'ದ ಬಿರುಗಾಳಿಯಿಂದ ಅದು ತತ್ತರಿಸಿದೆ. ಮೊನ್ನೆ ಮೊನ್ನೆ ಹುಟ್ಟಿದ ಪತ್ರಿಕೆಯೊಂದು ಒಡ್ಡಿದ ಸ್ಪರ್ಧೆಯನ್ನು ಎದುರಿಸಲಾಗದೆ, ಎಪ್ಪತ್ತಕ್ಕೂ ಹೆಚ್ಚು ಸಂವತ್ಸರಗಳನ್ನು ಕಂಡ ಪತ್ರಿಕೆಯೊಂದು ಗಡ ಗಡ ನಡುಗುತ್ತಿರುವುದನ್ನು ಕಂಡರೆ ಸೋಜಿಗವೆನಿಸುತ್ತದೆ. ಉತ್ತರ ಕರ್ನಾಟಕದ ಓದುಗರನ್ನು ಕಳೆದುಕೊಳ್ಳುವ ಭೀತಿಯಿಂದ 'ಸಂಯುಕ್ತ ಕರ್ನಾಟಕ' ಈಗ ಹಿಂದುತ್ವವನ್ನು ಅಪ್ಪಿಕೊಳ್ಳಲು ಹೊರಟಿದೆ. ದಿಢೀರನೆ ಎದ್ದಿರುವ ಹಿಂದುತ್ವದ ಅಲೆಯ ಮೇಲೆ ಮುಳುಗುತ್ತಿರುವ ಹಡಗುವೊಂದು ನೆಲೆಯನ್ನು ಕಾಣಲು ಹೊರಟಂತಿದೆ ಸಂಯುಕ್ತ ಕರ್ನಾಟಕದ ಪರಿಸ್ಥಿತಿ. ಪತ್ರಿಕೆಯು ಇತ್ತೀಚೆಗೆ ತನ್ನ ಧೋರಣೆಗಳನ್ನು ಸಾರಾಸಗಟಾಗಿ ಮಾರ್ಪಾಡು ಮಾಡಿರುವುದನ್ನು ನೋಡಿದರೆ ಇದು ನಿಜವೆನಿಸುತ್ತದೆ.

ಸ್ವಾತಂತ್ರ್ಯ ಸಮರದಲ್ಲಿ ಉತ್ತರ ಕರ್ನಾಟಕದಲ್ಲಿ ಅಂದು ಸ್ವಾತಂತ್ರ್ಯ ಹೋರಾಟದ ಸಂದೇಶವನ್ನು ಹಳ್ಳಿ ಹಳ್ಳಿಗಳಿಗೆ ಹಬ್ಬಿಸಿದ ಕೀರ್ತಿ ಸಂಯುಕ್ತ ಕರ್ನಾಟಕಕ್ಕೆ ಸಲ್ಲುತ್ತದೆ. 1929ರಲ್ಲಿ ಸಾಪ್ತಾಹಿಕವಾಗಿ ಆರಂಭಗೊಂಡ ಪತ್ರಿಕೆಯು ಮುಂದೆ 1933ರಲ್ಲಿ ದೈನಿಕವಾಗಿ ಮರು ಜನ್ಮ ಪಡೆಯಿತು. ಮೊದಲು ಬೆಳಗಾವಿಯಲ್ಲಿ ಪ್ರಾರಂಭವಾದ ಪತ್ರಿಕೆಯು ಮುಂದೆ ಕಾರಣಾಂತರದಿಂದ ಹುಬ್ಬಳ್ಳಿಗೆ ಸ್ಥಳಾಂತರಗೊಂಡಿತು. ಬೆಳಗಾವಿಯಲ್ಲಿ ಸಂಯುಕ್ತ ಕರ್ನಾಟಕಕ್ಕೆ ನಾಂದಿ ಹಾಡಿದವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ನಾರಾಯಣರಾವ್ ಜೋಶಿ, ಬಳವಂತರಾವ್ ದಾತಾರ, ಕೇಶವರಾವ್ ಗೋಖಲೆ ಮತ್ತು ಕೃಷ್ಣಾಜಿ ಗೆಜ್ಜಿ. ಅಂದಿನ ಕಠಿಣ ಪರಿಸ್ಥಿತಿಯಲ್ಲಿ, ಎಡೆ ಎಡೆಗೂ ಅಡ್ಡಗಾಲು ಹಾಕುತ್ತಿದ್ದ ಬ್ರಿಟಿಷ್ ಆಡಳಿತವನ್ನು ಎದುರಿಸಿ ಪತ್ರಿಕೆಯನ್ನು ಹೊರತರಲಾಗುತ್ತಿತ್ತು.

ಸ್ಟಾಲಿನ್ ಸಂಬಂಧ :

1917ರಲ್ಲಿ ನಡೆದ ಸೋವಿಯತ್ ಯೂನಿಯನ್ ಸಮಾಜವಾದಿ ಕ್ರಾಂತಿಯಿಂದ ಪ್ರಭಾವಿತರಾಗದೆ ಇರುವ ಭಾರತದ ಸ್ವಾತಂತ್ರ್ಯ ಹೋರಾಟಗಾರರೇ ಇಲ್ಲ ಎನ್ನಬಹುದು. ಕುವೆಂಪುರವರ ಕವಿ ಹೃದಯವೂ ಮಿಡಿದಿತ್ತು ಆ ಯುಗಪ್ರವರ್ತಕ ಘಟನೆಗೆ. ಆದರೆ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕಕ್ಕೆ ಸೋವಿಯತ್ ಯೂನಿಯ್ ಜೊತೆ ಇದ್ದ ಸಂಬಂಧದ ಬಗ್ಗೆ ಬಹಳಷ್ಟು ಜನಕ್ಕೆ ಗೊತ್ತಿಲ್ಲ. ಸಂಯುಕ್ತ ಕರ್ನಾಟಕದ ಸಂಸ್ಥಾಪಕರಲ್ಲಿ ಒಬ್ಬರಾದ ಕೇಶವ್‌ರಾವ್ ಗೋಖಲೆಯವರು ಬರೆದ ಗ್ರಂಥವೊಂದನ್ನು ಮಾಸ್ಕೋದಲ್ಲಿರುವ ಅಂತರ ರಾಷ್ಟ್ರೀಯ ಖ್ಯಾತಿಯ ಲೆನಿನ್ ಗ್ರಂಥಾಲಯವು ಸಂಗ್ರಹಿಸಿಟ್ಟಿದೆ.

ಗೋಖಲೆಯವರು ಕೊನೆಯವರೆಗೂ ಕಾಂಗ್ರೆಸಿಗರಾಗಿದ್ದರೂ ಕಮ್ಯೂನಿಸ್ಟ್ ಸಿದ್ಧಾಂತದಲ್ಲಿ ವಿಶ್ವಾಸ ಹೊಂದಿದವರಾಗಿದ್ದರು. ಇದು ಇನ್ನೂ ಅನೇಕ ಸ್ವಾತಂತ್ರ್ಯ ಹೋರಾಟಗಾರರ ವಿಷಯದಲ್ಲಿಯೂ ನಿಜವಾಗಿತ್ತು. ಕೆಲವರು ಆತ್ಮವಂಚಕರಾಗದೆ ತಾವು ನಂಬಿದ ಸಿದ್ಧಾಂತವನ್ನು ಬಹಿರಂಗವಾಗಿ ಅಪ್ಪಿಕೊಂಡು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರೆ, ಇನ್ನೂ ಕೆಲವರು ಕಾಂಗ್ರೆಸ್‌ನಲ್ಲಿಯೇ ಉಳಿದು ಅಧಿಕಾರದ ಸವಿಯನ್ನು ಸವಿದಿದ್ದಾರೆ.

ಕಮ್ಯುನಿಸ್ಟ್ ಸಿದ್ಧಾಂತದ ಬಗ್ಗೆ ಗೋಖಲೆಯವರಿಗಿದ್ದ ನಂಬಿಕೆ ಅವರನ್ನು ಆಗಿನ ಸೋವಿಯತ್ ಒಕ್ಕೂಟದ ಕೃಷಿ, ಕೈಗಾರಿಕೆ, ವಿಜ್ಞಾನ ಶಿಕ್ಷಣ, ಸಂಸ್ಕೃತಿ ಮತ್ತು ಇತರ ರಂಗಗಳ ಪ್ರಗತಿಯ ಬಗೆಗೆ ಅಧ್ಯಯನ ಮಾಡಲು ಪ್ರೇರೇಪಿಸಿತು. 7 ಸಂಪುಟಗಳಲ್ಲಿರುವ 1800 ಪುಟಗಳ ಅವರ ವಿದ್ವತ್ಪೂರ್ಣವಾದ ಈ ಗ್ರಂಥವು 1917ರಿಂದ 1944ರವರೆಗೆ 27 ವರ್ಷಗಳ ಕಾಲ ಅವರು ನಡೆಸಿದ ದೀರ್ಘ ಅಧ್ಯಯನದ ಫಲವಾಗಿತ್ತು. ಅದರ ಒಂದು ಪ್ರತಿಯನ್ನು ಅವರು ಸ್ಟಾಲಿನರಿಗೆ ಕಳುಹಿಸಿಕೊಟ್ಟರು. ಸ್ಟಾಲಿನ್ ಅದನ್ನು ಹೆಮ್ಮೆಯಿಂದ ಸ್ವೀಕರಿಸಿ ಲೆನಿನ್ ಗ್ರಂಥಾಲಯದಲ್ಲಿ ಇರಿಸಿದರು. ಆನಂತರ ಮಾಸ್ಕೋ ನಗರಕ್ಕೆ ಭೇಟಿಕೊಟ್ಟ ಅನೇಕರು ಲೆನಿನ್ ಲೈಬ್ರರಿಯಲ್ಲಿ ಮರಾಠಿ ಭಾಷೆಯಲ್ಲಿರುವ ಈ ಗ್ರಂಥವನ್ನು ಖುದ್ದಾಗಿ ನೋಡಿ ಬಂದಿದ್ದಾರೆ.

ಲೋಕ ಶಿಕ್ಷಣ ಟ್ರಸ್ಟ್

ಹುಬ್ಬಳ್ಳಿಯಲ್ಲಿ 1921 ರಿಂದಲೇ ಕರ್ಮವೀರ ವಾರ ಪತ್ರಿಕೆಯು ಸ್ವಾತಂತ್ರ್ಯ ಸಮರದ ಕಹಳೆಯನ್ನು ಮೊಳಗಿಸುತಿತ್ತು. ರಂಗನಾಥ ದಿವಾಕರರು ಅದರ ಸಂಪಾದಕರಾಗಿದ್ದರು. ಬ್ರಿಟಿಷರ ವಿರುದ್ಧ ಟೀಕೆಮಾಡಿ ಬರೆದ ಬರಹಗಳಿಗಾಗಿ ಸರ್ಕಾರ ಅವರನ್ನು ದಸ್ತಗಿರಿ ಮಾಡಿತು.

ಬಿಜಾಪುರದವರಾದ ಖ್ಯಾತ ಪತ್ರಿಕೋದ್ಯಮಿಯಾಗಿ ಹೆಸರುಗಳಿಸಿದ ಮೋಹರೆ ಹಣಮಂತ ರಾಯರು 1934ರಲ್ಲಿ ಬೆಳಗಾವಿಗೆ ಆಗಮಿಸಿ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ ಕೆಲಸ ಆರಂಭಿಸಿದರು. 1935ರಲ್ಲಿ ರಂಗನಾಥ ದಿವಾಕರರು ಸೆರೆಮನೆಯಿಂದ ಬಿಡುಗಡೆಯಾಗಿ ಬಂದರು. ನಾರಾಯಣರಾವ್ ಜೋಶಿಯವರು ಸಂಯುಕ್ತ ಕರ್ನಾಟಕವನ್ನು ನಡೆಸುವ ಜವಾಬ್ದಾರಿಯನ್ನು ದಿವಾಕರರಿಗೆ ಒಪ್ಪಿಸಿ ಪತ್ರಿಕೆಯನ್ನು ಹುಬ್ಬಳ್ಳಿಯಿಂದ ಮುನ್ನಡೆಸಲು ತಿಳಿಸಿದರು. 1937 ಆಗಸ್ಟ್ ತಿಂಗಳಲ್ಲಿ ಸಂಯುಕ್ತ ಕರ್ನಾಟಕವು ಹುಬ್ಬಳ್ಳಿಯಿಂದ ಹೊರಡಲಾರಂಭಿಸಿತು. ಮುಂದೆ 1948ರಲ್ಲಿ ದಿವಾಕರರು ಮತ್ತು ಇತರರು ಸೇರಿಕೊಂಡು ಲೋಕಶಿಕ್ಷಣ ಟ್ರಸ್ಟ್ ಸ್ಥಾಪಿಸಿದರು. ಮೊಹರೆಯವರ ನೇತೃತ್ವದಲ್ಲಿ ಮತ್ತು ಸಂಪಾದಕತ್ವದಲ್ಲಿ ಟ್ರಸ್ಟಿನ ಪತ್ರಿಕೆಗಳು ಅದ್ಭುತವಾಗಿ ಅಭಿವೃದ್ಧಿ ಹೊಂದಿದವು. ವಿ.ಬಿ.ನಾಯಕ್, ಆರ್.ಬಿ.ಕುಲಕರ್ಣಿ, ಆರ್.ಕೆ.ಜೋಶಿ, ಎಂ.ಎಚ್.ಕೌಜಲಗಿ, ವಿ.ಎಸ್.ದಿವಾಕರ, ಶ್ಯಾಮರಾವ್ ಮುಂತಾದವರು ಪತ್ರಿಕೆಯ ಅಭಿವೃದ್ಧಿಗೆ ತಮ್ಮ ಕೊಡುಗೆಯನ್ನು ನೀಡಿದರು.


ಕರ್ನಾಟಕ ಏಕೀಕರಣ ಚಳುವಳಿ

ಅನೇಕ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ನಾಡಿನ ಏಕೀಕರಣಕ್ಕಾಗಿ ನಡೆದ ಚಳುವಳಿ ಯಲ್ಲಿಯೂ ಸಂಯುಕ್ತ ಕರ್ನಾಟಕ ಮಹತ್ವದ ಪಾತ್ರವನ್ನು ನಿರ್ವಹಿಸಿತು. ಭಾಷಾವಾರು ಪ್ರಾಂತ್ಯ ಗಳನ್ನು ರಚಿಸುವ ತನ್ನ ಭರವಸೆಯನ್ನು ಜಾರಿಗೊಳಿಸಲು ಕೇಂದ್ರದ ಕಾಂಗ್ರೆಸ್ ಸರ್ಕಾರ ಹಿಂದೇಟು ಹಾಕುತ್ತಿದ್ದಾಗ ಚಳುವಳಿ ನಡೆಸುವುದು ಅನಿವಾರ್ಯವಾಯಿತು. ಚಳುವಳಿಯ ನೇತೃತ್ವ ವಹಿಸಿದ್ದ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಇದರ ಕೇಂದ್ರವು ಹುಬ್ಬಳ್ಳಿಯೇ ಆಗಿತ್ತು. ಶಿವಮೂರ್ತಿ ಸ್ವಾಮಿ ಅಳವಂಡಿಗಿ ಅದರ ಅಧ್ಯಕ್ಷರಾಗಿದ್ದರು. ಸಂಯುಕ್ತ ಕರ್ನಾಟಕ ಸಹಜವಾಗಿಯೇ ಅದರ ಮುಖವಾಣಿಯಂತೆ ಕಾರ್ಯನಿರ್ವಹಿಸಿತು.

ಹೀಗೆ ದೇಶದ ಸ್ವಾತಂತ್ರ್ಯಕ್ಕಾಗಿ, ನಾಡಿನ ಏಕೀಕರಣಕ್ಕಾಗಿ ನಡೆದ ಹೋರಾಟಗಳ ಮುಖ್ಯ ವಾಹಿನಿಯಲ್ಲಿದ್ದ ಸಂಯುಕ್ತ ಕರ್ನಾಟಕವು ದೇಶದ ಏಕತೆ, ಸಮಗ್ರತೆ, ಜಾತ್ಯಾತೀತತೆಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆದಿತ್ತು. ಮತಾಂಧತೆ, ಮೂಢನಂಬಿಕೆ ಅಸ್ಪೃಶ್ಯತೆ ಮುಂತಾದ ಅನಿಷ್ಟಗಳ ವಿರುದ್ಧ ಜನತೆಯಲ್ಲಿ ಜಾಗೃತಿ ಹುಟ್ಟಿಸುವುದರಲ್ಲಿ ಅಂದು ಹಿಂದೆ ಬೀಳುತ್ತಿರಲಿಲ್ಲ. ಹಿರಿಯ ಕಮ್ಯುನಿಸ್ಟರಾದ ಎನ್.ಕೆ. ಉಪಾಧ್ಯಾಯ, ಎ.ಜೆ. ಮುಧೋಳ್ ಮೊದಲಾದವರ ಕ್ರಾಂತಿಕಾರಿ ಬರಹಗಳು ಮತ್ತು ಅವರ ನಿರ್ಭಿಡೆಯ ಹೇಳಿಕೆಗಳು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದವು. ಆದರೆ ಇದೆಲ್ಲವು ಹಿಂದಿನ ವಿಚಾರಗಳು. ಈಗ ಸಂಯುಕ್ತಕರ್ನಾಟಕ ಗುರುತು ಸಿಗಲಾರದಷ್ಟು ಬದಲಾಗಿದೆ.

ಅಧಃಪತನದತ್ತ :

ಲೋಕ ಶಿಕ್ಷಣ ಟ್ರಸ್ಟ್ ಒಳಗೆ ಈಗ ಎಲ್ಲವೂ ಮೊದಲಿನಂತಿಲ್ಲ ಎಂಬುದು ಇತ್ತೀಚಿನ ಬೆಳವಣಿಗೆಗಳಿಂದ ಕಂಡುಬರುತ್ತಿದೆ. ಕಳೆದ ಡಿಸೆಂಬರ್ ತಿಂಗಳಲ್ಲಿ ನಿಧನರಾದ ಶಾಮರಾಯರು ಮೊದಲೇ ಅಲ್ಲಿಂದ ಹೊರನಡೆದಿದ್ದರು. ಅನಂತರ ಆಡಳಿತ ಮಂಡಳಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ತನ್ನ ಪ್ರತಿಗಾಮಿ ಧೋರಣೆಗಳಿಗೆ ಕುಖ್ಯಾತರಾದ ಹಾರ್ನಹಳ್ಳಿ ರಾಮಸ್ವಾಮಿ ಅಧಿಕಾರ ವಹಿಸಿಕೊಳ್ಳುವುದರೊಂದಿಗೆ ಪತ್ರಿಕೆಯ ಧೋರಣೆಯಲ್ಲಿಯೂ ಗಂಭೀರ ಸ್ವರೂಪದ ಬದಲಾವಣೆ ಯಾಗಿದೆ. ಒಂದು ಕಾಲದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಕರ್ನಾಟಕದ ಏಕೀಕರಣಕ್ಕಾಗಿ ಎಲ್ಲ ಕೋಮಿನ ಜನಗಳನ್ನು ಒಂದುಗೂಡಿಸಲು ನೆರವಾದ ಪತ್ರಿಕೆಯು ಇಂದು ದೇಶದ ಐಕ್ಯತೆ ಮತ್ತು ಕೋಮು ಸಾಮರಸ್ಯಕ್ಕೆ ಧಕ್ಕೆತರುವಂತಹ ಧೋರಣೆಗಳಿಗೆ ಶರಣಾಗುತ್ತಿದೆ. ಪತ್ರಿಕೆಯು ನಿರ್ವಹಿಸಿಕೊಂಡು ಬಂದ ಹೊಣೆಗಾರಿಕೆಯನ್ನು ಗಾಳಿಗೆ ತೂರಿ ಅಧಃಪತನದತ್ತ ಹೆಜ್ಜೆಹಾಕುತ್ತಿದೆ.



ಆಕ್ರಮಣಕಾರಿ ಹಿಂದುತ್ವದ ಕಟು ಟೀಕಾಕಾರರಾಗಿರುವ ಎಡಪಂಥಿಯರ ಮೇಲೆ, ಮುಖ್ಯವಾಗಿ ಭಾರತದ ಕಮ್ಯುನಿಸ್ಟರ ಮೇಲೆ ಸಂಯುಕ್ತ ಕರ್ನಾಟಕ ಆರಂಭಿಸಿರುವ ಧಾಳಿ ಅದರ ಧೋರಣೆಯಲ್ಲಾದ ಬದಲಾವಣೆಗೆ ಹಿಡಿದ ಕನ್ನಡಿಯಾಗಿದೆ.

ಕಮ್ಯುನಿಸ್ಟರ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಮಸಿಬಳಿಯಲು ಸಿ. ಸೀತಾರಾಂ ಎಂಬ ಚೆಡ್ಡಿ ಚತುರನೊಬ್ಬನಿಂದ ಅಗ್ರ ಲೇಖನಗಳನ್ನು ಬರೆಯಿಸುತ್ತಿದ್ದಾರೆ. ಆತ ಬಾಯಿಗೆ ಬಂದದ್ದನ್ನು ಬರೆಯುತ್ತಿರುತ್ತಾನೆ. ಆತನ ಆರೋಪಗಳಿಗೆ ಆಧಾರಗಳಿರುವುದಿಲ್ಲ. ಆತನ ಟೀಕೆಗಳಿಗೆ ತಾರ್ಕಿಕ ನೆಲೆ-ಬೆಲೆ ಯಾವುದೂ ಇರುವುದಿಲ್ಲ. ಆತ ಬರೆದುದೆಲ್ಲವನ್ನು ಇವರು ಪ್ರಕಟಿಸುತ್ತಾರೆ. ಓದುಗರ ಪ್ರತಿಕ್ರಿಯೆಗಳನ್ನು ಮಾತ್ರ ಪ್ರಕಟಿಸುವುದಿಲ್ಲ.

ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಬೇಕೆಂದು
ಸೀತಾರಾಂ ಸಲಹೆ ಮಾಡಿದ್ದಾನೆ. ಇದು
ಕರ್ನಾಟಕದ ಅಭಿಪ್ರಾಯವಲ್ಲ
ಪತ್ರಿಕೆಯಿಂದ ಸ್ಪಷ್ಟನೆ ಬಂದಿಲ್ಲ.
ಕಮ್ಯುನಿಸ್ಟ್ ಪಕ್ಷವನ್ನು ಬ್ರಿಟೀಷರು ನಿಷೇ
ಬ್ರಿಟಿಷರು ಕಾಂಗ್ರೆಸ್ ಪಕ್ಷವನ್ನು ನಿಷೇಧಿ
ಕಾಂಗ್ರೆಸ್ ಹುಟ್ಟಿದ್ದೇ ಬ್ರಿಟಿಷರ ಆ
ಯೊಂದಿಗೆ. ಕಮ್ಯುನಿಸ್ಟರಿಗೆ ಸ್ವಾ
ಪಡೆಯುವುದು ಎಷ್ಟು ಮುಖ್ಯವಾಗಿತ್ತೊ
ಮುಖ್ಯ ಜನತೆಯನ್ನು ಬಂಡವಾ
ಭೂಮಾಲಿಕ ಶಕ್ತಿಗಳ ಶೋಷಣೆಯಿಂದ
ಗೊಳಿಸುವುದೂ ಆಗಿತ್ತು. ಇದು ಬ್ರಿ
ನುಂಗಲಾರದ ತುತ್ತಾಗಿತ್ತು. ಸಂಪೂರ್ಣ ಸ್ವಾ
ಬೇಡಿಕೆಯನ್ನು ಮೊದಲು ಘೋಷಿ
ಕಮ್ಯುನಿಸ್ಟರು. ಭಾರತದಲ್ಲಿ ಕಮ್ಯು
ಪ್ರಬಲರಾಗುವುದನ್ನು ತಡೆಯಲು ಬ್ರಿಟಿ
ಪ್ರಯತ್ನಗಳನ್ನು ಮಾಡಿದರು. ಕಮ್
ಮುಖಂಡರ ಮೇಲೆ ಸುಳ್ಳು ಪಿತೂರಿ ಮೊ
ಗಳನ್ನು ಹೂಡಿ ಅವರನ್ನು ಜೈಲ
ಬಂದಿಸಿಟ್ಟರು. ಕೊನೆಗೆ ಕಮ್ಯುನಿಸ್ಟ್
ನಿಷೇದಿಸಿದರು. ಆದರೆ ಅಪ್ಪಟ ದೇ
ಕಮ್ಯುನಿಸ್ಟರು ಭೂಗತರಾಗಿ, ಕಾಡುಮೇ
ಬದುಕಿ, ಅಪಾರ ತ್ಯಾಗ ಬಲಿದಾನಗಳ
ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿದರು

ಬ್ರಿಟಿಷರು ಕಮ್ಯುನಿಸ್ಟ್ ಪ
ನಿಷೇದಿಸಿದರೂ ಕಮ್ಯುನಿಸ್ಟ್ ಪಕ್ಷ ನಾಶ
ಭಾರತ ಸರ್ಕಾರವು ಕಮ್ಯುನಿಸ್ಟ್ ಪಕ್ಷವನ್ನು
ದರೂ ಕಮ್ಯುನಿಸ್ಟ್ ಪಕ್ಷವು ನಾಶವಾ
ಕಮ್ಯುನಿಸ್ಟ್ ಪಕ್ಷವೆಂದರೆ ಶೋಷಿ
ಶೋಷಣೆಯ ವಿರುದ್ಧ ಎತ್ತುವ
ಕಮ್ಯುನಿಸ್ಟ್ ಪಕ್ಷವನ್ನು ನಿಷೇದಿಸಬೇಕೆನ
ಪಶ್ಚಿಮ ಬಂಗಾಳ, ತ್ರಿಪುರಾ ರಾಜ್ಯಗಳ
ಕಣ್ಣು ತೆರೆದು ನೋಡಲಿ. ಅಲ್ಲಿಯ ಜ
25 ವರ್ಷಗಳಿಂದ ಬಹಿಷ್ಕರಿಸು ತ್ರಿ
ಯಾರನ್ನು? ಸಂಯುಕ್ತ ಕರ್ನಾಟಕ
ಹೇಳುವುದಿದೆ? ಈ ಕುರಿತು. ಪಶ್ಚಿಮ ಬ
ಎಲ್ಲ ಪತ್ರಿಕೆಗಳು ಒಟ್ಟಾಗಿ ಅಲ್ಲಿನ
ಸರ್ಕಾರದ ವಿರುದ್ಧ ಪ್ರತಿದಿನ ಬೊಗಳ
ಅಲ್ಲಿಯ ಜನ ತಮ
ಅನುಭವದಿಂದ
ಮುಖಕ್ಕೆ ಇಕ್ಕುತ್ತಿದ್ದಾ

ಕಮ್ಯುನಿಸ್ಟರನ್ನು
ಹೀಯಾಳಿಸಲು ಒ
ಬಂಟನನ್ನು ತಂದಿ
ಪತ್ರಿಕೆಯ ಓದುಗ
ಹೆಚ್ಚಾಗುತ್ತದೆ
ಸುಬ್ಬರಾಯರು
ಕೊಂಡಿದ್ದರೆ ಅದು
ಭ್ರಮೆ. ಉತ್ತರ ಕ
ಓದುಗರು ಬಹಳ
ಪತ್ರಿಕೆಯನ್ನು ಓದ
ಅದರ ಪ್ರಗತಿಪರ ಜ
ಧೋರಣೆಯನ್ನು ಮ
ಜನ ಅದನ್ನು ಬೆಂ
ಬಂದಿದ್ದಾರೆ. ರಾಜ
ಪತ್ರಿಕೆಯು ಕಾ
ಬೆಂಬಲಿಸುತ್ತಾ ಬಂದಿದ್ದರು ಪತ್ರಿಕಾ
ಪತ್ರಿಕೆಯಿಂದ ಚ್ಯುತಿ ಉಂಟಾಗಿರಲಿ
ಈಗ ತನ್ನ ಪರಂಪರಾಗತ ಮೌಲ್ಯಗಳ
ತೂರಿ ಸಂಯುಕ್ತ ಕರ್ನಾಟಕ
ಶರಣಾಗುತ್ತಿರುವುದು ಅದರ
ಮುನ್ಸೂಚನೆಯಾಗಿದೆ.

ನಗರಗಳತ್ತ ಗುಳೆ ಹೊರಟ ಕೂಲಿಕಾರರು

ಬರಗಾಲದ ದವಡೆಯಲ್ಲಿ ಸಿಕ್ಕಿರುವ ಕೂಲಿಕಾರರು ಕೆಲಸ ಹುಡುಕಿ ಪರದಾಡುತ್ತಿದ್ದಾರೆ. ಅದರ ಒಂದು ನಿದರ್ಶನ ಜಗಳೂರಿನ ಕೂಲಿಕಾರರು ಗುಳೇ ಹೊರಟದ್ದು... ಆ ಕಷ್ಟಗಳೇನು?

ಬರಗಾಲದ ತೀವ್ರ ಹೊಡೆತಕ್ಕೆ ಸಿಲುಕಿರುವ ಕೂಲಿಕಾರರು ಜೀವನ ನಿರ್ವಹಣೆಗಾಗಿ ಪರದಾಡುತ್ತಿರುವಂತಾಗಿ, ಹೊಟ್ಟೆಪಾಡಿಗಾಗಿ ಕೂಲಿಯನ್ನರೆಸಿ ಮಂಗಳೂರು, ಕೊಡಗು ಹಾಸನ ನಗರಗಳತ್ತ ಸಾಮೂಗಿಹಿಕವಾಗಿ ಗುಳೆ ಹೋಗಿದ್ದು ಜಗಳೂರು ತಾಲ್ಲೂಕಿನ ಹಳ್ಳಿಗಳಲ್ಲಿ



ಸ್ಮಶಾನಮೌನ ಆವರಿಸಿದೆ. ಜಗಳೂರು ಗೊಲ್ಲರಹಟ್ಟಿ, ಪಲ್ಲಾಗಟ್ಟೆ, ಹುಚ್ಚಂಗಿಪುರ, ಧರಂಪುರ, ಮುಚ್ಚನೂರು, ಮುಗ್ಗಿದರಾಗಿಹಳ್ಳಿ, ಬೆಂಚಿಕಟ್ಟೆ, ಚಿದುರಗೊಳ್ಳ, ಹೊನ್ನಮರಡಿ, ಮಾಳಮ್ಮನಹಳ್ಳಿ ಮುಂತಾದ ಗ್ರಾಮಗಳ ಕೂಲಿಕಾರರು ತಾವು ಸಾಕಿದ ಕುರಿ, ಕೋಳಿಗಳನ್ನು ಬೇರೆಯವರಿಗೆ ಒಪ್ಪಿಸಿ, ತಮ್ಮ ಮನೆಗಳಿಗೆ ಬೀಗ ಜಡಿದು ಮಕ್ಕಳುಮರಿಯೊಂದಿಗೆ ತೆರಳಿದ್ದಾರೆ. ಮಳೆ ಬರುವುದು ಇನ್ನೂ ತಡವಾಗುವ ಲಕ್ಷಣಗಳು ಕಾಣುತ್ತಿರುವುದರಿಂದ ಗುಳೆ ಹೋಗುವವರ ಸಂಖ್ಯೆ ಪ್ರತಿದಿನ ಹೆಚ್ಚಾಗುತ್ತಿದೆ.

"ಇಲ್ಲಿಯವರೆಗೆ ಮಳೆ ಬರಬಹುದೇನೋ ಅಂತ ನೋಡಿದ್ವಿ. ಆದ್ರೆ ಮಳೆಯ ಸುಳಿವೇ ಇಲ್ಲ. ಎರಡು ತಿಂಗಳಿಂದ ಏನೂ ಕೆಲ್ಸವಿಲ್ದೆ ತಿನ್ನೋಕೆ ಫಜೀತಿ ಆಗ್ತೈತೆ. ಅದ್ಕೆ ಹಾಸನದಲ್ಲಿ ಕೆಲ್ಸ ಸಿಗಬಹುದು ಅಂತಾ ಹೊಂಟೀವಿ" ಅನ್ನುತ್ತಾನೆ ಗಂಟುಮೂಟೆ ಹೊತ್ತು ನಿಂತ ಕೂಲಿಕಾರ ರಾಮಾಂಜನೇಯ.

ಕೂಲಿಕಾರರನ್ನು ಕರೆದೊಯ್ಯುವ ಜವಾಬ್ದಾರಿ ಹೊತ್ತಿರುವ ಮೇಸ್ತ್ರಿ ತಿಪ್ಪೇಸ್ವಾಮಿಯನ್ನು ಪ್ರಶ್ನಿಸಿದರೆ, "ಎಲ್ಲಿಯೂ ಸರಿಯಾಗಿ ಕೆಲ್ಸ ಇಲ್ಲ ಸಾರ್. ಒಂದು ಕಡೆ ಹದಿನೈದು ದಿನ ಕೆಲ್ಸ ಮಾಡಿದರೆ ಮತ್ತೊಂದು ಕಡೆ ಕೆಲ್ಸ ಸಿಗೋವರೆಗೂ ಸಾಲ ಮಾಡಿ ತಿನ್ಬೇಕು. ಆ ಸಾಲ ತೀರಿಸೋಕೆ ಹೆಂಡತಿ ಮಕ್ಕಳೊಂದಿಗೆ ಮತ್ತೆ ತಿಂಗಳುಗಟ್ಲೆ ಕೆಲ್ಸ ಮಾಡ್ಬೇಕು." ಎಂದು ಉತ್ತರಿಸುತ್ತಾನೆ. ಈ ಸಲ ಎಲ್ಲಿಗೆ ಹೊರಟಿದ್ದೀರಿ, ಅಲ್ಲಿ ಏನು ಕೆಲ್ಸ, ಎಲ್ಲಿ ಇರ್ತೀರಿ ಎಂದು ಕೇಳಿದಾಗ "ಈ ಸಲ ಮಂಗಳೂರು ಹತ್ತಿರ ಉಪ್ಪಿನಂಗಡಿಗೆ ಹೊರಟಿದ್ದೇವೆ. ಮಹಿಳೆಯರು ಮಕ್ಕಳು ಸೇರಿ ಸುಮಾರು ಒಂದು ನೂರು ಜನ ಇದ್ದೀವಿ. ಟೆಲಿಫೋನ್ ಕೇಬಲ್ ಹಾಕೋ ಕೆಲ್ಸ, ಸುಮಾರು ಒಂದು ತಿಂಗಳ ಆಗ್ಬೋದು. ರಸ್ತೆ ಬದಿ ಗುಡ್ಸ್ಲು ಹಾಕ್ಕೊಂಡು ಇರ್ತೀವಿ". ಅನ್ನುತ್ತಾನೆ ತಿಪ್ಪೇಸ್ವಾಮಿ.

ಗುಳೆ ಹೊರಟು ನಿಂತವರಲ್ಲಿ ಆರ್.ಟಿ.ರಮೇಶ್ ಬಿ.ಎ.ಪದವೀಧರ ಸರ್ಕಾರಿ ನೌಕರಿಗಾಗಿ ಕಾದು ಬೇಸತ್ತ ಈತ ಸ್ವಯಂ ಉದ್ಯೋಗ ಯೋಜನೆಯ ಅಡಿಯಲ್ಲಿ ಹಲವು ಬಾರಿ ಅರ್ಜಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. "ನನ್ನಂಥ ಬಡವನಿಗೆ ಸಾಲ ಕೊಡಲು ಎಲ್ಲಾ ಬ್ಯಾಂಕಿನವರು ನಿರಾಕರಿಸಿದರು. ಏನಾದರೂ ಸ್ವಂತ ಉದ್ಯೋಗ ಮಾಡೋಣವೆಂದರೆ ನನ್ನ ಕೈಲಿ ದುಡ್ಡಿಲ್ಲ. ಆದ್ದರಿಂದ ಅನಿವಾರ್ಯವಾಗಿ ಕೂಲಿ ಮಾಡಲು ಹೊರಟಿದ್ದೇನೆ" ಎಂದು ಆತ ನೊಂದು ಹೇಳುತ್ತಾನೆ.

ಚುನಾಯಿತ ಪ್ರತಿನಿಧಿಗಳ ಅಕ್ಷಮ್ಯ ನಿರ್ಲಕ್ಷ

ಜಗಳೂರು ರಾಜ್ಯದ ಅತಿ ಹಿಂದುಳಿದ ತಾಲ್ಲೂಕುಗಳಲ್ಲೊಂದು. ನಿರಂತರ ಬರಗಾಲಕ್ಕೆ ತುತ್ತಾಗುತ್ತಾ ಬಂದಿರುವ ಈ ತಾಲೂಕಿಗೆ ಯಾವುದೇ ನೀರಾವರಿ ಸೌಲಭ್ಯಗಳಿಲ್ಲ. ಮಳೆಯ ಅಭಾವದಿಂದಾಗಿ ತಾಲ್ಲೂಕಿನ ಮೂವತ್ತಕ್ಕೂ ಹೆಚ್ಚು ಕೆರೆಗಳು ಬತ್ತಿಹೋಗಿವೆ. ಅಂತರ್ಜಲಮಟ್ಟ ತೀರಾ ಕುಸಿದಿದ್ದು ಕೊಳವೆ ಬಾವಿಗಳಲ್ಲಿಯೂ ನೀರು ಇಲ್ಲದಂತಾಗಿದೆ.

ಕೂಲಿಕಾರರಿಗೆ ಕೆಲಸ ಒದಗಿಸುವ ಯಾವುದೇ ಬರಪರಿಹಾರ ಕಾಮಗಾರಿಗಳು ತಾಲ್ಲೂಕಿನಲ್ಲಿ ನಡೆಯುತ್ತಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ವಾರಕ್ಕೊಮ್ಮೆ ಬರಪರಿಹಾರ ಕಾಮಗಾರಿಗಳ ಕುರಿತಾದ ಸಭೆ ನಡೆಸಲಾಗುತ್ತಿದೆ. ಆದರೆ ಕಳೆದ ಐದಾರು ತಿಂಗಳುಗಳಿಂದ ತಾಲ್ಲೂಕಿನಲ್ಲಿ ಯಾವುದೇ ಕಾಮಗಾರಿಗಳು ನಡೆದಿಲ್ಲ. ರೈತ ಕಾಯಕ ಕೆರೆ ಯೋಜನೆಯ ಅಡಿಯಲ್ಲಿ ಜಗಳೂರು ಕೆರೆ ಹೂಳೆತ್ತಲು 16.5 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಲಾಗುತ್ತಿದ್ದರೂ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ.

ನೀರಾವರಿ ಸೌಲಭ್ಯದಿಂದ ವಂಚಿತವಾದ ಈ ಬರಡು ತಾಲ್ಲೂಕಿನಲ್ಲಿ ಸಾಮಾಜಿಕವಾಗಿ ಅತ್ಯಂತ ಹಿಂದುಳಿದವರಾಗಿರುವ ಇವರಲ್ಲಿ ಬಹುತೇಕ ಮಂದಿಗೆ ಸ್ವಂತ ಭೂಮಿ ಇಲ್ಲ. ಸರಿಯಾಗಿ ಮಳೆಯಾದರೆ ಬೇರೆಯವರ ಹೊಲಗಳಲ್ಲಿ ಇವರಿಗೆ ದುಡಿಮೆ. ಇವರ ಮಕ್ಕಳು ಶಾಲೆಯ ಮುಖ ನೋಡಿರುವುದೇ ಅಪರೂಪ. ವಾಸ ಮಾಡಲು ಯೋಗ್ಯ ಮನೆಗಳಿಲ್ಲ. ಸರ್ಕಾರ ವಸತಿ ಯೋಜನೆ, ರೇಷನ್ ಕಾರ್ಡು, ಭಾಗ್ಯಜ್ಯೋತಿಯಂತಹ ಎಲ್ಲಾ ಸವಲತ್ತುಗಳಿಂದಲೂ ಇವರು ವಂಚಿತರು.

ಇದೆಲ್ಲದರೊಂದಿಗೆ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ಅಂತರ್ಜಲ ಮಟ್ಟ ತೀರಾ ಪಾತಾಳಕ್ಕೆ ಸರಿದದ್ದು ಮಾತ್ರವಲ್ಲದೆ ಲಭ್ಯವಾಗುತ್ತಿರುವ ಅತ್ಯಲ್ಪ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿದೆ. 2000 ದ ಏಪ್ರಿಲ್‌ನಲ್ಲಿ ದಾವಣಗೆರೆಯ ಬಾಪುಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಪರಿಸರ ಇಲಾಖೆಯವರು ತಾಲ್ಲೂಕಿನಾದ್ಯಂತ ಕುಡಿಯುವ ನೀರಿನ ಪರೀಕ್ಷೆ ನಡೆಸಿ ನೀರಿನಲ್ಲಿ ಫ್ಲೋರೈಡ್ ಅಂಶ ಅಪಾಯಕಾರಿ ಪ್ರಮಾಣಕ್ಕಿಂತ ಹೆಚ್ಚಿಗೆ ಇರುವುದನ್ನು 75 ಗ್ರಾಮಗಳಲ್ಲಿ ಗುರುತಿಸಿದ್ದಾರೆ.

ತಾಲ್ಲೂಕಿನ ಹುಚ್ಚವ್ವನಹಳ್ಳಿ, ಹಿರೇಮಲ್ಲನ ಹೊಳೆ, ಮಲ್ಲಾಪುರ, ಗೋಪಗೊಂಡನಹಳ್ಳಿ, ಸೊಕ್ಕೆ, ಸಿದ್ದಯ್ಯನ ಕೋಟೆ ಮೊದಲಾದ ಹಳ್ಳಿಗಳ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದು ಕಂಡುಬಂದಿದೆ. ಜಗಳೂರು ಪಟ್ಟಣದ 20 ಸಾವಿರ ಜನರಿಗೆ ಮಾಳಮ್ಮನಹಳ್ಳಿಯ ಮೂರು ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪೂರೈಸಲಾಗುತ್ತಿದ್ದು ಈ ನೀರಿನಲ್ಲಿಯೂ ಫ್ಲೋರೈಡ್ ಅಂಶವಿದೆ.

ಕಳೆದ ಹಲವು ವರ್ಷಗಳಿಂದ ಇಲ್ಲಿನ ಜನ ಇದೇ ಅಪಾಯಕಾರಿ ನೀರನ್ನು ಕುಡಿಯುತ್ತಾ ಹಲ್ಲಿನ ರೋಗ, ಬೆನ್ನು ಮೂಳೆರೋಗ ಮಂಡಿ ನೋವು, ಸೊಂಟನೋವು ಮೊದಲಾದ ಕಾಯಿಲೆಗಳಿಂದ ನರಳುತ್ತಿದ್ದಾರೆ. ಮಕ್ಕಳಲ್ಲಿ ಮೂಳೆ ಬೆಳವಣಿಗೆ ಕುಂಠಿತವಾಗಿದ್ದರೆ ಮಹಿಳೆಯರಿಗೆ ಕೆಲಸ ಮಾಡುವುದು ಕಷ್ಟವಾಗಿದೆ.

ಜಗಳೂರು ತಾಲ್ಲೂಕಿನ ಶಾಸಕ ಜಿ.ಎಚ್.ಅಶ್ವತ್ಥ ರೆಡ್ಡಿಯವರಿಗಾಗಲಿ, ಜಿಲ್ಲಾ ಉಸ್ತುವಾರಿ ಮಂತ್ರಿ ಎಸ್.ಎಸ್.ಮಲ್ಲಿಕಾರ್ಜುನ ಅವರಿಗಾಗಲಿ ತಾಲ್ಲೂಕಿನ ಜನತೆಯ ಬವಣೆ ಗೊತ್ತಿಲ್ಲದ ವಿಷಯವೇನೂ ಅಲ್ಲ. ಇಬ್ಬರೂ ಕಾಂಗ್ರೆಸ್ ಪಕ್ಷದವರಾಗಿದ್ದರೂ ಅವರ ನಡುವೆ ತಾಳಿಲ್ಲ. ಅಶ್ವತ್ಥ ರೆಡ್ಡಿಯವರು 5ನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದು 2 ಸಲ ಮಂತ್ರಿಯೂ ಆಗಿದ್ದವರು. ಒಂದು ಸಲವೂ ಇವರು ತನಗೆ ಮತ ನೀಡಿದ ಜನರ ಗೋಳನ್ನು ಕೇಳಿದವರಲ್ಲ. ಒಮ್ಮೆ ಕಾಂಗ್ರೆಸ್, ಒಮ್ಮೆ ಜನತಾ, ಒಮ್ಮೆ ಸ್ವತಂತ್ರ ಹೀಗೆ ಪ್ರತಿಯೊಂದು ಚುನಾವಣೆಯಲ್ಲಿ ಒಂದೊಂದು ಪಕ್ಷದಿಂದ ಟಿಕೆಟ್ ಪಡೆದು ಜಯಗಳಿಸುತ್ತಾ ತಾಲೂಕಿನ ಜನತೆಯನ್ನು ವಂಚಿಸುತ್ತಾ ಬಂದಿದ್ದಾರೆ. ಕಾಂಗ್ರೆಸ್ಸಿನ ಆಂತರಿಕ ಗುಂಪುಗಾರಿಕೆಯಿಂದಾಗಿ ಶ್ಯಾಮನೂರ ಶಿವಶಂಕ್ರಪ್ಪನವರನ್ನು ಸೋಲಿಸಿ ಆಯ್ಕೆಯಾದ ಬಿ.ಜೆ.ಪಿ.ಯ ಜಿ. ಮಲ್ಲಿಕಾರ್ಜುನಪ್ಪ ಅವರಿಗೆ ವಯಸ್ಸಾಗಿ ರಾಜಕೀಯ ಆಸಕ್ತಿ ಉಳಿದಿಲ್ಲ. ಅವರು ತನಗೆ ಮತ ನೀಡಿದವರನ್ನು ಮರೆತು ಅದೆಷ್ಟೋ ಕಾಲವಾಗಿದೆ. ಹೀಗೆ ಗಂಡಹೆಂಡರ ಜಗಳದಲ್ಲಿ ಕೂಸು ಬಡವಾಯ್ತು ಎನ್ನುವಂತಾಗಿದೆ ಜಗಳೂರು ತಾಲ್ಲೂಕಿನ ಪರಿಸ್ಥಿತಿ.

ಸಂಘಟಿತರಾಗಲು ಕೂಲಿಕಾರರ ನಿರ್ಧಾರ

ಆತಂಕ, ಅನಿಶ್ಚತತೆಗಳ ನಡುವೆ ಬದುಕು ಸಾಗಿಸುತ್ತಿದ್ದ ಜಗಳೂರು, ಗೊಲ್ಲರಹಟ್ಟಿ ಮತ್ತು ಸುತ್ತಲಿನ ಕೂಲಿಕಾರರು ಆಕಸ್ಮಿಕವಾಗಿ ಪತ್ರಕರ್ತರ ಮುಂದೆ ತಮ್ಮ ಗೋಳನ್ನು ತೋಡಿಕೊಂಡಾಗ, ಕೂಲಿಕಾರರ ಕರುಣಾಜನಕ ಪರಿಸ್ಥಿತಿ ಚಿತ್ರಸಹಿತವಾಗಿರಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇದೇ ಸಮಯಕ್ಕೆ ಸರಿಯಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಪ್ರದೇಶ ಸಮಿತಿಯು ಜಗಳೂರು ತಾಲ್ಲೂಕಿಗೆ ತಕ್ಷಣ ಬರಪರಿಹಾರ ಕಾಮಗಾರಿಯನ್ನು ಮಂಜೂರು ಮಾಡಬೇಕೆಂದು ಹೇಳಿಕೆಯೊಂದನ್ನು ಹೊರಡಿಸಿ ಸರ್ಕಾರವನ್ನು ಒತ್ತಾಯಿಸಿತು. ಇದರಿಂದಾಗಿ ಆಡಳಿತ ವ್ಯವಸ್ಥೆಯ ಕಣ್ಣು ತೆರೆಯುವಂತಾಯಿತು. ಬರಪರಿಹಾರ ಕಾಮಗಾರಿಗಳಿಗಾಗಿ ತಾಲ್ಲೂಕಿಗೆ 60 ಲಕ್ಷ ರೂ. ಅನುದಾನ ಮಂಜೂರಾಗಿದೆ ಎಂದು ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿ ಡಿ.ಬಾಲಸ್ವಾಮಿ ಹೇಳಿಕೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಮೊತ್ತವನ್ನು ತಾಲೂಕಿನ 14 ಕೆರೆಗಳ ದುರಸ್ತಿ ಮತ್ತು 47 ಗೋಕಟ್ಟೆಗಳ ನಿರ್ಮಾಣಕ್ಕೆ ಬಳಸಲಾಗುವುದು ಎಂದು ಹೇಳಲಾಗಿದೆ. ಕೂಲಿಕಾರರಿಗೆ ಶೇ. 75 ರಷ್ಟು ಆಹಾರ ದಾನ್ಯ ಮತ್ತು ಶೇ.25 ರಷ್ಟು ನಗದು ಹಣವನ್ನು ನೀಡಲಾಗುವುದು ಎಂದೂ ಹೇಳಲಾಗಿದೆ.

ಜಗಳೂರು, ಗೊಲ್ಲರಹಟ್ಟಿ ಕೂಲಿಕಾರರು ಬೆಂಗಳೂರಿನಿಂದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರೊಂದಿಗೆ ಸಮಾಲೋಚಿಸಿ, ಕೈಗೆ ಬಂದ ತುತ್ತು ಬಾಯಿಗೆ ಬರುವಂತಾಗಬೇಕಾದರೆ ತಮ್ಮ ಸಂಘಟಿತ ಪ್ರಯತ್ನ ಮುಂದುವರೆಯಬೇಕಾಗಿದೆ ಎಂದು ಅವರು ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದಾರೆ. ತಾಲ್ಲೂಕಿನ ಬಡಕೂಲಿಕಾರರಿಗೆ ಭೂಮಿ, ಸರಿಯಾದ ಕೂಲಿ, ವಾಸಕ್ಕೆ ಮನೆ, ರೇಷನ್‌ಕಾರ್ಡು, ವೃದ್ಧಾಪ್ಯ ವೇತನ, ಮೊದಲಾದ ಸವಲತ್ತುಗಳನ್ನು ಪಡೆಯಲು ಕೂಲಿಕಾರರ ಸಂಘಗಳನ್ನು ಗ್ರಾಮ ಗ್ರಾಮಗಳಲ್ಲಿ ಕಟ್ಟುವುದೆಂದು ನಿರ್ಧರಿಸಿದ್ದಾರೆ. ಈಗ ಘೋಷಿಸಲಾದ ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಯಂತ್ರಗಳ ಬಳಕೆಯನ್ನು ವಿರೋಧಿಸಲು, ಆಯಾ ಗ್ರಾಮಗಳ ಕೂಲಿಕಾರರನ್ನು ಕಾಮಗಾರಿಗಳಲ್ಲಿ ತೊಡಗಿಸುವಂತೆ ಒತ್ತಾಯಿಸಲು ಹಾಗೂ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ನಡೆಯದಂತೆ ಎಚ್ಚರಿಕೆ ವಹಿಸಲು ತೀರ್ಮಾನಿಸಲಾಗಿದೆ. ಗ್ರಾಮ ಗ್ರಾಮಗಳಲ್ಲಿ ಕೂಲಿಕಾರ ಪುರುಷರನ್ನು ಮತ್ತು ಮಹಿಳೆಯರನ್ನು ಕೂಲಿಕಾರರ ಸಂಘಕ್ಕೆ ಸದಸ್ಯರಾಗಿ ಸೇರಿಸಿ ಗ್ರಾಮ ಸಮಿತಿಗಳನ್ನು ರಚಿಸಲು ನಿರ್ಧಾರ ಮಾಡಲಾಗಿದೆ.


- ಡಿ.ಶ್ರೀನಿವಾಸ

ಇತಿಹಾಸದ ಪುಟಗಳಿಂದ

ಪೀಟರ್ಸ್‌ಬರ್ಗ್‌ಗೆ 300ನೇ ಹುಟ್ಟು ಹಬ್ಬ

ಪೀಟರ್ಸ್‌ಬರ್ಗ್ ರಶ್ಯದ ಉತ್ತರದ ಒಂದು ನಗರ. ನಗರಕ್ಕೂ ಹುಟ್ಟುಹಬ್ಬ ಮಾಡ್ತಾರಾ ಅಂದಿರಾ? ಹೌದು. ಯಾಕೆಂದರೆ ಇದು ಅಂತಿಂಥ ನಗರವಲ್ಲ. ರಷ್ಯದ ಝಾರ್‌ಗಳಲ್ಲೇ ಅತ್ಯಂತ ಪ್ರಸಿದ್ಧವಾದ ಮತ್ತು ಜನಪ್ರಿಯ 'ಪೀಟರ್ ದ ಗ್ರೇಟ್' ಸ್ಥಾಪಿಸಿದ ಪಟ್ಟಣ. ರಷ್ಯದ ಪ್ರಸಿದ್ಧ ಕವಿ ಅಲೆಕ್ಸಾಂಡರ್ ಪುಷ್ಕಿನ್ ಇದನ್ನು 'ಯುರೋಪಿಗೆ ರಷ್ಯದ ಕಿಂಡಿ' ಎಂದು ಕರೆದಿದ್ದ. ರಷ್ಯಾದ ಉತ್ತರದ ರಾಜಧಾನಿ', ಎರಡನೇ ಅನಧಿಕೃತ ರಾಜಧಾನಿ ಎಂದೆಲ್ಲಾ ಈ ನಗರವನ್ನು ಕರೆಯಲಾಗಿದೆ.

'ಪೀಟರ್ ದ ಗ್ರೇಟ್' ಎಂದು ಕರೆಯಲ್ಪಡುವ ದೊರೆ ಪೀಟರ್‌ಗೆ ರಷ್ಯಾದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವಿದೆ. ರಷ್ಯಾದ (ಜಗತ್ತಿನ ಸಹ) ಪ್ರಗತಿಪರ ದೊರೆಗಳಲ್ಲೊಬ್ಬ ಪೀಟರ್ ರಷ್ಯವನ್ನು ಆಧುನಿಕರಿಸಿದ, ಹೊರ ಜಗತ್ತಿಗೆ ತೆರೆದ, ಜಗತ್ತಿನ ಬಲಾಢ್ಯ ದೇಶಗಳಲ್ಲೊಂದಾಗಿ ಮಾಡಿದ ಕೀರ್ತಿ ಆತನಿಗೆ ಸಲ್ಲುತ್ತದೆ. ಪಾಳೆಯಗಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯತ್ತ ರಷ್ಯಾದ ವಿಕಾಸದ ಪ್ರಕ್ರಿಯೆಯಲ್ಲಿ ಪೀಟರ್ ಪ್ರಮುಖ ಪಾತ್ರ ವಹಿಸಿದ್ದಾನೆ. ಒಂದು ರೀತಿಯಲ್ಲಿ ರಶ್ಯನ್ ಬಂಡವಾಳಶಾಹಿಯ 300ನೇ ಹುಟ್ಟುಹಬ್ಬ ಕೂಡಾ ಇದು. (ಹೌದು ಈಗ ರಷ್ಯಾದಲ್ಲಿರುವುದು ಬಂಡವಾಳಶಾಹಿ. 80 ವರ್ಷಗಳ ಸಮಾಜವಾದಿ ವ್ಯವಸ್ಥೆ ನಂತರ ರಷ್ಯಾ ಬಂಡವಾಳಶಾಹಿಗೆ ಮರಳಿದೆ) ರಷ್ಯಾದಲ್ಲಿ 'ಪೀಟರ್ ದ ಗ್ರೇಟ್' ನ ಪಾತ್ರದ ಬಗ್ಗೆ ಉತ್ತಮ ಚಿತ್ರಣ 'ರಷ್ಯನ್ ಇತಿಹಾಸದಿಂದ ಆಯ್ದ ಕಥೆಗಳು' ಎಂಬ ಪುಸ್ತಕದಲ್ಲಿ ಬರುತ್ತವೆ. ಪೀಟರ್ ಬಗ್ಗೆ ಅಲ್ಲಿ 12 ಆಯ್ದ ಕಥೆಗಳಿವೆ. ರಷ್ಯಾದಲ್ಲಿ ಸಾಕ್ಷರತೆ ಹರಡುವ ಪ್ರಯತ್ನ, ರಷ್ಯಾದ ಮೊದಲ ಪತ್ರಿಕೆ ತಂದದ್ದು, ಫಿರಂಗಿಗಳಿಗೆ ಲೋಹ ಕಡಿಮೆಯಾಗಿದ್ದಕ್ಕೆ ಚರ್ಚ್ ಗಂಟೆಗಳನ್ನು ಕರಗಿಸಲು ಆಜ್ಞೆ ಮಾಡಿದ್ದು, ದೊರೆ ಸ್ವತಃ 'ಅಂಪ್ರೆಂಟಿಸ್ ತರಹ ಬೈಸಿಕೊಂಡು' ಕಮ್ಮಾರನ ಹತ್ತಿರ ಲೋಹವಿದ್ಯೆ ಕಲಿತದ್ದು, ಗಣಿ - ಕೈಗಾರಿಕೆಗಳನ್ನು ಸ್ಥಾಪಿಸಿದ್ದು, ಬೋಯರ್ ಎಂಬ ಜನಾಂಗದವರ ಗಡ್ಡ ಬೋಳಿಸಿದ್ದು(!), ಬೋಯರ್ ಮಕ್ಕಳು ಯುರೋಪಿಗೆ ಉನ್ನತ ಅಧ್ಯಯನಕ್ಕೆ 'ಬಲಾತ್ಕಾರವಾಗಿ' ಕಳಿಸಿದ್ದು - ಹೀಗೆ ಹಲವು ಆಸಕ್ತಿಕಾರಕ ಕಥೆಗಳಿವೆ. ಎಲ್ಲರೂ ಓದಲೇ ಬೇಕಾದ ಕಥೆಗಳು ಮತ್ತು ಪುಸ್ತಕ ಇದು.



ಒಂದು ಕಥೆ 'ಕಡಲ ಮೇಲಿನ ನಗರ' ಪೀಟರ್ಸ್‌ಬರ್ಗ್ ನಗರದ ಹುಟ್ಟಿನ ಬಗ್ಗೆ ಹೇಳುತ್ತದೆ. ನಾರ್ವೆ ಎಂಬ ಸ್ವೀಡನ್ ವಶದಲ್ಲಿರುವ ನಗರದ ಮೇಲೆ ರಷ್ಯನ್ ಆಕ್ರಮಣದ ಸಂದರ್ಭದ ಕಥೆ. ಈ ನಗರ ಸ್ಥಾಪಿಸುವಲ್ಲಿ ಪೀಟರ್ ದೊರೆಯ ದೂರದರ್ಶಿತ್ವ, ರಷ್ಯನ್ ಸೈನಿಕರು-ರೈತರು-ಕುಶಲಕರ್ಮಿಗಳು ಮಾಡಬೇಕಾದ ತ್ಯಾಗ - ಎಲ್ಲವನ್ನು ಚುಟುಕಾಗಿ ಆಸಕ್ತಿಕಾರಕವಾಗಿ ಹೇಳುತ್ತದೆ ಈ ಕಥೆ.

ಪೀಟರ್ಸ್‌ಬರ್ಗ್ 300 ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಜಗತ್ತಿನ ಗಣ್ಯರೆಲ್ಲ ಅಲ್ಲಿ ಸೇರಿದ್ದರು. ಭಾರತದ ಪ್ರಧಾನಿ ವಾಜಪೇಯಿ ಸಹ ಈ ಪಾರ್ಟಿಗೆ ಹೋಗಿದ್ದರು. ದೊರೆ ಪೀಟರ್ ಈಗಿನ ಅಧ್ಯಕ್ಷ ಪುಟಿನ್‌ಗೆ ಹೀರೋ ಅಂತೆ. ಆತನ ಥರ ರಷ್ಯಾಕ್ಕೆ ಪುನಃ ಜಗತ್ತಿನಲ್ಲಿ ಪ್ರಮುಖ ಸ್ಥಾನ ಕೊಡಿಸಬೇಕು ಅಂತ ಪುಟಿನ್ ಆಸೆಯಂತೆ. ಪುನಃ ಬಂಡವಾಳಶಾಹಿ ವ್ಯವಸ್ಥೆ ಸಹ ಸ್ಥಾಪಿಸುವ ಕೆಲಸದಲ್ಲಂತೂ ಆತ ತೊಡಗಿದ್ದಾನೆ!



ಜಿ.ಎಸ್.ಮಣಿ

ಮೋಸ ತಡೆಯಲು ಕಂಪನಿ ಕಾಯಿದೆಗೆ ತಿದ್ದುಪಡಿ?

ಕಂಪನಿ ಕಾಯಿದೆಗಳಲ್ಲಿ ಹಲವು ಕಳ್ಳಗಿಂಡಿಗಳಿರುತ್ತವೆ. ಈ ಕಳ್ಳಗಿಂಡಿಗಳ ಮೂಲಕ ಬಂಡವಾಳಿಗರು ಸಾಮಾನ್ಯ ಹೂಡಿಕೆದಾರರಿಗೆ ಮೋಸ ಮಾಡುತ್ತಾರೆ.

ಉದಾರೀಕರಣ ಪ್ರಾರಂಭವಾದ ಹೊಸತರಲ್ಲಿ ನೂರಾರು ಕಂಪನಿಗಳಿದ್ದು ಜನರಿಂದ ಶೇರಿನ ರೂಪದಲ್ಲಿ ಹಣ ಸಂಗ್ರಹಿಸಿ ಆಮೇಲೆ ಮಾಯವಾಗಿಬಿಟ್ಟವು.

ಈ ಮೋಸಗಳನ್ನು ಗಮನದಲ್ಲಿಟ್ಟು ಕೊಂಡು ಕಂಪನಿ ಕಾಯಿದೆಯಲ್ಲಿ ಸರ್ಕಾರ ತಿದ್ದುಪಡಿ ತರುವ ವಿಚಾರದಲ್ಲಿದೆಯಂತೆ. ಹೂಡಿಕೆದಾರರಿಗೆ ಇಂತಹ ಮೋಸವಾದಾಗ ಸಂಸ್ಥಾಪಕರ ಖಾಸಗಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ತಿದ್ದುಪಡಿ ಅದು.

ಇಂತಹ ತಿದ್ದುಪಡಿ ತಂದರೆ ಒಳ್ಳೆಯದೇ ಆದರೂ ಇದು ಬಂಡವಾಳಶಾಹಿ ನ್ಯಾಯ ಈ ಕಾಯಿದೆ ಬಂದರೆ ಈ ಸಂಸ್ಥಾಪಕರು ತಮ್ಮ ಹೆಸರಿನಲ್ಲಿ ಆಸ್ತಿಗಳನ್ನಿಟ್ಟುಕೊಳ್ಳದೆ ತಮ್ಮ ಆಪ್ತೇಷ್ಟರ ಹೆಸರುಗಳಲ್ಲಿ ಅದನ್ನು ಇಟ್ಟುಕೊಳ್ಳುತ್ತಾರೆ. ಬೇನಾಮಿ ಆಸ್ತಿಗಳನ್ನೂ ಹೊಂದಿರುತ್ತಾರೆ. ಇಂತಹ ಕಾಯಿದೆಗಳನ್ನು ಜಾರಿಗೆ ತರುವುದೂ ಬಂಡವಾಳಶಾಹಿ ವ್ಯವಸ್ಥೆ ಆಗಿರುವುದರಿಂದ ಅದು ಪರಿಣಾಮಕಾರಿಯಾಗಿರುತ್ತದೆಯೋ ಸಂದೇಹದ ವಿಷಯ.

ಬ್ಯಾಂಕುಗಳ ಬಂಡವಾಳ ವಾಪಸ್ಸು ವಿವಾದ

ಹಲವು ರಾಷ್ಟ್ರೀಕೃತ ಬ್ಯಾಂಕುಗಳು ಸರ್ಕಾರೀ ಹೂಡಿಕೆಯ ಒಂದು ಭಾಗವನ್ನು ವಾಪಸ್ಸು ಮಾಡುವ ಮಾತನಾಡಿದ್ದಾರೆ. ಬ್ಯಾಂಕುಗಳಿಗೆ ಹೆಚ್ಚಿನ ಬಂಡವಾಳ ಬೇಕಾದರೆ ಸರ್ಕಾರ ಅದನ್ನು ಪೂರೈಸಬೇಕು. ಆದರೆ ಸರ್ಕಾರ ತಾನು ಹೆಚ್ಚಿನ ಬಂಡವಾಳ ನೀಡಲು ತಯಾರಿಲ್ಲ ಎಂದು ಹೇಳಿಬಿಟ್ಟಿದೆ.

ಈ ಹಿನ್ನೆಲೆಯಲ್ಲಿ ಹಲವು ಬ್ಯಾಂಕುಗಳು ಸರ್ಕಾರದ ಬಂಡವಾಳವನ್ನು ವಾಪಸ್ಸು ಮಾಡುತ್ತೇವೆ ಎಂದು ಹೇಳುತ್ತಿವೆ. ಇವರಿಗೇಕೆ ಆತುರ ಬಂಡವಾಳ ವಾಪಸ್ಸು ಮಾಡಲು? ಹೀಗೆ ವಾಪಸ್ಸು ಮಾಡಿದ ಬಂಡವಾಳಕ್ಕೆ ಬದಲಾಗಿ ಮಾರುಕಟ್ಟೆಯಿಂದ ಅವರು ಹೆಚ್ಚಿನ ಬಂಡವಾಳ ಎತ್ತಬಹುದು. ಬಂಡವಾಳ ವಾಪಸ್ಸು ಮಾಡುವುದಾದಲ್ಲಿ ಯಾವ ದರದಲ್ಲಿ ಮಾಡಬೇಕೆಂಬುದೇ ವಿವಾದ ಹುಟ್ಟಿಸಿರುವುದು. ಮುಖಬೆಲೆಯಷ್ಟನ್ನೇ ಹಿಂದಿರುಗಿಸಬೇಕೊ ಅಥವಾ ಇವತ್ತಿನ ಶೇರುಬೆಲೆಯ ದರದಲ್ಲೋ? ಸರ್ಕಾರಿ ವಕ್ತಾರರು ಇವತ್ತಿನ ಶೇರು ಬೆಲೆಯ ದರದಲ್ಲಿ ಎಂದರು. ಹಾಗಾದರೆ ಬಂಡವಾಳ ವಾಪಸ್ಸು ಮಾಡುವ ಕೆಲಸ ಸದ್ಯಕ್ಕೆ ಇಲ್ಲ ಎಂದವು ಬ್ಯಾಂಕುಗಳು.

ಹೀಗಾದರೂ ಖಾಸಗೀಕರಣ ಪ್ರಕ್ರಿಯೆ ಮುಂದಕ್ಕೆ ಹೋದರೆ ದೇಶಕ್ಕೆ ಒಳ್ಳೆಯದಲ್ಲವೇ?

ದೊಡ್ಡಣ್ಣನ ಮನೆಯಲ್ಲಿ ದೊಡ್ಡ ಬಿಕ್ಕಟ್ಟು?

ಯಾರೀ ದೊಡ್ಡಣ್ಣ? ಇವತ್ತು ಜಗತ್ತಿಗೆಲ್ಲ ತಾನು ದೊಡ್ಡಣ್ಣನೆಂದು ಗೋಳಿಕ್ಕೊಳ್ಳುತ್ತಿರುವುದು-ಅದಕ್ಕಿಂತಾ ಹೆಚ್ಚಾಗಿ ನಡೆದುಕೊಳ್ಳುತ್ತಿರುವುದು ಅಮೆರಿಕ,ಯ ಅಮೆರಿಕ ಆರ್ಥಿಕದಲ್ಲೇ ದೊಡ್ಡ ಬಿಕ್ಕಟ್ಟೆ ಹಾಗಾದರೆ? ಹೌದು ಬಂಡವಾಳಶಾಹಿ ಆರ್ಥಿಕವೆಂದರೇ ಬಿಕ್ಕಟ್ಟಿನ ಆರ್ಥಿಕ. ಸಾಮ್ರಾಜ್ಯಶಾಹಿ ದೊಡ್ಡ ಬಿಕ್ಕಟ್ಟುಗಳು ನೆಲೆಯಾಗಿರಲೇ ಬೇಕಲ್ಲವೇ?



ಹತ್ತಿಕ್ಕಲ್ಪಟ್ಟಿರುವ ಒಂದು ಅಧ್ಯಯನದ ವರದಿಯ ಪ್ರಕಾರ ಅಮೇರಿಕದ ಮುಂಬರುವ ಬಜೆಟ್ ಖೋತಾ 44,200 ಶತಕೋಟಿ ಡಾಲರುಗಳಷ್ಟು ಎಂದರೆ ಅಮೆರಿಕಾದ ನಾಲ್ಕು ವರ್ಷಗಳ ಆರ್ಥಿಕ ಉತ್ಪಾದನೆಯಷ್ಟು.

ಅಮೆರಿಕದ ಖಜಾನೆ ಕಾರ್ಯದರ್ಶಿ ಪಾಲ್ ಜ ನೀಲ್ ಈ ಅಧ್ಯಯನಕ್ಕೆ ಆದೇಶ ನೀಡಿದ್ದರೂ ಇಂತಹ ಕೊರತೆ ಇದ್ದರೆ ಅದರ ಪರಿಣಾಮ ಏನಾಗುತ್ತದೆ? ಅಮೇರಿಕದಲ್ಲಿ ಆರೋಗ್ಯ ಮತ್ತು ನಿವೃತ್ತಿ ಯೋಜನೆ ಎರಡೂ ಇರುವುದಿಲ್ಲ. ಅಥವಾ ಈ ಕೊರತೆಯನ್ನು ಸರಿದೂಗಿಸಲು ಅಮೇರಿಕ ಯದ್ವಾತದ್ವಾ ತೆರಿಗೆಗಳನ್ನು ಹೇರುತ್ತದೆ. ಅಥವಾ ಈ ಎರಡೂ ಕ್ರಮಗಳೂ ಇರುತ್ತವೆ. ಇದಲ್ಲದೆ ಶ್ವೇತ ಭವನ ದೊಡ್ಡ ಪ್ರಮಾಣದ ತೆರಿಗೆ ಕಡಿತಕ್ಕೂ ಆಗಲೇ ಪ್ರಚಾರವನ್ನು ಪ್ರಾರಂಭಿಸಿದೆ.

ಈ ಅಧ್ಯಯನದ ತಂಡದಲ್ಲಿ ಕೆಂಟ್ ಸ್ಮೆಟ್ಟರ್ಸ್ ಮತ್ತು ಸಮಾಲೋಚನಾ ಕಾರರಾದ ಭಾರತೀಯ ಮೂಲದ ಜಗದೀಶ ಗೋಖಲೆ ಅವರೂ ಇದ್ದರು.

ಬುಶ್ ಸರ್ಕಾರ ಈ ವರದಿಯನ್ನು ಹತ್ತಿಕ್ಕಿರುವು ದಲ್ಲದೆ ಖಜಾನೆ ಕಾರ್ಯದರ್ಶಿ ಯನ್ನು ಅವರ ಸ್ಥಾನ ಖಾಲಿ ಮಾಡುವಂತೆ ಮಾಡಿತು.

ಅಮೆರಿಕದ ಕೇಂದ್ರ ಬ್ಯಾಂಕಾದ (ನಮ್ಮ ರೀಸರ್ವ್ ಬ್ಯಾಂಕಿನಂತೆ) ಫೆಡರಲ್ ರಿಸರ್ವ್‌ನ ಅಧ್ಯಕ್ಷ ಲನ್ ಗ್ರೀನ್‌ಸ್ಪಾನ್ ಅವರು "ಮುಂಬರುವ ದಿನಗಳಲ್ಲಿ ಫೆಡರಲ್ ರಿಸರ್ವ್ ಎದುರಿಸಬಹುದಾದ ಹಣಕಾಸಿನ ಸವಾಲುಗಳ ಬಗ್ಗೆ ವಾಷಿಂಗ್‌ಟನ್ ಕಿವುಡಾಗಿದೆ" ಎಂದು ಪ್ರಲಾಪಿಸಿದ್ದಾರೆ.

ಬುಶ್ ಸರ್ಕಾರ ಈ ಕೊರತೆಯನ್ನು ಮುಂದಿನ ವರ್ಷಗಳಿಗೆ ದಾಟಿಸಿದೆ. ಆದರೆ ಮುಂಬರುವ ವರ್ಷಗಳಲ್ಲಿ?

ಬಹುಶಃ ದೊಡ್ಡ ದೊಡ್ಡ ಯುದ್ಧಗಳ ಮೂಲಕ ಜಗತ್ತಿನ ಬಡದೇಶಗಳಿಗೆ ತನ್ನ ಈ ಕೊರತೆಯನ್ನು ರಫ್ತ ಮಾಡಿದರೂ ಮಾಡೀತು. ಎಷ್ಟೆಂದರೂ ಜಗತ್ತಿನ ದೊಡ್ಡಣ್ಣನಲ್ಲವೆ?

ಸರ್ಕಾರಿ ವಲಯದ ಉದ್ದಿಮೆಗಳಿಗೆ ಕುತ್ತು - ಸಾರ್ವಜನಿಕ ಮಾಹಿತಿ ಸ್ವಾತಂತ್ರ್ಯ ಕಾಯಿದೆ

ಅಮೇರಿಕದ ಸಾರ್ವಜನಿಕ ಮಾಹಿತಿ ಸ್ವಾತಂತ್ರ್ಯ ಕಾಯಿದೆ (1966)ಯ ತೆರನಾದ ಒಂದು ಕಾಯಿದೆಯನ್ನು ಕೇಂದ್ರ ಎನ್‌ಡಿಎ ಸರ್ಕಾರ ಭಾರತದಲ್ಲೂ ತರಲು ತಯಾರಿ ನಡೆಸಿದೆಯಂತೆ.

ಇದು ಸರ್ಕಾರಿ ವಲಯದ ಉದ್ದಿಮೆಗಳು ಅದರಲ್ಲೂ ಹೆಚ್ಚಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅಲ್ಲೋಲ ಕಲ್ಲೋಲ ಎಬ್ಬಿಸಲಿದೆಯಂತೆ. ಈ ಕಾಯಿದೆಯ ಪ್ರಕಾರ ಯಾರು ಬೇಕಾದರೂ ಬ್ಯಾಂಕುಗಳ ವಿಧಿವಿಧಾನಗಳು ಖಾತೆಗಳು ಇತ್ಯಾದಿಗಳ ಬಗ್ಗೆ ಮುಕ್ತವಾಗಿ ಮಾಹಿತಿ ಪಡೆಯ ಬಹುದು. ಇಂತಹ ಮಾಹಿತಿ ಪಡೆದವರು ತಮ್ಮ ಲಾಭಕ್ಕಾಗಿ ಈ ಮಾಹಿತಿಯನ್ನು ಉಪಯೋಗಿಸ ಬಹುದು. ಬ್ಯಾಂಕುಗಳಲ್ಲಿ ದೊಡ್ಡ ದೊಡ್ಡ ಹಗರಣ ಗಳಾಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಖಾಸಗಿ ಯವರು ಬ್ಯಾಂಕುಗಳಲ್ಲಿದ್ದ ಮಾಹಿತಿಗಳನ್ನು ಬಳಸಿ ತಮ್ಮ ವ್ಯವಹಾರಗಳನ್ನು ಕುದುರಿಸಿಕೊಳ್ಳಬಹುದು.

ಬ್ಯಾಂಕಿಂಗ್ ವಲಯದ ಹಿರಿಯರು ಈ ವಿಷಯದಲ್ಲಿ ಕಳವಳಕ್ಕೀಡಾಗಿದ್ದಾರೆ. ಯಾಕೆಂದರೆ ಯಾರು ಬೇಕಾದರೂ ತಮ್ಮ ಲಾಭಕ್ಕಾಗಿ ಈ ಕಾಯಿದೆಯನ್ನು ಹೇಗೆ ಬೇಕಾದರೂ ಅರ್ಥೈಸಬಹುದಂತೆ.

ಕೆಲವು ಬ್ಯಾಂಕುಗಳ ಶೇರುಬೆಲೆ

ಬ್ಯಾಂಕಿನ ಹೆಸರು	ಸರ್ಕಾರಿ ಶೇರು ಬಂಡವಾಳ ಶೇಕಡಾ	ಶೇರಿನ ಮುಖ ಬೆಲೆಗಳಲ್ಲಿ ರೂ.ಗಳಲ್ಲಿ	ಮಾರುಕಟ್ಟೆ ಬೆಲೆ (ಜೂನ್ 3ರಂದು) ರೂ.ಗಳಲ್ಲಿ)
ಅಲಹಾಬಾದ್ ಬ್ಯಾಂಕ್	71.16	10	19.40
ಆಂಧ್ರ ಬ್ಯಾಂಕ್	62.50	10	35.30
ಬ್ಯಾಂಕ್ ಆಫ್ ಬರೋಡಾ	66.22	85	110.20
ಬ್ಯಾಂಕ್ ಆಫ್ ಇಂಡಿಯಾ	69.30	45	51.65
ಕೆನರಾ ಬ್ಯಾಂಕ್	73.17	35	103.80
ಕಾರ್ಪೊರೇಷನ್ ಬ್ಯಾಂಕ್	57.17	80	159.45
ದೇನಾ ಬ್ಯಾಂಕ್	70.99	30	18.55
ಇಂಡಿಯನ್ ಓವರ್‌ಸೀಸ್ ಬ್ಯಾಂಕ್	75.00	10	26.20
ಓರಿಯಂಟಲ್ ಬ್ಯಾಂಕ್	66.48	60	127.35
ಪಂಜಾಬ್ ನ್ಯಾಷನಲ್ ಬ್ಯಾಂಕ್	80.00	31	154.00
ಸಿಂಡಿಕೇಟ್ ಬ್ಯಾಂಕ್	75.52	10	25.15
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	60.85	16	39.55
ವಿಜಯಾ ಬ್ಯಾಂಕ್	70.02	10	23.05

ನೀರು, ನದಿ ಮಾರಾಟ ....

ಪುಟ 7 ರಿಂದ

ಈಚೆಗೆ ನೀರಿನ ಪೂರೈಕೆಯನ್ನು ಪಡಿತರ ವ್ಯವಸ್ಥೆಗೆ ಒಳಪಡಿಸಲಾಗುವುದು ಎಂದರು. ಅವರು ಬಳಸಿಕೊಂಡಿದ್ದು ಬರಗಾಲದ ಸಂದರ್ಭವನ್ನು. ರಾಜ್ಯದಲ್ಲಿ ಸತತವಾಗಿ ಈ ವರುಷವೂ ಮಳೆಯಿಲ್ಲವಾದರೆ ನೀರಿನ ತೀವ್ರ ಅಭಾವ ತಲೆದೋರಿದ್ದು ಅದನ್ನು ಸೂಕ್ತವಾಗಿ ನಿರ್ವಹಿಸಲು ಇಂತಹ ಕ್ರಮ ಅನಿವಾರ್ಯವೆಂಬಂತೆ ಬಿಂಬಿಸಿದರು. ಆದರೆ ಅದು ವಿಶ್ವಬ್ಯಾಂಕ್-ಏಶಿಯನ್ ಅಭಿವೃದ್ಧಿ ಬ್ಯಾಂಕುಗಳೊಂದಿಗೆ ಮಾಡಿಕೊಂಡ ಶರತ್ತಿನ ಜಾರಿಯಷ್ಟೇ ಆಗಿತ್ತು. ಮೇಲ್‌ಮಟ್ಟದ ಹಾಗೂ ಅಂತರ್ಜಲ (ಕೊಳವೆ ಬಾವಿ ಇತ್ಯಾದಿ) ಎಲ್ಲಾ ಬಗೆಯ ನೀರನ್ನು ಸರ್ಕಾರವೇ ಮೊದಲು ನಿಯಂತ್ರಣಕ್ಕೆ ತೆಗೆದುಕೊಂಡು, ಅದಕ್ಕೊಂದು ಸಾಂಸ್ಥಿಕ ಸ್ವರೂಪವನ್ನು ಪ್ರಕಟಿಸುವುದು, ನಂತರ ಖಾಸಗೀಯವರ ಸಹಭಾಗಿತ್ವದ ಹೆಸರಿನಲ್ಲಿ ದೈತ್ಯ ಬ.ಕ.ಗಳಿಗೆ ಪರಭಾರೆ ಮಾಡುವುದು. ಈಗಾಗಲೇ ಬೆಂಗಳೂರಿನಲ್ಲಿ ಜಪಾನಿನ ಕಂಪನಿಯೊಂದು ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ಆರಂಭಿಸಿದೆ. ಆ ನೀರನ್ನು ಕೈಗಾರಿಕೆಗಳಿಗಾಗಿ ನೀಡಲಾಗುವುದಂತೆ. ಕೈಗಾರಿಕೆಗಳಿಗೆ ನೀರು - ಕಂಪನಿಗೆ ಲಾಭ. ಸರ್ಕಾರಕ್ಕೆ ಕಮಿಷನ್ ಸಿಗುವುದೇನೋ ನಿಜ, ಆದರೆ ಅದು ಅಲ್ಲಿಗೆ ನಿಲ್ಲುವುದಿಲ್ಲ. ಅದರ ಹೊರೆ ಜನಸಾಮಾನ್ಯರ ಮೇಲೆ ಇಂತಹ ಕಂಪನಿಗಳು ನದಿ, ಅಂತರ್ಜಲ, ಕೊಳ್ಳಗಳನ್ನೇ ಆಕ್ರಮಿಸಿಕೊಳ್ಳು ವುದರಿಂದ ಜನಸಾಮಾನ್ಯರ ಪಾಡೇನಾದೀತು?

ಈಗಾಗಲೇ ಭಾರತದಲ್ಲಿ ಕುಡಿಯುವ ಶುದ್ಧ ನೀರಿನ ಅಭಾವ ಎದುರಿಸುತ್ತಿರುವವರ ಜನರ ಸಂಖ್ಯೆ 20 ಕೋಟಿಗೂ ಮೀರಿದೆ. ಶೇಕಡಾ 80 ರಷ್ಟು ಜನ ಬಳಸುವ ನೀರು ಕಲುಷಿತವಾಗಿದೆ. 5 ಕೋಟಿ ಜನ ಹೊಟ್ಟೆಗಿಲ್ಲದೇ ನರಳುತ್ತಿದ್ದಾರೆ. ಈಗಾಗಲೇ 1942 ರ ಕುಖ್ಯಾತ ಬಂಗಾಳ ಬರಗಾಲದಲ್ಲಿ ಸತ್ತಿದ್ದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಹಸಿವಿನಿಂದ ಈಗಲೂ ಸಾಯುತ್ತಿದ್ದಾರೆ.

ನೀರು ಜನರ ಸ್ವತ್ತು, ಉಳಿಸಿಕೊಳ್ಳಲೇಬೇಕು

ಕರ್ನಾಟಕವೂ ತೀವ್ರವಾಗಿ ಬರಗಾರವನ್ನು ಎದುರಿಸುತ್ತಿದೆ. ಜನ-ದನಕರುಗಳ ಕುಡಿವ ನೀರಿಗೂ ಹಾಹಾಕಾರವಿದೆ. ಅನೇಕ ಕಡೆ ಅಂತರ್ಜಲವೂ ಬತ್ತಿ ಪರಿತಪಿಸುತ್ತಿರುವ ದೃಶ್ಯ ನಿತ್ಯ ಯಾತನೆ. ಕೃಷಿಗೂ ನೀರಿಲ್ಲ, ಕೃಷಿಯೂ ದಿವಾಳಿಯ ಾಗುತ್ತಿರುವಾಗ, ಎಲ್ಲಾ ರಂಗಗಳಲ್ಲಿಯೂ ಬಿಕ್ಕಟ್ಟು ತಲೆದೋರಿರುವಾಗ ಯಾವುದೇ ಅಳುಕಿಲ್ಲದೇ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ಜನರ ಅಮೂಲ್ಯ ಜಲ ಸಂಪತ್ತನ್ನು ಪರಭಾರೆ ಮಾಡಲು ಕೃಷ್ಣ,ವಾಜಪೇಯಿ ಸರ್ಕಾರಗಳು ತುದಿಗಾಲಲ್ಲಿ ನಿಂತಿವೆ. ಈಗಲೂ ಸರ್ಕಾರ ನಾಲ್ಕು ವರ್ಷಗಳಾಗುತ್ತಿದ್ದರೂ ಆಥ ಇಲಾಖೆ, ನೀರು ಸರಬರಾಜು - ಒಳಚರಂ ಯಂತಹ ಖಾತೆಗಳನ್ನು ಕೃಷ್ಣ ತಮ್ಮ ಇರಿಸಿಕೊಂಡಿರುವುದು ಬ.ಕ. ಸೇವೆಯ ಆ ತವಕವನ್ನು ತೋರಿಸುತ್ತದೆ.

ನೀರಿನ ಖಾಸಗೀಕರಣವನ್ನು ಕೃಷಿ ರಂಗದ ಯಶಸ್ವಿಯಾಗಿ ಜಾರಿಗೊಳಿಸಲು ನೀರಾ ಸಹಕಾರಿ ಸಂಘಗಳನ್ನು ರಚಿಸಲು ವಿಶ್ವಬ್ಯಾ ನಿರ್ದೇಶಿಸಿದೆ. ಅದರ ನಿರ್ವಹಣೆ ಜನ ಮಾಡಬೇಕಂತೆ!. ಅದರಂತೆ ರಾಜ್ಯದಲ್ಲಿ ಸಂಸ್ಥೆಗಳನ್ನು ರಚಿಸಲಾಗುತ್ತಿದೆ. ಇದು ಭಾರತದ ಪ್ರಥಮ, ಭಾರಿ ತಮ್ಮ ವಿಶಿಷ್ಟ ಸಾಧನೆಯ ನೀರಾವರಿ ಸಚಿವ ಎಚ್.ಕೆ.ಪಾಟೀಲರು ಬೊ ಹೊಡೆಯುವುದಕ್ಕೆ ಏನರ್ಥವಿದೆ?

ನೀರು ಜನರ ಸ್ವತ್ತು. ಅದರ ಬಳಕೆ ಹಕ್ಕು. ಈ ಹಕ್ಕು ಕಿತ್ತುಕೊಳ್ಳದಂತೆ ಪ್ರ ಹೋರಾಟ ಅಗತ್ಯ.

ಅಮೆರಿಕಾದ ನಿಗೂಢ ಅಂಥ್ರಾಕ್ಸ್ ಅಂಚೆಯ ಮೂಲ ಪತ್ತೆ!

ಅಮೆರಿಕದ ಅಧ್ಯಕ್ಷ ಬುಶ್ ಗ್ಯಾಂಗ್‌ಗೆ ಒಳ್ಳೆಯ ದ್ದಿ! ಅವರು ಹಲವು ತಿಂಗಳುಗಳಿಂದ ಡುಕುತ್ತಿದ್ದ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು ವೆ! ಆದರೆ ಸಿಕ್ಕಿದ್ದು ಇರಾಕ್‌ನಲ್ಲಲ್ಲ. ಮೆರಿಕದ ಮೇರಿಲೆಂಡ್‌ನಲ್ಲಿ!

ಹೌದು! ಅಮೆರಿಕಾದ ೇರಿಲೆಂಡ್‌ನಲ್ಲಿ ರಕ್ಷಣಾ ಖಾತೆಯ ಕಾರಿಗಳಿಗೆ ಮಾರಕ ಅಂಥ್ರಾಕ್ಸ್ ಅಲ್ಲದೆ, ಪ್ಲೂ ್ಯಮೋನಿಯಾದಂತಹ ರೋಗಗಳನ್ನು ರಡಬಲ್ಲ ಮಾರಕ ಕ್ಟೀರಿಯಾಗಳು ಮುಂತಾದವು ಡ್ಡ ಪ್ರಮಾಣದಲ್ಲಿ ಲೆಂಡ್‌ನ ಫೋರ್ಟ್ ಡೆಟ್ರಿಕ್ ಬ ಅಮೆರಿಕನ್ ರಕ್ಷಣಾ ರದಲ್ಲಿ ಸಿಕ್ಕಿದೆ. ಹಿಂದೆ ಇಲ್ಲಿ ರಿಕನ್ ಸರ್ಕಾರಕ್ಕೆ ಸೇರಿದ, ಕ - ಶಸ್ತ್ರಾಸ್ತ್ರ ತಯಾರಿಕಾ ದ್ರವಿದ್ದು ಅದನ್ನು 1969ರಲ್ಲಿ ಚ್ಚಲಾಗಿತ್ತು. ಆದರೂ ಈ ಮಾರಕ ವಸ್ತುಗಳು ಣಾ ಖಾತೆಯ ತನಿಖಾ ಅಧಿಕಾರಿಗಳಿಗೆ ಸಿಕ್ಕಿವೆ. ಈ ವಸ್ತುಗಳನ್ನು ಯೋಜಿತವಾಗಿ ಶೇಖರಿಸಿ ಇಡಲಾಗಿದೆಯೆ ಅಥವಾ ಅಜಾಗರೂಕತೆಯಿಂದ ಬಿಟ್ಟು ಬಿಡಲಾಗಿದೆಯೆ ಎಂಬ ಬಗ್ಗೆ ತನಿಖಾ ಅಧಿಕಾರಿಗಳಿಗೆ ಯಾವುದೇ ಮಾಹಿತಿ ಸಿಗಲಿಲ್ಲ.

ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು ಸಿಕ್ಕಿವೆ! ಎಲ್ಲಿ?

ಶರತ್‌ಚಂದ್ರ

ಅಧಿಕಾರಿಗಳು ಹಲವು ತಿಂಗಳುಗಳ ಹಿಂದೆ ಅಮೆರಿಕವನ್ನು ನಡುಗಿಸಿದ್ದ ಅಂಥ್ರಾಕ್ಸ್‌ನ್ನು ಪೋಸ್ಟ್ ಮೂಲಕ ಕಳಿಸುವ ಕುಕೃತ್ಯಗಳಿಗೆ ಮೂಲವಸ್ತು ಎಲ್ಲಿಂದ ಬಂದಿರಬಹುದು ಎಂಬ ಬಗ್ಗೆ ತನಿಖೆ ಮಾಡುತ್ತಿದ್ದರು. ಫೋರ್ಟ್ ಡೆಟ್ರಿಕ್ ಸ್ಥಾವರದಿಂದ 8 ಕಿ.ಮೀ. ದೂರದಲ್ಲಿ ಅಂಥ್ರಾಕ್ಸ್ ತಯಾರಿಸುವ ಯಂತ್ರಗಳನ್ನು ಬಿಸಾಕಲಾಗಿದ್ದು, ಈ ಸ್ಥಾವರದ ಮಾಜಿ ಉದ್ಯೋಗಿಯೊಬ್ಬ ಅಂಥ್ರಾಕ್ಸ್ ಬೆದರಿಕೆ ಹಿಂದಿರುವ ವ್ಯಕ್ತಿಯಾಗಿರಬಹುದೆಂಬ ಗುಮಾನಿ ಮೇಲೆ ತನಿಖೆ ನಡೆಯುತ್ತಿತ್ತು. ಈಗ ರಕ್ಷಣಾ ಖಾತೆ ಈ ಸ್ಥಾವರದ 'ಶುದ್ದೀಕರಣ'ಕ್ಕೆ ಆಜ್ಞೆ ಮಾಡಿದ್ದು ಕೆಲಸ ಮುಂದುವರೆದಿದೆ. ಇದುವರೆಗಿನ 'ಶುದ್ದೀಕರಣ'ದ ಕೆಲಸದಲ್ಲಿ ಎರಡುವರೆ ಕೋಟಿ ಡಾಲರುಗಳ ವೆಚ್ಚದ ಎರಡು ಸಾವಿರ ಟನ್ ಮಾರಕ ವಸ್ತುಗಳು ಸಿಕ್ಕಿವೆ. ಇನ್ನೂ 50 ಸಿಲಿಂಡರುಗಳಲ್ಲಿ ಹಲವಾರು ಇನ್ನೂ ಪತ್ತೆಯಾಗಬೇಕಾದ ಅನಿಲ ಮತ್ತು ದ್ರವಗಳು ಇವೆ. ಹಲವಾರು ಸಿಲಿಂಡರುಗಳಲ್ಲಿ 'ಜೀವಂತ ಬ್ಯಾಕ್ಟೀರಿಯಾಗಳು' ತನಿಖಾಧಿಕಾರಿಗಳಿಗೆ ಸಿಕ್ಕಿದೆ.

ಇದೇ ಇರಾಕ್‌ನಲ್ಲಿ ಆಗಿದ್ದರೆ, ಇಡೀ ಜಗತ್ತಿಗೆ ಸುದ್ದಿಯಾಗುತ್ತಿತ್ತು. ಇರಾಕ್‌ನಲ್ಲಿ ಹಿಂದೆ ಜೈವಿಕ ಶಸ್ತ್ರಾಸ್ತ್ರಗಳಲ್ಲಿ ಬಳಸಲಾದ ಮಾರಕ ವಸ್ತುಗಳನ್ನು ಹೇಗೆ ಮತ್ತು ಎಷ್ಟು ನಾಶ ಮಾಡಲಾಗಿದೆ ಎಂಬ ಬಗ್ಗೆ ಸರಿಯಾದ ದಾಖಲೆ ಇಟ್ಟಿಲ್ಲ ಎಂದು ಅಮೇರಿಕ ಗದ್ದಲ ಮಾಡಿತ್ತು. ಅದೇ ಅಳತೆಗೋಲನ್ನು ಈಗ ಅಮೆರಿಕಕ್ಕೆ ಬಳಸಿದರೆ? ಅಲ್ಲದೆ ಅಂಥ್ರಾಕ್ಸ್‌ನ್ನು ಅಲ್‌ಕೈದ, ಇರಾಕಿ ಏಜಂಟ್‌ಗಳು ಕಳಿಸಿದ್ದಾರೆ ಎಂದೆಲ್ಲಾ



ಆಪಾದಿಸಲಾಗಿತ್ತು. ಈಗ ಅಮೆರಿಕದ್ದೇ ಜೈವಿಕ ಶಸ್ತ್ರಾಸ್ತ್ರಗಳ ಸ್ಥಾವರದಿಂದ ಬಂದದ್ದು ಎಂದು ಹೆಚ್ಚು ಕಡಿಮೆ ಒಪ್ಪಿದಂತೆ ಆಗಿದೆ. ○

ಬ್ರೂಕ್‌ಮನ್ ಅರ್ಜೆಂಟೈನಾದಲ್ಲಿ ಹೀಗೊಂದು ಕಾರ್ಮಿಕರ ಬಟ್ಟೆ ಫ್ಯಾಕ್ಟರಿ!

ಬ್ರೂಕ್‌ಮನ್ ಅರ್ಜೆಂಟಿನಾದ ಪ್ರಸಿದ್ಧ ಕ್ಟರಿ. 50 ವರ್ಷಗಳಿಂದ ಗಂಡಸರ ಸೂಟು ಾರಿಸುವುದಕ್ಕೆ ಹೆಸರಾದ್ದು. ಇತ್ತೀಚೆಗೆ ಅಲ್ಲಿ ಲೀಸರು ಮತ್ತು ಕಾರ್ಮಿಕರ ನಡುವೆ ಭಾರಿ ಗ. ಆದರೆ ನೀವು ಅಂದುಕೊಂಡಂತೆ ರ್ಕರು ಮುಷ್ಕರ ಹೂಡಿ, ಕೆಲಸ ಮಾಡುವ ರ್ಕರ ಮೇಲೆ ಧಾಳಿ ಮಾಡಿದ್ದಲ್ಲ. ಪೊಲೀಸರು ಮಾಡಬಯಸುವ ಕಾರ್ಮಿಕರಿಗೆ 'ರಕ್ಷಣೆ' ಟ್ಟಿದ್ದಲ್ಲ. ಕಾರ್ಮಿಕರು ಫ್ಯಾಕ್ಟರಿಯುಲ್ಲಿನ ತ್ರಗಳನ್ನು ನಾಶಮಾಡಿದ್ದಲ್ಲ. ಎಲ್ಲಾ ತಿರುವು ರುವು.

ಪೊಲೀಸರು ಕಾರ್ಮಿಕರು ಫ್ಯಾಕ್ಟರಿ ಒಳಗೆ ಗದಂತೆ ತಡೆಯುತ್ತಿದ್ದರು. ಕಾರ್ಮಿಕರು ನಾವು ಕ್ಟರಿ ಒಳಗೆ ಹೋಗಿ ಉತ್ಪಾದನೆ ಪುನಃ ಭಿಸುತ್ತೇವೆ ಎಂದು ಪಣ ತೊಟ್ಟಿದ್ದರು. ಲಿಸರು ಇದು ಆಗಗೊಡದಂತೆ ಮಾಡಲು ತ್ನಿಸಿ ವಿಫಲರಾದಾಗ, ಯಂತ್ರಗಳ ಮೇಲೆ ಮಾಡಿ ಅದನ್ನು ಹಾಳುಗೆಡವಿದ್ದರು. ತ್ರಗಳನ್ನು ನಾಶವಾಗದಂತೆ ತಡೆಯಲು ಕಾರ್ಮಿಕರು ಪ್ರಯತ್ನಸುತ್ತಿದ್ದರು. ಬ್ರೂಕ್‌ಮನ್ ಫ್ಯಾಕ್ಟರಿಯಲ್ಲಿನ ಈ ರಕ್ತ ಸಿಕ್ತ ಘಟನೆ. ಕಳೆದ ಒಂದು ವರ್ಷದಲ್ಲಿ ಅರ್ಜೆಂಟೈನಾ ರಾಜಧಾನಿ ಬ್ಯೂನಸ್ ಐರಿಸ್‌ನಲ್ಲಿ ಕಂಡುಕೇಳರಿಯದ ದಮನ ಚಕ್ರ ಪೊಲೀಸರು ಹರಿಯಬಿಟ್ಟರು. ಪೋಲಿಸರು ಫ್ಯಾಕ್ಟರಿ ಮತ್ತು ಯಂತ್ರಗಳನ್ನು ಕಾಯುತ್ತಿದ್ದ 58 ಕಾರ್ಮಿಕರನ್ನು ರಾತ್ರೋ ರಾತ್ರಿ ಎಳೆದು ಬಿಸಾಡಿ, ಅದನ್ನು ರಣರಂಗ ಮಾಡಿದ್ದರು ಪೋಲಿಸು ನಾಯಿ, ಮಿಷನ್ ಗನ್‌ಗಳ ಬೆಂಬಲದಿಂದ. ಪೋಲಿಸರ ಸರ್ಪಗಾವಲು ಹಾದು ಫ್ಯಾಕ್ಟರಿ ಒಳಗೆ 50 ಮಹಿಳಾ ಕಾರ್ಮಿಕರು ಪ್ರವೇಶಿಸಲು ಪ್ರಯತ್ನಿಸಿದರು. ಅವರು ಪೋಲಿಸರ ನಾಯಿಗಳನ್ನು ತಳ್ಳಿಕೊಂಡು ಫ್ಯಾಕ್ಟರಿಗೆ ನುಗ್ಗುತ್ತಿದ್ದಂತೆ ಪೋಲಿಸರ ಪ್ರಹಾರ ಆರಂಭವಾಯಿತು. ಅಶ್ರುವಾಯು, ಜಲ ಫಿರಂಗಿ, ರಬ್ಬರ್ ಬುಲೆಟ್, 'ಲೈವ್' ಬುಲೆಟ್‌ಗಳನ್ನು ಕಾರ್ಮಿಕರ ಮೇಲೆ ಹರಿಯಬಿಡಲಾಯಿತು. ಕಾರ್ಮಿಕರ ಬೆಂಬಲಕ್ಕೆ ಬಂದಿದ್ದ ನಿರುದ್ಯೋಗಿ ಯುವಕರು, ಪ್ರಸಿದ್ಧ 'ಮೇಪ್ಲಾಜಾರ ತಾಯಂದಿರು' (70ರ ದಶಕದಲ್ಲಿ ಮಿಲಿಟರಿ ದಬ್ಬಾಳಿಕೆಯಲ್ಲಿ ಕಾಣೆಯಾದ ಮಕ್ಕಳ ತಾಯಂದಿರು ಚಳುವಳಿ) ಮೇಲೆ ತೀವ್ರ ಹಲ್ಲೆಯಾಯ್ತು.

ಯಾಕೀ ಹಲ್ಲೆ? ಇನ್ನೂರು ವರ್ಷಗಳ ಹಿಂದೆ ಬ್ರಿಟನ್‌ನಲ್ಲಿ ಕಾರ್ಮಿಕರು ಜವಳಿ ಕಾರ್ಖಾನೆಯಲ್ಲಿ ಬಳಸಲಾದ ಯಂತ್ರಗಳನ್ನು ತಮ್ಮ ಕೆಟ್ಟ ಪರಿಸ್ಥಿತಿಗೆ ಕಾರಣ ಎಂದು ತಪ್ಪಾಗಿ ತಿಳಿದು ಯಂತ್ರಗಳನ್ನು ನಾಶಮಾಡುವ ಚಳುವಳಿ ಹೂಡಿದ್ದರು. ಈಗ ಸರ್ಕಾರ ಮತ್ತು ಸರ್ಕಾರಿ ಯಂತ್ರವೇ ಯಂತ್ರಗಳ ನಾಶದಲ್ಲಿ ತೊಡಗಿದೆ ಏಕೆ?

ಇದಕ್ಕೆ ಕಾರಣ ಬ್ರೂಕ್‌ಮನ್ ಅಂತಿಂಥ ಫ್ಯಾಕ್ಟರಿ ಅಲ್ಲ. ಮೊದಲ ನೋಟಕ್ಕೆ ಅದು ಯಾವುದೋ ಬಟ್ಟೆ ಫ್ಯಾಕ್ಟರಿ ಥರ ಕಾಣ್ತದೆ. ನೂರಾರು ಮಹಿಳೆಯರು ಹೊಲಿಗೆ ಯಂತ್ರದ ಮೇಲೆ ಬಗ್ಗಿಕೊಂಡು, ಕಣ್ಣಲಿ ಕಣ್ಣಿಟ್ಟು ಬೆರಳಿನಲ್ಲಿ ನೂಲು ಆಡಿಸುತ್ತಾ ಹೊಲಿಯುತ್ತಾರೆ. ಇದರ ವಿಶೇಷವೆಂದರೆ ಇದು ಕಾರ್ಮಿಕರೇ ಸಂಪೂರ್ಣವಾಗಿ ನಡೆಸುತ್ತಿರುವ ಫ್ಯಾಕ್ಟರಿ. ಆದರೆ ಅಲ್ಲಿಯ ಹಿನ್ನೆಲೆ ಶಬ್ದದಲ್ಲಿ ವ್ಯತ್ಯಾಸವಿದೆ. ಯಂತ್ರಗಳ ಗುಡುಗುವ ಶಬ್ದ ಅಲ್ಲದೆ, ಬೊಲಿವಿಯನ್ ಜನಪದ ಹಾಡುಗಳು ಕೇಳಿಸುತ್ತದೆ. ಹಿರಿಯ ಕಾರ್ಮಿಕರು ಕಿರಿಯ ಕಾರ್ಮಿಕರಿಗೆ ಮೆಲುದನಿಯಲ್ಲಿ ಹೊಲಿಯುವ ಜಾಣ್ಮೆ ಹೊಸ ಹೊಲಿಗೆ ಹೇಳಿಕೊಡುವ ಶಬ್ಧ ಕೇಳಿಸುತ್ತದೆ. ಇವೆಲ್ಲವೂ ಹಿಂದೆ ಮಾಲಿಕರು ನಡೆಸುತ್ತಿದ್ದಾಗ ನಿಷಿದ್ಧವಾಗಿತ್ತು.

ಬ್ರೂಕ್‌ಮನ್ ಕಾರ್ಮಿಕರೇ ನಡೆಸುವ ಇಂತಹ 1200 ಫ್ಯಾಕ್ಟರಿಗಳಲ್ಲಿ ಒಂದು, ಕಳೆದ ಒಂದುವರೆ ವರ್ಷಗಳಿಂದ ಅರ್ಜೆಂಟೈನಾ ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದು, ಬೇರೆ ಬೇರೆ ಕಾರಣಗಳಿಗೆ ಮಾಲಿಕರು ಮುಚ್ಚಿದ ಅಥವಾ ಹಾಗೆ ಬಿಟ್ಟು ಹೋದ ಫ್ಯಾಕ್ಟರಿಗಳನ್ನು ಕಾರ್ಮಿಕರು ಸ್ವತಃ ನಡೆಸುತ್ತಿದ್ದಾರೆ. ಪ್ರತಿವಾರ ಒಂದು ಫ್ಯಾಕ್ಟರಿ ಈ ಪಟ್ಟಿಗೆ ಸೇರುತ್ತದೆ. ಟ್ರಾಕ್ಟರುಗಳಂಥ, ಐಸ್‌ಕ್ರೀಮ್, ಹೊಟೇಲು, ಲೋಹ, ಆಹಾರವಸ್ತು, ಕಾರು ಬಿಡಿಭಾಗಗಳು, ಪ್ರಿಂಟಿಂಗ್, ಬಟ್ಟೆಗಳವರೆಗೆ ಎಲ್ಲಾ ಥರದ ಫ್ಯಾಕ್ಟರಿಗಳನ್ನು ಕಾರ್ಮಿಕರು ನಡೆಸುತ್ತಿದ್ದಾರೆ. ಚೆನ್ನಾಗೇ ಲಾಭದಲ್ಲೇ ನಡೆಸುತ್ತಿದ್ದಾರೆ. ಇತ್ತೀಚೆಗೆ ಒಂದು ನಾಲ್ಕು - ತಾರಾ ಹೋಟೆಲು, ಸೂಪರ್ ಮಾರ್ಕೆಟ್, ಪ್ರಾದೇಶಿಕ ವಿಮಾನಯಾನ ಕಂಪನಿ ಈ ಪಟ್ಟಿಗೆ ಸೇರಿವೆ. ಬ್ರೂಕ್‌ಮನ್ ಬಟ್ಟೆ ಫ್ಯಾಕ್ಟರಿ ಮತ್ತು ಝಾನನ್ ಎಂಬ ಪಿಂಗಾಣಿ ಕಾರ್ಖಾನೆ ಈ ಚಳುವಳಿಯ ಪ್ರತೀಕಗಳಾಗಿವೆ. ಆದ್ದರಿಂದಲೇ



ಈ ತೀವ್ರ ದಾಳಿ. ತಾವು ನಡೆಸಲಾಗದ ಫ್ಯಾಕ್ಟರಿಗಳನ್ನು ಕಾರ್ಮಿಕರೇ ನಡೆಸುತ್ತಿದ್ದಾರಲ್ಲ ಎಂಬ ಕಸಿವಿಸಿ ಅರ್ಜೆಂಟೈನಾ ಆಳುವ ವರ್ಗಗಳಿಗೆ. ಹೆಚ್ಚಿನಕಡೆ ಕಾರ್ಮಿಕರು ಮುಕ್ತ ಸಭೆಗಳು ಆರಿಸಿದ ಸಮಿತಿಗಳು ಆಡಳಿತ ನಡೆಸುತ್ತಿವೆ.

'ನಾವು ಫ್ಯಾಕ್ಟರಿಗಳನ್ನು ನಡೆಸಬಲ್ಲೆವು ಎಂದು ತೋರಿಸಿದ್ದೇವೆ. ದೇಶವನ್ನೂ ನಾವು ನಡೆಸಬಹುದು ಎಂದು ಅವರಿಗೆ ಭಯ' ಸೆಲಿಯಾ ಮಾರ್ಟಿನೇಝ್ ಬ್ರೂಕ್‌ಮನ್ ಕಾರ್ಮಿಕನ ಉದ್ಗಾರ ಇಡೀ ಚಳುವಳಿಯ ತಿರುಳನ್ನು ಸಾರುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಅತ್ಯಂತ ನೂತನ ವಿಶಿಷ್ಟ ರೀತಿಯ ಚಳುವಳಿಗಳನ್ನು ಹುಟ್ಟುಹಾಕಿರುವ ದಕ್ಷಿಣ ಅಮೆರಿಕಾದಲ್ಲಿ ಆರಂಭವಾಗಿರುವ ಇನ್ನೊಂದು ವಿಶಿಷ್ಟ ಚಳುವಳಿ ಇದು. ●

ಅಂಕಿ ಸಂಖ್ಯೆ


'ಎಲ್ಲರಿಗೂ ಆರೋಗ್ಯ' ಎಲ್ಲಿಯವರೆಗೆ ಬಂದಿದೆ;

1978ರಲ್ಲಿ ಅಲ್ಮಾ ಆಲಾ ಎಂಬಲ್ಲಿ ವಿಶ್ವಸಂಸ್ಥೆ ಸದಸ್ಯ ದೇಶಗಳು ಸೇರಿ 2000 ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಎಂಬ ಘೋಷಣೆ ಅಂಗೀಕರಿಸಿದ್ದವು. 2000 ರ ಹೊತ್ತಿಗೆ ಏನಾಗಿದೆ?

...ಚಕ	1983 ಸ್ಥಿತಿ	ಗುರಿ	1998 ಸ್ಥಿತಿ
...ಶು ಮರಣ ಸಂಖ್ಯೆ	104	60	69
...ವರ್ಷದೊಳಗಿನ ಮರಣ	140	70	105
...ರಣ ಸಂಖ್ಯೆ ಪ್ರಮಾಣ	12.5	9.0	9.0
...ಾತೃ ಮರಣ ಸಂಖ್ಯೆ (...ಪ್ರತಿ ಲಕ್ಷ ಜನಗಳಿಗೆ)	450	200	410
...ಸಿಕೆ (ಬಿಸಿಜಿ)	-	ಶೆ.100	ಶೇ.75
...ದಾರಣೆ -ಟಿಟಿ	-	ಶೇ.100	ಶೇ.80
...ಸಿಕೆ-ಡಿಪಿಟಿ	-	ಶೇ.100	ಶೇ.73
...ರಬೇತಿ ಹೊಂದಿದ ಸುರಕ್ಷಿತ ಹೆರಿಗೆ	-	ಶೇ.100	ಶೇ.34

ಎಪ್ಪತ್ತೈದು ವರ್ಷಗಳ ಕೆಳಗೆ ಅಸ್ಪೃಶ್ಯತಾ ನಿವಾರಣೆ, ಎಂಬ ಗಾಂಧೀವಾದಿ ಸುಧಾರಣಾ ಕಾರ್ಯಕ್ರಮವೊಂದು ನಡೆಯುತ್ತಿರುವಾಗಲೇ ಕಾರಂತರು ಚೋಮ ಅಮಾನವೀಯವಾದ ಬದುಕು ಸಾಗಿಸಬೇಕಾಗಿಬಂದಿರುವುದರ ಮೂಲ ಭೂ ಸಮಸ್ಯೆಯಲ್ಲಿದೆ ಎಂದು ತೋರಿದರು. ಇತ್ಯರ್ಥವಾಗದ ಭೂ ಪ್ರಶ್ನೆಯನ್ನು ಎತ್ತಿ ತೋರುವ ಮಹತ್ವದ ಕೃತಿಯಿದು.





ಆರ್.ವಿ.ಭಂಡಾರಿ

'ಚೋಮನದುಡಿ' ಶಿವರಾಮಕಾರಂತರು ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆಯೇ ಬರೆದಂಥ ಒಂದು ಚಿಕ್ಕಕಾದಂಬರಿ. ಆ ವಾಸ್ತವಾದಿ ಕಾದಂಬರಿ ಪ್ರಸ್ತುತಪಡಿಸುವ ಸಮಸ್ಯೆ ಇಂದಿಗೂ ಪ್ರಶ್ನೆ ಕೇಳುತ್ತಲೇ ಇದೆ.

'ಚೋಮ, ಒಬ್ಬ ಅಸ್ಪೃಶ್ಯ. ದಕ್ಷಿಣ ಕನ್ನಡ ಜಿಲ್ಲೆಯ ಒಂದು ಹಳ್ಳಿಮೂಲೆ ಅವನ ಊರು. ಮಧ್ಯವಯಸ್ಸು ದಾಟಿ ಬದುಕಿರುವ ಒಬ್ಬ ಮಗಳನ್ನೊಳಗೊಂಡು ಐದು ಜನ ಮಕ್ಕಳ ತಂದೆ. ಒಡೆಯ ಸಂಕಪ್ಪಯ್ಯ ಎಂಬ ಬ್ರಾಹ್ಮಣ ಜಮೀನುದಾರನ ಜೀತದಾಳು.

ಒಮ್ಮೆ ಆತನಿಗೆ ಅಡವಿಯಲ್ಲಿ ಎರಡು ಎತ್ತಿನ ಕರು ಸಿಕ್ಕುತ್ತವೆ. ಅವನ್ನು ತಂದು ಸಾಕಿ ಕೊಳ್ಳುತ್ತಾನೆ. ಆತನಿಗೆ ಒಂದು ಚೂರು ನೆಲದ ಒಡೆಯನಾಗಬೇಕೆಂಬ ಇಚ್ಛೆ ಕುತ್ತಿಗೆಯವರೆಗೆ ಇದೆ. ಆದರೆ ಆತ ಅಸ್ಪೃಶ್ಯನಾಗಿದ್ದು, ಅಸ್ಪೃಶ್ಯರು ಗದ್ದೆ ಊಳಬಾರದು ಎಂಬುದು ನಿಯಮ. ತನ್ನ ಇಚ್ಛೆಯನ್ನು ತನ್ನ ಒಡೆಯ ಸಂಕಪ್ಪಯ್ಯರೊಡನೆ "ಇನ್ನೇನಿಲ್ಲ ಧನಿಗಳಿಗೆ ಇಷ್ಟೆಲ್ಲ ಒಕ್ಕಲುಮಕ್ಕಳಿದ್ದಾರೆ. ಈ ಚೋಮನಿಗೂ ಒಂದು ಹಾಳುಕೊಂಪೆಯನ್ನು ಗೇಣಿಗೆ ಕೊಟ್ಟಿದ್ದರೆ ನಿಮ್ಮ ಹೆಸರು ಹೇಳಿ ಬದುಕುತ್ತಿದ್ದೆ" ಅನ್ನುತ್ತಾನೆ.

ಆದರೆ ಹಾಗೆ ಮಾಡಲು ಸಂಕಪ್ಪಯ್ಯ ಒಪ್ಪಬಹುದಿತ್ತೇನೋ. ಆದರೂ ಅವರು ತನ್ನ ತಾಯಿಯನ್ನು ಕೇಳುತ್ತಾರೆ. ಅವಳು ಒಪ್ಪಳು. ಆದ್ದರಿಂದ ಅವರು ಚೋಮ ಇದುವರೆಗೆ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೂ ಇಲ್ಲ" ಅಂದರು. ಸಂಕಪ್ಪಯ್ಯನವರ ತಾಯಿ "ಅಬ್ಬಾ ಈ ಹೊಲೆಯರಿಗೆ ಬಂದ ಸೊಕ್ಕೇ" ಎಂದು ಶಪಿಸುತ್ತಿದ್ದರು. ಇದರಿಂದ ಚೋಮ ಹತಾಶನಾಗುತ್ತಾನೆ.

ಒಮ್ಮೆ ಚೋಮನ ಚಿಕ್ಕಮಗುವೊಂದು ಆಡಲು ಹೋದುದು ಕೆರೆಯಲ್ಲಿ ಬೀಳುತ್ತದೆ. ಅಲ್ಲಿಯೇ ದಂಡೆಯ ಮೇಲಿರುವ ಓರ್ವ ಬ್ರಾಹ್ಮಣ ತರುಣ ನೀರಿಗೆ ಹಾರಿ ಮಗುವನ್ನು ಬದುಕಿಸಲು ಮುಂದಾದರೆ ಅಲ್ಲಿಯ ಜನ ಅವನನ್ನು ತಡೆದು "ಅವನು ಹೊಲೆಯನಲ್ಲವೇ?" ಎಂದು ಕೇಳುತ್ತಾರೆ.

ಚೋಮನಿಗೆ ಹೊಲೆಯನ ಬಾಳ್ವೆಯ ಹುಣ್ಣು ಎಂಥದೆಂಬುದು ಆಗ ಸಂಪೂರ್ಣ ಅನುಭವವಾಯಿತು"

ಚೋಮನ ಮಗಳು ಬೆಳ್ಳಿ, ಘಟ್ಟದ ಮೇಲಿನ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗುತ್ತಾಳೆ. ಕಾರಣ ಚೋಮನು ಎಂದೋ ಮಾಡಿದ ಸಾಲ ತೀರಿಸಲೆಂದು. ಅಲ್ಲಿ ಅವಳು ಸಾವುಕಾರರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಹಾಗೂ ಮನೆಗೆ ಮರಳುತ್ತಾಳೆ. ಆದರೆ ಕೆಲ ದಿನಗಳ ನಂತರ ಮತ್ತೆ ಕೆಲಸಕ್ಕೆ ಕರೆಯಲು ಬಂದ ಮೇಸ್ತ್ರಿ ಮನ್ವೇಲನ ಒತ್ತಾಸೆಗೆ ಒಳಗಾಗುತ್ತಾಳೆ. ಇದೇ ಹೊತ್ತಿನಲ್ಲಿ ಬಂದ ಚೋಮ ಇದನ್ನು ನೋಡಿ ತೀರ ಹತಾಶನಾಗುತ್ತಾನೆ. ಕೋಪದ ಕೊನೆಗೇರಿದ ಆತ ಬೆಳ್ಳಿಯ ಕುತ್ತಿಗೆ ಹಿಚುಕಿ ಕೊಂದನೆಂದು ಹೊರಗೆ ತಳ್ಳಿ, ನೇಗಿಲನ್ನು ಪುಡಿ ಮಾಡಿ ಬೆಂಕಿಹಾಕಿ, ಎತ್ತುಗಳನ್ನು ಬೆಟ್ಟಕ್ಕೆ ಬಿಟ್ಟು ತಾನು ದುಡಿಯನ್ನು ಬಾರಿಸ ತೊಡಗುತ್ತಾನೆ.

"ಆ ದಿನದಂತೆ ದುಡಿಯನ್ನು ಆತನು ಈ ಜೀವಮಾನದಲ್ಲೇ ಬಾರಿಸಿರಲಿಲ್ಲ. ಇನ್ನು ಬಾರಿಸುವಂತಿಲ್ಲ. ತೀರಾ ಸ್ವಲ್ಪ ಹೊತ್ತು ಬಾರಿಸಿದ ನಿಜಕ್ಕೂ ಅದು ಪ್ರಳಯ ತಾಂಡವದ ನಿನಾದ! ದುಡಿಯ ಡಮ್ಮಡಮ್ಮ ನಿಂತಿತು. ಅದೂ ಒಮ್ಮೆಗೇ ನಿಂತಿತು.... ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ! ಎಲ್ಲವೂ ಇದ್ದಂತೆಯೇ ಇವೆ. ಆದರೆ ಚೋಮನಿಲ್ಲ!"

ಇದು ಕಥೆಯ ಒರಟಾದ ಸಾರಾಂಶ. ಆದರೆ ಕಾದಂಬರಿ ಮನಮಿಡಿಯುವಂತೆ ಚಿತ್ರಿತವಾಗಿದೆ. ಅಭಿವ್ಯಕ್ತಿ ಕಲಾತ್ಮಕವಾಗಿದೆ. ಇವೆಲ್ಲಕ್ಕೆ ಘನತೆಯನ್ನು ತಂದುಕೊಟ್ಟಿದ್ದು ಕಾದಂಬರಿ ತೆಗೆದುಕೊಂಡ ಸಮಸ್ಯೆ.

ಚೋಮನ ಬದುಕಿನ ದುರಂತ ಮುಖ್ಯವಾಗಿ ಎರಡು ಸಮಸ್ಯೆಗೆ ಸಂಬಂಧಿಸಿದೆ. ಒಂದು ಭೂಸಮಸ್ಯೆ ಎರಡನೆಯದು ಅಸ್ಪೃಶ್ಯತೆ. ಈ ಎರಡೂ ಸಮಸ್ಯೆ ಒಂದರೊಳಗೊಂದು ಬೆಸೆದುಕೊಂಡಿದೆ. "ಅವರು ಬೇಸಾಯಗಾರರಾಗಿ ಸ್ವತಂತ್ರರಾದರೆ ನಾಳೆ ನಾವು ನೇಗಿಲು ಹಿಡಿದರೆ ಸರಿ" ಎಂದುಕೊಳ್ಳುವ ಕಾಲ ಅದು. ನಮ್ಮ ಜಾತಿ ಶ್ರೇಣೀಕರಣಕ್ಕೊಳಪಟ್ಟ ಸಮಾಜದಲ್ಲಿ ಕೆಳಜಾತಿಗೆ ಇಳಿದಂತೆ ಅವರ ಸಾಂಪತ್ತಿಕ ಸ್ಥಿತಿಯೂ ಕ್ಷೀಣಿಸುತ್ತಲೇ ಹೋಗುತ್ತದೆ. ದಲಿತ ಜಾ… ಜೀತದವರು. ಸ್ವತಂತ್ರ ಜಮೀನಾ… ವೃತ್ತಿಯಾಗಲಿ ಇಲ್ಲದವರು. ಆದ್ದರಿಂದ … ಮುಟ್ಟಲೂ ಬಾರದ ಸ್ಥಿತಿಗೆ ತಳ್ಳಲ್ಪಟ್ಟಿ… ಹೀಗಾಗಿ ದಲಿತರಿಗೆ ಕಾಡುವ ಎರ… ಸಮಸ್ಯೆಯೆಂದರೆ ಅಸ್ಪೃಶ್ಯತೆ. ಇವೆ… ಸ್ವತಂತ್ರವಲ್ಲದಿದ್ದರೂ ಅಸ್ಪೃಶ್ಯತೆ ಒಂದು ಸಾಂ… ಸಂಗತಿಯಾಗುತ್ತದೆ. ಈ ಸಾಂಸ್ಕೃತಿಕ ಸಂಗತಿ… ಅಂದರೆ ಅಸ್ಪೃತೆಯ ಶಾಪವನ್ನು ಚೋಮನು… ಅದುವ ಮತಾಂತರದಿಂದ ಪರಿಹರಿಸಿಕೊಳ್ಳ… ತಾನು ತನ್ನದಾದ ಭೂಮಿ ಉಳಬೇಕು … ಉತ್ಕಟ ಇಚ್ಛೆಯಲ್ಲಿ ಹಾಗೆಯೇ ಅಸ್ಪೃಶ್ಯ… ಕಾರಣಕ್ಕೆ ತನಗೆ ಭೂಗಳಿಕೆ ಸಾಧ್ಯವಾ… ವ್ಯವಸ್ಥೆಯ ವಿರುದ್ಧವಾದ ಪ್ರತಿಭಟನೆಯಲ್ಲಿ … ಅಪ್ರಜ್ಞಾಪೂರಕವಾದ ಪ್ರತಿಭಟನೆ) ಚೋಮ… ಮತಾಂತರ ಹೊಂ… ಬಯಸುತ್ತಾನೆ. … ಆಗುವುದಿಲ್ಲ ಎನ್ನುವುದು … ಅಂದರೆ ಅಲ್ಲಿಯೂ ಚೋಮನಿಗೆ ಎದು… ಸಮಸ್ಯೆ ಭೂಸಮಸ್ಯೆಯೇ. ಇಷ್ಟಾ… ಭೂಸಮಸ್ಯೆ ಆಧಾರ, ಅಸ್ಪೃಶ್ಯತೆ ಅವ… ಎಂಬ ಕರಾರುವಕ್ಕಾದ ವಿಭಜನೆ ಇಲ್ಲಿಸ… ಧಾರ್ಮಿಕ ಎನ್ನುವ ಕ್ರಿಯೆ ಕೂಡ … ಶಕ್ತಿಯುತವಾದ ಅಡ್ಡಿಯೇ ಆದರೂ ಚೋ… ವರ್ಗ - ಜಾತಿಯ - ಪ್ರಗತಿಗೆ … ಅಡ್ಡಿಯಾಗುವುದು ಆರ್ಥಿಕ ಪರಾಧೀನತೆ…

ಎಪ್ಪತ್ತೈದು ವರ್ಷಗಳ ಕೆಳಗೆ ಅಸ್ಪೃ… ನಿವಾರಣೆ, ಎಂಬ ಗಾಂಧೀವಾದಿ ಸುಧಾ… ಕಾರ್ಯಕ್ರಮವೊಂದು ನಡೆಯುತ್ತಿರುವಾ… ಕಾರಂತರು ಚೋಮ ಅಮಾನವೀಯ…


ಪುಟ…

ಗಾಂಧಿ, ಬುದ್ಧರನ್ನು ಸೆನ್ಸಾರ್ ಮಾಡಿದರು

'ಯುದ್ಧ ಮತ್ತು ಶಾಂತಿ' ಸೆನ್ಸಾರ್ ಕತ್ತರಿಯಿಂದ ಬಿಡುಗಡೆ

ಫಿಲಂ ಒಂದು ಸೆನ್ಸಾರ್ ಆಗಿ ಬರುವುದು ಸುದ್ದಿಯಾಗುತ್ತದೆಯೇ? ಅದು ಡಾಕ್ಯುಮೆಂಟರಿ ಫಿಲಂ ಒಂದು. ಹೌದು! ಆನಂದ್ ಪಟವರ್ಧನ್ ಮಾಡಿದ ಪ್ರತಿ ಫಿಲಂಗೂ ಸಂಘ ಪರಿವಾರ ಮತ್ತು ಅದರ ಸರ್ಕಾರ ಅಡ್ಡಗಾಲು ಹಾಕಿವೆ. ಹಿಂದೆ, 'ರಾಮಕೇ ನಾಮ್' ಚಿತ್ರ ಪ್ರದರ್ಶನಕ್ಕೆ ಸಲ್ಲದ ನೆಪ ಒಡ್ಡಿ ನಿರ್ಬಂಧಗಳನ್ನು ಹೇರಿತ್ತು. ಅವರ ಇತ್ತೀಚಿನ ಫಿಲಂ 'ಯುದ್ಧ ಮತ್ತು ಶಾಂತಿ' ಸುಮಾರು ಒಂದುವರೆ ವರ್ಷಗಳ ಕೋರ್ಟ್ ಯುದ್ಧದ ನಂತರ ಯಾವುದೇ ಕತ್ತರಿ ಇಲ್ಲದೆ ಸೆನ್ಸಾರಾಗಿ ಆಚೆಗೆ ಬಂದಿದೆ. ಅದೂ ಕೋರ್ಟುಗಳು ಮಧ್ಯಪ್ರವೇಶಿಸಿದ ಮೇಲೆ.

'ಯುದ್ಧ ಮತ್ತು ಶಾಂತಿ' ಭಾರತ ಮತ್ತು ಪಾಕಿಸ್ತಾನಗಳ ಹುಚ್ಚು ಅಣ್ವಸ್ತ್ರ ಸ್ಪರ್ಧೆ ಮತ್ತು ಅದರ ಅಪಾಯಗಳ ಬಗ್ಗೆ ತೆಗೆದ ಒಂದು ಉತ್ತಮ ಡಾಕ್ಯುಮೆಂಟರಿ. ಭಾರತ, ಅಮೇರಿಕಾ, ಪಾಕಿಸ್ತಾನ, ಜಪಾನ್‌ಗಳಲ್ಲಿ ಈ ಬಗ್ಗೆ ಹಲವು ಜನರ ಇಂಟರ್‌ವ್ಯೂಗಳ ಮೇಲೆ ಆಧಾರಿತ ಚಿತ್ರ ಪ್ರಬಲವಾಗಿ ಮೂಡಿ ಬಂದಿದೆ.



ಡಾಕ್ಯುಮೆಂಟರಿ ಫಿಲಂ ಸಂಘ ಪರಿವಾರದವರನ್ನು ಹೆದರಿಸಬೇಕೆಂದರೆ?

'ಚಡ್ಡಿ ಅಧ್ಯಕ್ಷ' ಯುವ ಕೇಂದ್ರೀಯ ಫಿಲಂ ಸರ್ಟಿಫಿಕೇಟ್ ಬೋರ್ಡ್ (ಸಿಬಿಎಫ್‌ಸಿ) ಮೊದಲು 6 'ಕಟ್'ಗಳನ್ನು ಹೇಳಿತು. ಅದರ ಬಗ್ಗೆ ಅಪೀಲು ಮಾಡಿದಾಗ, ಇನ್ನೊಂದು 'ರಿವ್ಯೂ ಕಮಿಟಿ' 21 ಕಟ್‌ಗಳನ್ನು ಕೇಳಿತು. ಬೋರ್ಡ್ ಮೇಲಿರುವ ಟ್ರಿಬ್ಯೂನಲ್‌ಗೆ ಆನಂದ್ ಪಟವರ್ಧನ್ ಮನವಿ ಮಾಡಿದರು, ಅದು 'ಕಟ್'ಗಳನ್ನು ಎರಡಕ್ಕೆ ಇಳಿಸಿತು. ಆದರೆ ಫಿಲಂ ಬೋರ್ಡ್ ಟ್ರಿಬ್ಯೂನಲ್ ತೀರ್ಪು ಪ್ರಶ್ನಿಸಿ ಹೈಕೋರ್ಟಿಗೆ ಹೋಯಿತು. ಹೈಕೋರ್ಟ್ ಕೊನೆಗೂ ಫಿಲಂನ್ನು ಯಾವುದೇ 'ಕಟ್' ಇಲ್ಲದೆ ಪಾಸು ಮಾಡಿದೆ. ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸಾಂಸ್ಕೃತಿಕ ಹೋರಾಟಕ್ಕೆ ಸಿಕ್ಕ ಮಹತ್ವದ ವಿಜಯ. ಈ ಫಿಲಂ ಎಲ್ಲರೂ ನೋಡಲೇಬೇಕಾದ ಮಹತ್ವದ ಫಿಲಂ.

ಗಾಂಧಿ, ಬುದ್ಧರನ್ನು ಸೆನ್ಸಾರ್ ಮಾಡಿದರು

'ಯುದ್ಧ ಮತ್ತು ಶಾಂತಿ' ಡಾಕ್ಯುಮೆಂಟರಿಯಲ್ಲಿ ಸೆನ್ಸಾರ್ ಕಟ್‌ಗೆ ಗುರಿಯಾದದ್ದಾದರೂ ಏನು? ಗಾಂಧಿ ಬುದ್ಧರು!. ಹೌದು ಗಾಂಧಿಯನ್ನು ನಾಥೂರಾಂ ಗೋಡ್ಸೆ ಕೊಲೆ ಮಾಡಿದ್ದನ್ನು ತೋರಿಸಬಾರದಂತೆ. ಅದು ಧಾರ್ಮಿಕ ಗುಂಪೊಂದರ ಭಾವನೆಗಳಿಗೆ ಗಾಸಿ ಮಾಡುತ್ತದಂತೆ.

ಬುದ್ಧ ಮತ ಅನುಯಾಯಿ ದಲಿತ… ಅಣ್ವಸ್ತ್ರ ಸ್ಫೋಟಕ್ಕೆ 'ನಗುವ ಬುದ್ಧ' ಎಂದು ಹೆಸರಿಟ್ಟದ್ದರ ಬಗ್ಗೆ ರೋಷ ವ್ಯಕ್ತಪಡಿಸು… 'ಕಟ್'ಗೆ ಗುರಿಯಾದ ಇನ್ನೊಂದು ಸೀನ್…

ಇದಲ್ಲದೆ 'ಹಿಂದೂ ಬಾಂಬ್ ಮತ್ತು ಮುಸ್ಲಿಮ್ ಬಾಂಬ್' 'ತೆಹೆಲ್ಕಾ ಟೇಪ್' ಬಿಜೆಪಿ 'ಹಿಂದೂ ರ… ಮುಂತಾದ ಫಿಲಂನ ಘಟನಾವಳಿಯನ್ನು 'ಕಟ್' ಮಾಡುವಂತೆ ಫಿಲಂ ಬೋರ್ಡ್… ಕೇಳಿತ್ತು. ಅದೆಲ್ಲಾ ಕಟ್ ಮಾಡಿದ್ದರೆ ಫಿಲಂನಲ್ಲಿ ಏನೂ ಉಳಿಯುತ್ತಿರಲಿಲ್ಲ.

'ಯುದ್ಧ ಮತ್ತು ಶಾಂತಿ' ಚಿತ್ರದ ಒಂದು ದೃಶ್ಯ



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH